ಅಖಿಲ ಭಾರತ ಪತ್ರಿಕೆ
ಆಗಸ್ಟ್ 2025



# ಧರ್ಮ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ಇದ್ದಕಿದ್ದಂತೆ ಅತಿಷ್ಠೆಯಲಿಂದು ಬೆರಗಿನಾ ಬೆಡಗು ಘಟಿಸಿ
ಗವಸಿನಲಿ ಅವಿತ ಶುದ್ಧಾತಿಶುದ್ಧ ಭವ್ಯತೆಗೆ ಸೂತ್ರವಿರಿಸಿ
ಜೀವ–ಚೇತನದ ಸುಪ್ತ–ಗರ್ಭಕ್ಕೆ ಪ್ರಸವ ವೇದನೆಯ ಚಾಣ
ಅವನ ಕಣಸಿನಾ ಭವ್ಯ ತೇಜಗಳು, ಆಗಮಿಸಲಲ್ಲಿ ತಾಣ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 25)**

**ಅಖಿಲ ಭಾರತ ಪತ್ರಿಕೆ**

**ಆಗಸ್ಟ್ 2025**

ಸಂಪುಟ: 35 ಸಂಚಿಕೆ: 08

## ಪರಿವಿಡಿ

# ಧರ್ಮ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಧರ್ಮ ಎಂದರೇನು** 5
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಸನಾತನ ಧರ್ಮ** 19
ಅನು: ಡಾ॥ ಮಹಾದೇವ ಸಕ್ರಿ

**ಜೀವನ ಮತ್ತು ಧರ್ಮ** 38
ಅನು: ಶ್ರೀ ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದೋಪನಿಷತ್ತು** 53
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ‘ಉರ್ವಶಿ’** 59
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಧರ್ಮ ಎನ್ನುವದು ಭಾರತೀಯ ಸಂಸ್ಕೃತಿಯ ಮತ್ತು ಆಧ್ಯಾತ್ಮಿಕ ನೀತಿ ಮತ್ತು ಚಿಂತನಾ ಪಂಥಗಳ ಕೇಂದ್ರ ಬಿಂದುವಾಗಿದೆ. ಆದಾಗ್ಯೂ ಈ ಶಬ್ದವು ಬಹುತೇಕವಾಗಿ ಅನ್ಯಾರ್ಥಗಳಲ್ಲಿಯೇ ಪರಿಗಣಿಸಲ್ಪಟ್ಟಿದೆ. ಮಾನವನ ಅಸ್ತಿತ್ವದ ಆಯಾಮಗಳಲ್ಲಿ ಈ ಧರ್ಮವು ಬಹುತೇಕವಾಗಿ ರಹಸ್ಯಮಯವೂ ಜೊತೆಗೆ ಆಕರ್ಷಣೀಯ ವಿನ್ಯಾಸದ ಆಯಾಮಗಳಲ್ಲಿಯೇ ಅಧ್ಯಯನಗೊಳ್ಳುತ್ತ ಬಂದಿದೆ. ಧರ್ಮದ ಹಲವು ಆಯಾಮಗಳ ಮತ್ತು ಆಂತರ್ಯಗಳ ಮತ್ತು ಈ ವಿಷಯದಲ್ಲಿ ಭಾರತವು ವೈಶ್ವಿಕ(ಬ್ರಹ್ಮಾಂಡ)ದ ನಿಯತಿಯ ಸಲಿಲದಲ್ಲಿ ಮಾನವನ ಬದುಕಿಗೆ ರೂಪಿಸಿರುವ ಮತ್ತು ಈ ಸೃಷ್ಟಿಯ ಮೂಲ ಆಂತರ್ಯದ ಕುರಿತು ಈ ಸಂಚಿಕೆಯು ರೂಪಿಸಲ್ಪಟ್ಟಿದೆ. (ಎಐಎಮ್)

## ಸಂಪಾದಕೀಯ

ಯಾವುದೇ ಭಾಷೆಯ ಶಬ್ದಗಳಲ್ಲಿ ವ್ಯಾಖ್ಯಾನಿಸಲು ಸಾಧ್ಯವಿರದ ಸ್ವಯಂತತ್ತ್ವಕ್ಕೆ 'ಧರ್ಮ' ಎನ್ನುವ ಉದಾತ್ತ ವಿಶ್ವಾಸ ಭಾರತೀಯ ಚಿಂತನೆಗಳಿಗೆ ಆಧಾರವಾಗಿದೆ. ಭೂಮಿಯ ಬದುಕನ್ನು ಆಧರಿಸಿಕೊಂಡು ವಿಕಾಸವಾಗುತ್ತಿರುವ ಮಾನವನ ಜೀವನ ವಿಧಾನವು ಕೇವಲ ಈ ಭೂ ಬದುಕಿನ ಸೀಮಿತತೆಯಿಂದ ಮಾತ್ರವೇ ಪೂರ್ಣಗೊಳ್ಳುತ್ತಿಲ್ಲ ಎನ್ನುವದನ್ನು ಖಚಿತಪಡಿಸಿಕೊಂಡ ನಂತರದಲ್ಲಿ, ಅದರ ಮೂಲ ಏನಿರಬಹುದು? ಎಲ್ಲಿರಬಹುದು ಎನ್ನುವ ಪ್ರಶ್ನೆಗಳನ್ನು ಮುಂದಿಟ್ಟುಕೊಂಡೇ ಸಾಗಿದಾಗ, ಈ ವೈಶ್ವಿಕ (ಬ್ರಹ್ಮಾಂಡದ) ಅಸ್ತಿತ್ವವೇ ಎಲ್ಲಕ್ಕೂ ಮೂಲವಾಗಿದೆ ಎಂದು ಮನವರಿಕೆ ಮಾಡಿಕೊಂಡ. ಇದನ್ನು ಮಾತಿನಲ್ಲಿ ವರ್ಣಿಸಲಾಗದ, ಶಬ್ದಗಳಲ್ಲಿ ಪ್ರತಿಧ್ವನಿಸಲಾಗದ ಹಂತವಿದ್ದರೂ, ಅದರ ಭೂಮ ವ್ಯಾಪ್ತಿಯನ್ನು ಹಾಗು ಅದರ ಸ್ಪಂದನವನ್ನು 'ಧರ್ಮ' ಎನ್ನುವ ಅನುಭಾವದ ಹಂತದಲ್ಲಿ ಗ್ರಹಿಸಿಕೊಂಡನು. ನಿರಾಕಾರವಾಗಿದ್ದರೂ, ಅನಂತಾನಂತವಾಗಿದ್ದರೂ, ಸುವ್ಯಾಪ್ತತೆಯಲ್ಲಿ ಇದ್ದ ಸ್ಥಿತಿಯು ನಿಯತಿಯ ಪ್ರಕಾರವಾಗಿಯೇ, ದ್ರಷ್ಟಾರನ ನೋಟಕ್ಕೆ ಲಭ್ಯವಾಗುವಂತೆ ರೂಹು ಪಡೆದುಕೊಳ್ಳುತ್ತ, ಧರ್ಮದ ಸಾಕಾರವನ್ನು ಪ್ರಕಟಪಡಿಸಿ, ಜಗತ್ತಾಗಿ ವಿಕಾಸಗೊಳ್ಳುತ್ತ ಸಾಗಿತು. ಇದು, ಬ್ರಹ್ಮಾಂಡದ ಗೂಢ ಸಂರಚನೆಯ ಸೂತ್ರವಾಗಿ 'ಧರ್ಮ' ಸ್ವರೂಪ ಪಡೆದುಕೊಂಡಿದೆ.

ಧರ್ಮವನ್ನು ತಿಳಿದುಕೊಳ್ಳುವದು ಎಂದರೆ, ಬ್ರಹ್ಮಾಂಡದ ಆಂತರ್ಯದ ಜೊತೆಗೆ ಸಮಸ್ಪಂದಿಯಾಗುವದು ಎಂದರ್ಥವಿದೆ. ಇಲ್ಲಿ ವಿಶ್ವದ ಭೂಮತ್ವವಾಗಲೀ

ಅಥವಾ ವ್ಯಷ್ಠಿಯ ಸೀಮಿತ ವ್ಯಾಪ್ತಿಯಾಗಲೀ ಎರಡೂ ತಮ್ಮ ತಮ್ಮ ಸ್ಥಾನದಲ್ಲಿಯೇ ಅಂತರ್ನಿಹಿತವಾಗಿರುವ ನಿಯತಿಯ ಲೀಲೆಯ ಅಲೆಗಳಾಗಿರುತ್ತವೆ.

ಧರ್ಮವು ಪ್ರತಿಮೆಗಳನ್ನಾಗಲೀ ಅಥವಾ ಸಂಕೇತಗಳನ್ನಾಗಲಿ ಆಧರಿಸಿ ಜನ್ಮ ತಾಳುವದಿಲ್ಲ. ಆದರೆ ಪ್ರತಿಮೆಗಳು/ಸಂಕೇತಗಳು ಧರ್ಮದ ವಿಷಯಕ್ಕೆ ಸೂಕ್ಷ್ಮಾತಿಸೂಕ್ಷ್ಮ ಸಂವೇದನಗಳನ್ನೂ ಸಹಿತ ಪ್ರಚೋದನೆಯ ಹಂತಕ್ಕೆ ಕೊಂಡೊಯ್ಯುತ್ತ, ಮಾನವ–ಮಾನವನ ಮಧ್ಯೆಯೇ ಕಂದಕಗಳನ್ನು ನಿರ್ಮಿಸುತ್ತದೆ. ವಿಶಾಲ ಮನೋಭೂಮಿಕೆಯ 'ಧರ್ಮ'ವನ್ನೂ ಸಹಿತ, ವ್ಯಕ್ತಿಕೇಂದ್ರಿತವಾಗಿಸಿ 'ಮತ'ವನ್ನಾಗಿಸಿ ವಿಜೃಂಭಿಸಲು ಅವಕಾಶ ನಿರ್ಮಾಣವಾಗುತ್ತದೆ.

ಭಾರತೀಯ ಚಿಂತನಾ ವಿಧಾನದಲ್ಲಿ 'ಮತ' ಎನ್ನುವ ಕಲ್ಪನೆಯೇ ಇಲ್ಲ. ಧರ್ಮದ ವೈವಿಧ್ಯತೆಯನ್ನು ಅವಲಂಬಿಸಿ 'ಪಂಥ'ಗಳ ಸೃಷ್ಟಿಯಾಗಿವೆ. ಈ ಪಂಥಗಳೂ ಸಹಿತ 'ಧರ್ಮ'ದ ತಳಹದಿಯ ಮೇಲೆಯೇ ಸೃಷ್ಟಿಗೊಂಡಿರುವ ವಿನ್ಯಾಸಗಳಾಗಿವೆ. ಹೀಗಾಗಿಯೇ 'ಗೀತೆ'ಯು ಸರ್ವ ಮತಗಳಿಗೂ, ಪಂಥಗಳಿಗೂ ಹಾಗು ಸಿದ್ಧಾಂತಗಳಿಗೂ 'ಧಾರ್ಮಿಕ ಗ್ರಂಥ'ವಾಗಿದೆ. ಅದಕ್ಕೆ ಗೀತೆಯು ಸಾಕ್ಷಾತ್ 'ಭಗವಂತ'ನಿಂದಲೇ ರಚಿತವಾದದ್ದು ಎನ್ನುವದು ಹೃದಯದ ಸ್ಪಂದನವೇ ಆಗಿದೆ. ವಿಕಾಸದ ಹಂತಗಳಲ್ಲಿ, ಈ 'ಧರ್ಮ'ವು 'ಯುಗ ಧರ್ಮ'ವಾಗಿ, ಆಯಾ ಕಾಲದ ಮತ್ತು ಆಯಾ ಭೌಗೋಳಿಕ ಅಂಶಗಳನ್ನು ಆಧರಿಸಿಕೊಂಡು ತನ್ನ ಸ್ವರೂಪಕ್ಕೆ ಆಯಾಮಗಳನ್ನು ರೂಪಿಸಿಕೊಳ್ಳುತ್ತಾ ಬಂದಿದೆ.

ಯುಗ ಧರ್ಮಕ್ಕೆ ಅನುಗುಣವಾಗಿ ನಿರ್ಮಿತಿಗೊಂಡ 'ಸಂಕೇತ'ಗಳು ಕೇವಲ ಸಂಕೇತಗಳಾಗಿ ನಿಲ್ಲದೇ, ಮಾನವನ ಚಿಂತನಾ ವಿಕಾಸಕ್ಕೆ ಸೂಕ್ತವಾದ ಪಥವನ್ನು ನಿರ್ಮಿಸುತ್ತ ಬಂದಂತೆ, ಅಲ್ಲಲ್ಲಿ ಕುಸಿತಗೊಂಡು ಈ ಧರ್ಮದ ಉದಾತತ್ತೆಯ ಬದಲು ಅದರಿಂದ ಉದ್ಭವಗೊಂಡ ಸಂಕೇತಗಳೇ ಧರ್ಮದ ಸ್ವರೂಪದಲ್ಲಿ ಆರಾಧಿಸುವದರ ಜೊತೆಗೆ ಅದನ್ನೇ ಜನ ಸಾಮಾನ್ಯರೂ ಒಪ್ಪಬೇಕು ಎನ್ನುವ ಆಡಳಿತಾತ್ಮಕ ಧೋರಣೆಯ ಹೇರುವಿಕೆಯಿಂದಾಗಿ ಉದ್ಭವಗೊಂಡ ತಲ್ಲಣಗಳು, ಧರ್ಮದ ಮೂಲ ಉದ್ದೇಶಕ್ಕೇ ಆಘಾತ ತಂದೊಡ್ಡಿದವು.

ಪ್ರಚಲಿತ ಯುಗದಲ್ಲಿ, ಈ ರೀತಿಯ 'ಸಂಕೇತ'ಗಳ ವಿಜೃಂಭಣೆಯೇ ಕಾಣುತ್ತಿದ್ದು, ಇದೀಗ 'ಧರ್ಮ'ದ ಮೂಲಸ್ಪಂದವನ್ನು ಕಾಣಲು ಮಾನವನ ಹೃದಯ ತವಕಿಸುತ್ತಿದೆ. ಇದಕ್ಕೆ ಪರಿಹಾರವೆನ್ನುವಂತೆ, ಋಗ್ವೇದದ ಮೂಲಕ ದಾಖಲಾತಿಗೊಂಡಿರುವ ಧರ್ಮದ ಆಯಾಮಗಳ ಪುನರ್–ಅಳವಟಿಕೆಗೆ ಜಗತ್ತು ತವಕಿಸುತ್ತಿದೆ. ವೈಶ್ವಿಕ

ಸಂರಚನೆಯಲ್ಲಿ ನಮ್ಮ ಈ ಭೂಮಿಯು ಮಾತ್ರ ಹೊಂದಿರಬಹುದು ಎನ್ನಲಾದ ಜೀವ–ವೈವಿಧ್ಯತೆಯನ್ನು 'ಧರ್ಮ'ವು ಮಾತ್ರ ರಕ್ಷಿಸಬಲ್ಲದು ಎನ್ನುವದನ್ನು ಇಡೀ ಭೂಮಂಡಳವೇ ಮನಗಂಡಿದೆ. ಈ ಹಿನ್ನಲೆಯಲ್ಲಿ ಧರ್ಮದ ಪುನರ್–ವ್ಯಾಖ್ಯಾನ, ಮತಕ್ಕೂ ಧರ್ಮಕ್ಕೂ ಇರುವ ಸೂಕ್ಷ್ಮ ಅಂತರಗಳು, ಧರ್ಮ ಮತ್ತು ಮತದ ಪ್ರತಿಪಾದನೆಗೆ ರೂಪಿಸಲ್ಪಟ್ಟಿರುವ ಸಂಕೇತ/ಪ್ರತಿಮೆಗಳ ಬಗೆಗೆ ನಿಖರತೆಯ ಕುರಿತಾಗಿ ಜಿಜ್ಞಾಸೆ, ಮಂಥನ ನಡೆಯುತ್ತಿದೆ.

ಆಧುನಿಕ ವಿಜ್ಞಾನದ ಸಂಶೋಧನೆಗಳ ಕಾರಣದಿಂದಾಗಿ, ವೈಶ್ವಿಕ ಧರ್ಮದ ವ್ಯಾಪ್ತಿಯೂ ವಿಸ್ತಾರಗೊಳ್ಳುತ್ತಿದೆ. ಪ್ರಚಲಿತದಲ್ಲಿರುವ ಯುಗ ಧರ್ಮವನ್ನು ವಿಜ್ಞಾನದ ಸೂತ್ರಗಳು ನವೀನ ಆಯಾಮಗೊಳಿಸುತ್ತಿವೆಯೇ? ವಿಜ್ಞಾನ ಮತ್ತು ಆಧ್ಯಾತ್ಮದ ಆಯಾಮದಲ್ಲಿ ಸ್ಪಂದಿಸುತ್ತಿರುವ 'ಧರ್ಮ'ವು ಮನುಕುಲವನ್ನು ಭೂಮಿಯಿಂದ ಆರೋಹಣ ಪ್ರಕ್ರಿಯೆಯಲ್ಲಿ ನವೋನವೋನ್ಮೇಷ ಲೋಕಗಳ ಸಂಪರ್ಕವನ್ನು ಸಾಧಿಸುತ್ತಿದೆ. ಅದೇ ರೀತಿಯಲ್ಲಿ ಹೊಸಹೊಸ ಸವಾಲುಗಳನ್ನೂ ರೂಪಿಸುತ್ತಿದೆ.

ರಾಜ ಧರ್ಮದ ಆಯಾಮದಲ್ಲಿ ಅನುಶಾಸನವನ್ನು ರೂಪಿಸುತ್ತಿರುವ ಆಡಳಿತಾತ್ಮಕ ಧೋರಣೆಗಳು ಧರ್ಮದ ಮೂಲ ಸ್ವರೂಪವನ್ನೇ ಅಲ್ಲೋಲಕಲ್ಲೋಲಗೊಳಿಸುತ್ತ ತಲ್ಲಣಗಳನ್ನು ಸೃಷ್ಟಿಸುತ್ತಿವೆ. ಇಂತಹ ವಿಷಣ್ಣ ಸ್ಥಿತಿಯಲ್ಲಿ ಸಮತೋಲನವನ್ನು ಮೀರದಂತೆ ಜೀವನವನ್ನು ಗತಿ ತಪ್ಪದಂತೆ ಮುಂದೆ ತೆಗೆದುಕೊಂಡು ಹೋಗುವ ಸೂತ್ರವನ್ನು 'ಧರ್ಮ'ವು ಮಾನವನಿಗೆ ನಿಯತಿ ಒದಗಿಸಿದೆ.

ತತ್ತ್ವ ಪ್ರಧಾನವಾದದ್ದು ಧರ್ಮ; ವ್ಯಕ್ತಿತ್ವ ಪ್ರಧಾನವಾದದ್ದು ಮತ; ವ್ಯಕ್ತಿ ಪ್ರಧಾನವಾದದ್ದು ಪಂಥ. ವ್ಯಕ್ತಿಯ ಮೂಲಕವೇ ಅಭಿವ್ಯಕ್ತಗೊಂಡ ತತ್ತ್ವದ ರೂಪಾಂತರವು ಆಯಾ ಕಾಲದ ವಾಸ್ತವದ ಅವಶ್ಯಕತೆಯನ್ನು – ಒಮ್ಮೊಮ್ಮೆ ಅನಿವಾರ್ಯತೆಯನ್ನು – ಅವಲಂಬಿಸಿಕೊಂಡು ರೂಪಾಂತರದೊಡನೆ ಅನುಷ್ಠಾನಿ–ಸಲ್ಪಡುತ್ತದೆ. ಆದರೆ ಪರಿವರ್ತನೆ ಎನ್ನುವದು ನಿಸರ್ಗದ ಸಹಜ ನಿಯಮ; ನಿಯತಿಯೂ ಹೌದು. ಹೀಗಾಗಿ ವ್ಯಕ್ತಿ ಪ್ರಧಾನವಾಗಿ ರೂಪುಗೊಂಡ ಸಂಗತಿಗಳು, ಕ್ರಮೇಣ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಪರಿವರ್ತನಗೊಳ್ಳುತ್ತಿರುತ್ತದೆ. ಕಾಲಕ್ರಮೇಣ ಈ ವ್ಯಕ್ತಿತ್ವವೂ ಕಾಲದ ಪರೀಕ್ಷೆಯಲ್ಲಿ ಜಯಶಾಲಿಯಾದರೆ ಅದು ತತ್ತ್ವ ಪ್ರಧಾನದ ಹಿನ್ನೆಲೆಯಲ್ಲಿ ಧರ್ಮವಾಗುತ್ತದೆ. ಇದು ಸಾಮಾಜಿಕ ಹಂತದಲ್ಲಿ ನಡೆಯುವ ಅತೀ ಸರಳ ಘಟನೆಯೊಂದು ವಿಕಸನದ ಹಂತದಲ್ಲಿ ಮೌಲ್ಯವಾಗಿ ಪರಿವರ್ತನಗೊಳ್ಳುತ್ತ ಧರ್ಮದ ಆಯಾಮ ಪಡೆದುಕೊಳ್ಳುತ್ತದೆ. (ಪಿಪಿಕೆ)

# ಧರ್ಮ ಎಂದರೇನು

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

**ಧರ್ಮ ಪದದ ಅರ್ಥ**

ಧರ್ಮ = devoir (ಕರ್ತವ್ಯ)

ಧರ್ಮ ಪದದ ಅರ್ಥ Devoir (ಕರ್ತವ್ಯ) ಎಂದು ಹೇಳಲು ಸಾಧ್ಯವಿಲ್ಲ. ಗೀತೆಯ ಬೋಧನೆಯನ್ನು ತಪ್ಪಾಗಿ ಅರ್ಥಮಾಡಿಕೊಂಡಿರುವ ಆಂಗ್ಲರು ಇದಕ್ಕೆ ಅನಾಸಕ್ತಿಯಿಂದ ತನ್ನ ಕರ್ತವ್ಯವನ್ನು ನಿರ್ವಹಿಸುವಿಕೆ ಎಂಬ ಅರ್ಥವನ್ನು ನೀಡುವರು. ತನ್ನ ಮೂಲಭೂತ ಸ್ವಭಾವದ ನಿಯಮವೇ ಧರ್ಮ ಎನ್ನುವದು ಗೀತೆ ಅಥವಾ ಸ್ವಭಾವದ ಆಡಳಿತದಲ್ಲಿ ನೆರವೇರುವ ಕ್ರಿಯೆ ಎಂದೂ ಸಹ ವಿವರಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/114**

**ಧರ್ಮ ಪದದ ವಿಸ್ತೃತ ಅರ್ಥ**

ಗೀತೆಯ ಬೋಧನೆಯು ಇತರ ವಿಶಿಷ್ಟ ಬೋಧನೆಗಳು ಮತ್ತು ಆಯಾಮಗಳಿಗಿಂತಲೂ ಹೆಚ್ಚು ವಿಶ್ವವ್ಯಾಪಿ ಮತ್ತು ಸಂಕೀರ್ಣವಾದುದಾಗಿದೆ. ಆದುದರಿಂದ ಅದರಲ್ಲಿ ಈ ವಿಷಯಗಳು ಹೆಚ್ಚು ವಿಶಾಲವಾದ ಅರ್ಥವನ್ನು ಪಡೆದುಕೊಳ್ಳುವವು. ಒಗ್ಗೂಡಿಸುವಿಕೆಗೆ ಸರ್ವವನ್ನೂ ಆಲಂಗಿಸುವ ವೇದಾಂತದ ಏಕತ್ವವು ಇಲ್ಲಿದೆ. ಇದರ ಮೂಲಕ ತನ್ನಲ್ಲೇ ಎಲ್ಲವನ್ನೂ ಆತ್ಮವು ವೀಕ್ಷಿಸುವದು ಮತ್ತು ಎಲ್ಲದರಲ್ಲೂ ತನ್ನನ್ನು ಕಾಣುವದು ಅಷ್ಟೇ ಅಲ್ಲ. ಎಲ್ಲಾ ಸತ್ತೆಗಳಲ್ಲೂ ತಾನು ಜೊತೆಗೂಡಿ ಒಂದಾಗುವದು. ಒಂದು ಉನ್ನತ ದಿವ್ಯ ಅರ್ಥದ ಕಡೆಗೆ ಎಲ್ಲಾ ಮಾನವ ಸಂಬಂಧಗಳನ್ನು ಕರೆದುಕೊಂಡು ಹೋಗುವದೇ ಧರ್ಮವಾಗಿದೆ. ಈ ಕ್ರಿಯೆಯು ದೈವವನ್ನು ಅರಸುತ್ತಿರುವವನು ಜೀವಿಸಿರುವ ಇಡೀ ಸಮುದಾಯವನ್ನು ಒಗ್ಗೂಡಿಸಿರುವ ದೃಢೀಕೃತ ನೈತಿಕ, ಸಾಮಾಜಿಕ ಮತ್ತು ಮತೀಯ ನಿಯಮದಿಂದ ಪ್ರಾರಂಭವಾಗುವದು. ಬ್ರಹ್ಮ ಚೇತನದ ಬಗ್ಗೆ ಅದಕ್ಕೆ ತಿಳಿಸುವದರ ಮೂಲಕ ಅದನ್ನು ಮೇಲೇರಿಸುವದು. ಏಕತ್ವದ ನಿಯಮ, ಸಮತ್ವ, ಸ್ವತಂತ್ರತೆಯನ್ನು ಅದು ನೀಡುವದು. ಅಷ್ಟೇ ಅಲ್ಲ ಅಪೇಕ್ಷೆರಹಿತ, ದೈವೀ ನಿಯಮಿತ ಕ್ರಿಯೆ, ದೈವೀ ಜ್ಞಾನ ಮತ್ತು ಆತ್ಮಜ್ಞಾನದ ಸಾಕ್ಷಾತ್ಕಾರವನ್ನು ಸಹ ಅನುಗ್ರಹಿಸುವದು. ಜೊತೆಗೆ ಎಲ್ಲಾ

ಕ್ರಿಯೆ ಎಲ್ಲಾ ಸ್ವಭಾವವನ್ನು ಅದು ತನ್ನ ಕಡೆ ಸೆಳೆದು, ಅದನ್ನು ದಿವ್ಯ ಸತ್ತೆ ಮತ್ತು ದಿವ್ಯ ಚೇತನದ ಕಡೆ ಕರೆದುಕೊಂಡು ಹೋಗುವದು. ದೈವೀ ಪ್ರೇಮವನ್ನು ಪರಮೋನ್ನತ ಶಕ್ತಿ ಮತ್ತು ಜ್ಞಾನ ಹಾಗೂ ಕ್ರಿಯೆಯ ಕಿರೀಟವೆಂಬುದಾಗಿಯೂ ತೋರ್ಪಡಿಸುವದು. ದೈವೀ ಸಹಭಾಗಿತ್ವ ಅಥವಾ ಸಂಘದ ಚಿಂತನೆಯ ಮೂಲದಲ್ಲಿದೆ, ದೈವೀ ಪ್ರೇಮ ಮತ್ತು ದೈವದ ಅರಸುವಿಕೆಯಲ್ಲಿನ ಪರಸ್ಪರ ನೆರವು ಮತ್ತು ಸಹಚರತ್ವದ ಕಲ್ಪನೆ. ಗೀತೆಯು ಪ್ರೇಮ ಮತ್ತು ಆರಾಧನೆಯ ಮೂಲಕ ದೈವವನ್ನು ಅರಸುವಿಕೆಯ ಬಗ್ಗೆ ನುಡಿದಾಗ ಈ ಭಾವನೆಯು ಹೊರಹೊಮ್ಮುವದು. ಆದರೆ ಈ ಬೋಧನೆಯ ನೈಜ ಸಂಘವು ಇಡೀ ಮಾನವತೆಯಾಗಿದೆ... ಸಮಸ್ತ ಪ್ರಪಂಚವು ಈ ಧರ್ಮದ ಕಡೆ ಚಲಿಸುತ್ತಿದೆ, ಪ್ರತಿಯೊಬ್ಬ ಮಾನವನು ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಚಲಿಸುತ್ತಿರುವನು. – "ಪ್ರತಿಯೊಂದು ಹಾದಿಯಲ್ಲೂ ಜನರು ನನ್ನ ಪಥದಲ್ಲೇ ಸಾಗುತ್ತಿರುವರು" – ಮತ್ತು ಭಗವಂತನನ್ನು ಅರಸುತ್ತಿರುವವನು, ತನ್ನನ್ನು ಎಲ್ಲರೊಳಗೆ ಒಂದಾಗಿಸಿ (ಭ.ಗೀ.4.11), ಅವರ ಸಂತಸ, ದುಃಖ ಮತ್ತು ಅವರ ಸಮಸ್ತ ಜೀವನವನ್ನು ತನ್ನದಾಗಿಸಿಕೊಂಡು, ಎಲ್ಲಾ ಸತ್ತೆಗಳೊಂದಿಗೆ ಈಗಾಗಲೇ ಸೇರಿರುವ ಮುಕ್ತರು, ಮಾನವತೆಯ ಜೀವನದಲ್ಲಿ ಜೀವಿಸುತ್ತಿರುವರು, ಮಾನವತೆಯಲ್ಲಿನ ಏಕ ಆತ್ಮಕ್ಕಾಗಿ, ಎಲ್ಲಾ ಸತ್ತೆಗಳಲ್ಲಿನ ಭಗವಂತನಿಗಾಗಿ ಜೀವಿಸುತ್ತಿರುವರು. ಲೋಕ ಸಂಗ್ರಹಕ್ಕಾಗಿ ಕ್ರಿಯಾಶೀಲರಾಗಿರುವರು. ಎಲ್ಲರನ್ನೂ ಅವರವರ ಧರ್ಮದಲ್ಲಿ ಉಳಿಸಲು, ಧರ್ಮಕ್ಕಾಗಿ, ಅದರ ಎಲ್ಲಾ ಹಂತಗಳಲ್ಲಿ ಜನರ ವೃದ್ಧಿಯನ್ನು ಪೋಷಿಸಲು (ಭ.ಗೀ.7.21 । ಭ.ಗೀ.7.22 । ಭ.ಗೀ.7.23 । ಭ.ಗೀ.7.24 । ಭ.ಗೀ.7.25) ಮತ್ತು ದಿವ್ಯತ್ವದ ಕಡೆಗಿನ ಎಲ್ಲಾ ಪಥಗಳಲ್ಲಿ ಅವರನ್ನು ರಕ್ಷಿಸಲು ಮುಕ್ತರು ಶ್ರಮಿಸುತ್ತಿರುವರು. ಇಲ್ಲಿಯ ಅವತಾರವು ಕೃಷ್ಣನ ನಾಮ ಮತ್ತು ರೂಪಗಳಲ್ಲಿ ಪ್ರಕಟವಾಗಿದ್ದರೂ ಆತನ ಈ ಮಾನವ ರೂಪಕ್ಕೆ ಒತ್ತು ನೀಡುವದಿಲ್ಲ. ಅದರೆ ಅದು ಪ್ರತಿನಿಧಿಸುವ ದಿವ್ಯತ್ವವಾದ ಪುರುಷೋತ್ತಮನಿಗೆ ಪ್ರಾಶಸ್ತ್ಯವನ್ನು ನೀಡಲಾಗಿದೆ; ಎಲ್ಲಾ ಅವತಾರಗಳು ಆತನ ಮಾನವ ಜನ್ಮವೇ ಆಗಿದ್ದು, ಮಾನವರು ಆರಾಧಿಸುವ ಪರಮೋತ್ತಮನ ರೂಪಗಳು ಮತ್ತು ನಾಮಗಳ ಚಿತ್ರಗಳಾಗಿವೆ. ನೈಜ ಮುಕ್ತತೆ ಮತ್ತು ನೈಜ ಜ್ಞಾನವನ್ನು ತಲುಪಲು ಮಾನವನು ಅನುಸರಿಸಬೇಕಾದ ಹಾದಿಯು ಶ್ರೀಕೃಷ್ಣನ ಪಥವೆಂದು ಇಲ್ಲಿ ಘೋಷಿಸಲಾಗಿದೆ. ಆದರೆ ಅದು ಎಲ್ಲಾ ಪಥಗಳನ್ನು ಒಳಗೊಂಡಿದೆ ಯಾವುದನ್ನೂ ದೂರ ಸರಿಸಿಲ್ಲ. ಏಕೆಂದರೆ ದಿವ್ಯತೆಯು ಎಲ್ಲಾ ಅವತಾರಗಳು, ಎಲ್ಲಾ ಬೋಧನೆಗಳು ಮತ್ತು ಎಲ್ಲಾ ಧರ್ಮಗಳನ್ನು ತನ್ನ ವಿಶ್ವಾತೀತತೆಯೊಳಗೆ ಹೊಂದಿದೆ.

*

## ನಿರಂತರ ಮತ್ತು ಪುರಾತನ

ನಿರಂತರವಾದುದು ಮತ್ತು ಪುರಾತನವಾದುದೆರಡೂ ಒಂದೇ ಅಲ್ಲ. ನಿರಂತರವಾದುದು ಎಲ್ಲಾ ಕಾಲಗಳಿಗೂ ಸಂಬಂಧಿತವಾಗಿದೆ. ಭೂತ, ವರ್ತಮಾನ ಮತ್ತು ಭವಿಷ್ಯತ್ತಿನ ಆಚೆಗೆ ಯಾವುದು ಇರುವದೋ, ಎಲ್ಲಾ ಬದಲಾವಣೆಗಳಲ್ಲೂ ಅವಿಭಾಜ್ಯ ಮುಂದುವರಿಕೆಯಾಗಿ ಯಾವುದು ಇರುವದೋ, ಮರ್ತ್ಯತೆಯಲ್ಲಿನ ಅಮರ್ತ್ಯತೆಯಾಗಿ ನಾವು ಯಾವುದನ್ನು ಕಾಣುವೆವೋ – ಅದೇ ನಿರಂತರತೆ. ಭಾರತದ ಮೂಲಭೂತ ಚಿಂತನೆಯು ಅತ್ಯಂತ ಪುರಾತನವಾದುದೆಂಬ ಕಾರಣಕ್ಕೆ ನಾವು ಅದನ್ನು ನಿರಂತರ ಧರ್ಮ ಅಥವಾ ನಿರಂತರ ಸತ್ಯವೆಂದು ಕರೆಯುವದಿಲ್ಲ. ಈ ಚಿಂತನೆಯು ನಿರಂತರವಾದುದು. ಏಕೆಂದರೆ ಇದು ಆತ್ಮ ಸಾಕ್ಷಾತ್ಕಾರದಿಂದ ಪಡೆದಿರುವ ಆತ್ಮ–ಜ್ಞಾನವಾಗಿದೆ. ನಿರಂತರ ಜ್ಞಾನವನ್ನು ಆಧರಿಸಿರುವದರಿಂದ ಈ ಧರ್ಮವು ನಿರಂತರವಾಗಿದೆ. ಕಾಲಾನುಕ್ರಮಣಿಕೆಗೆ ಹೊಂದಾಣಿಕೆಯಾಗುವ ನಿರಂತರತೆಯ ಒಂದು ರೂಪ ಮಾತ್ರವಾಗಿದೆ ಪುರಾತನತೆ.

**ಬೆಂಗಾಲಿ ಬರಹಗಳು: 214**

## ಭಾರತ ಧರ್ಮದ ವೃಕ್ಷ

ಅಸಂಖ್ಯಾತ ಕೊಂಬೆಗಳು ಮತ್ತು ಟೊಂಗೆಗಳಿಂದ ವಿಜೃಂಭಿಸುತ್ತಿರುವ ಅಗಾಧ ವೃಕ್ಷವಾಗಿದೆ ನಮ್ಮ ಧರ್ಮ. ಅತ್ಯಂತ ಆಳವಾದ ಜ್ಞಾನವನ್ನು ಪ್ರವೇಶಿಸಿದೆ ಅದರ ಬೇರುಗಳು; ಕ್ರಿಯೆಯ ಕ್ಷೇತ್ರದಲ್ಲಿ ಬಹಳ ದೂರದವರೆಗೂ ಅದರ ರೆಂಬೆಗಳು ಹರಡಿದೆ. ಗೀತೆಯಲ್ಲಿ ಸೂಚಿಸಲಾಗಿರುವ ಅಶ್ವತ್ಥ ವೃಕ್ಷಕ್ಕೆ ಬೇರುಗಳು ಮೇಲುಗಡೆ ಇರುವದು ಮತ್ತು ರೆಂಬೆಗಳು ಕೆಳ ಭಾಗದಲ್ಲಿ ಇರುವದು. ಈ ಧರ್ಮವು ಜ್ಞಾನದ ಆಧಾರವನ್ನು ಹೊಂದಿರುವದಲ್ಲದೆ ಕ್ರಿಯೆಯನ್ನು ಪ್ರಚೋದಿಸುವದು. ಈ ವಿಸ್ತಾರವಾದ ಮರದ – ಮಹಲಿನ ತಳಹದಿ ಮೋಹದ ಅಂಟಿನಿಂದ ಮುಕ್ತವಾಗಿದೆ; ಕ್ರಿಯಾಶೀಲತೆಯೇ ಅದರ ಗೋಡೆಗಳು ಮತ್ತು ಮೇಲ್ಛಾವಣಿ, ವಿಮುಕ್ತಿಯೇ ಅದರ ಶಿಖರ ಮತ್ತು ಆಧಾರ ಸ್ತಂಭ. ಹಿಂದೂ ಧರ್ಮದ ಈ ವೃಕ್ಷ–ಮಹಲಿನ ಮೂಲಕ ಮಾನವತೆಯು ಸಂಪೂರ್ಣ ಜೀವನವು ಆಶ್ರಯವನ್ನು ಪಡೆದಿದೆ.

**ಬೆಂಗಾಲಿ ಬರಹಗಳು: 57**

## ಧರ್ಮ ಮತ್ತು ಯುಗಗಳು

ಪುರಾತನ ಹಿಂದೂ ಚಿಂತನೆಯ ಪ್ರಕಾರ, ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವ–ಧರ್ಮವನ್ನು ನಿಷ್ಠೆಯಿಂದ ಅನುಸರಿಸುವದರಿಂದ, ತನ್ನ ಸ್ವಭಾವದ ನೈಜ ನಿಯಮ ಮತ್ತು ರೂಢಿಗಳಿಗೆ ಅನುಗುಣವಾಗಿ ಇರುವದರಿಂದ ತನ್ನಂತೆಯೇ ಇರುವವರ ಸ್ವಭಾವವನ್ನು ಪಾಲಿಸುವದರಿಂದ ಮತ್ತು ಇದೇ ರೀತಿಯೇ ಗುಂಪಿನ ಸತ್ತೆಯು ಸಾವಯವ ಸಾಮೂಹಿಕ ಜೀವನವನ್ನು ಅನುಸರಿಸುವದರಿಂದ ವಿಶ್ವದ ಮಾನವ ಜೀವನವು ಸುಸ್ಥಿತಿಯಲ್ಲಿ ಸಂರಕ್ಷಿತವಾಗಿರುವದು. ತಮ್ಮದೇ ಆದ ಧರ್ಮವನ್ನು ವಿಕಸಿತಗೊಳಿಸಿಕೊಂಡಿವೆ, ಕುಟುಂಬ, ವಂಶ, ಜಾತಿ, ವರ್ಗಗಳು ಅಷ್ಟೇ ಅಲ್ಲ ಸಾಮಾಜಿಕ, ಮತೀಯ, ಕೈಗಾರಿಕೆ, ಸಮುದಾಯಗಳು, ರಾಷ್ಟ್ರ, ಜನರು ಮತ್ತಿತರ ಸಾವಯುವ ಗುಂಪುಗಳ ಸತ್ತೆಗಳು. ಆ ಧರ್ಮವನ್ನು ಉಳಿಸಿಕೊಳ್ಳಲು, ಆರೋಗ್ಯಕರವಾಗಿ ಮುಂದುವರೆಸಲು ಉತ್ತಮವಾಗಿ ಕ್ರಿಯಾಶೀಲವಾಗಲು ಅದನ್ನು ಅವು ಅನುಸರಿಸಬೇಕಾಗಿದೆ. ಸ್ಥಾನ, ಸಮಾರಂಭ, ಇತರರೊಂದಿಗೆ ನಿರ್ದಿಷ್ಟ ಸಂಬಂಧಗಳಿಗೆ ಒತ್ತು ನೀಡುವ ಧರ್ಮವೂ ಸಹ ಇದೆ. ಪರಿಸ್ಥಿತಿ, ಪರಿಸರ, ವಯಸ್ಸು, ಯುಗ ಧರ್ಮಗಳಿಂದ ಪ್ರೇರೇಪಿತವಾದ ಧರ್ಮವು ಸಹ ಅಸ್ತಿತ್ವದಲ್ಲಿ ಇರುವದು. ವಿಶ್ವಾತೀತ ಮತೀಯ ಅಥವಾ ನೈತಿಕ ಧರ್ಮವೂ ಸಹ ಇರುವದು. ಇವೆಲ್ಲವೂ ಸಹಜ ಧರ್ಮದ ಮೇಲೆ ಪ್ರಭಾವ ಬೀರಿ ಕ್ರಿಯಾಶೀಲವಾಗುವವು. ಸ್ವಭಾವಕ್ಕೆ ಅನುಗುಣವಾಗಿ ಆ ಕ್ರಿಯೆಯು ನಿಯಮಗಳ ರೂಪವನ್ನು ಸೃಷ್ಟಿಸುವದು. ಪುರಾತನ ತತ್ತ್ವದ ಪ್ರಕಾರ, ಮಾನವನು ಸಂಪೂರ್ಣವಾಗಿ ಉತ್ತಮನಾದಾಗ, ಅಂದರೆ ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ, – ಪೌರಾಣಿಕ ಸುವರ್ಣ ಕಾಲಾವಧಿಯಾದ ಸತ್ಯ ಯುಗದಲ್ಲಿ – ಯಾವುದೇ ರಾಜಕೀಯ ಸರ್ಕಾರ ಅಥವಾ ರಾಜ್ಯ ಅಥವಾ ಸಮಾಜದ ಕೃತಕ ನಿರ್ಮಾಣಗಳ ಅವಶ್ಯಕತೆಯಿರುವದಿಲ್ಲ. ಏಕೆಂದರೆ ಎಲ್ಲರೂ ಆಗ ಭಗವಂತನು ನೆಲೆಸಿರುವ ಸತ್ತೆ ಮತ್ತು ತಮ್ಮ ಸಾಕ್ಷಾತ್ಕಾರವಾದ ಆತ್ಮದ ಸತ್ಯದಲ್ಲಿ ಸ್ವತಂತ್ರವಾಗಿರುವರು. ಆ ಜನರು ಸ್ವ–ಪ್ರೇರಿತವಾಗಿ ಆಂತರಿಕ ದಿವ್ಯ ಧರ್ಮಕ್ಕೆ ಅನುಗುಣವಾಗಿ ಜೀವಿಸುವರು. ಹೀಗಾಗಿ ಧ್ಯೇಯವು ಆತನ ಮತ್ತು ಅದರ ಸತ್ತೆಯ ಸ್ವತಂತ್ರ ಮತ್ತು ಸಮರ್ಪಕ ನಿಯಮಗಳಿಗೆ ಅನುಗುಣವಾಗಿ ಜೀವಿಸುವ ಸ್ವ–ನಿರ್ಧಾರಿತ ವ್ಯಕ್ತಿ ಮತ್ತು ಸ್ವ–ನಿರ್ಧಾರಿತ ಸಮೂಹಗಳೇ ಆಗಿದೆ. ಆದರೆ ಮಾನವತೆಯ ನೈಜ ಪರಿಸ್ಥಿತಿಗಳಲ್ಲಿ, ನಿಜವಾದ ವೈಯಕ್ತಿಕ ಮತ್ತು ಸಾಮಾಜಿಕ ಧರ್ಮದ ವಿಕೃತಿ ಮತ್ತು ವಿರೋಧಗಳಿಗೆ ಒಳಗಾಗಿದೆ, ಅದರ

ಅಜ್ಞಾನಭರಿತ ಮತ್ತು ದೈತ್ಯ ಸ್ವಭಾವ. ಹೀಗಾಗಿ ಓರ್ವ ಆಡಳಿತಗಾರ, ಓರ್ವ ರಾಜ, ಸಾರ್ವಭೌಮ ಶಕ್ತಿ, ಒಂದು ರಾಜ್ಯದ ಅಧೀನಕ್ಕೆ ಸಮಾಜದ ಸಹಜ ಜೀವನವು ಒಳಪಡುವದು ಅವಶ್ಯಕವಾಗಿದೆ. ಈ ರಾಜನು ಸಮಾಜದ ಜೀವನದಲ್ಲಿ ಅನವಶ್ಯಕವಾಗಿ ಪ್ರವೇಶಿಸಬಾರದು. ಅದರ ಸ್ವ–ಪ್ರೇರಿತ ಅಭಿವೃದ್ಧಿ, ರೂಢಿ, ಸಹಜ ನಿಯಮಗಳಿಗೆ ಅನುಗುಣವಾಗಿ ಬಹುಪಾಲು ಕ್ರಿಯಾಶೀಲವಾಗಿರಲು ಅನುವು ಮಾಡಿಕೊಡಬೇಕು. ಆದರೆ ಸಮರ್ಪಕ ಪ್ರಕ್ರಿಯೆಗೆ ನೆರವಾಗಿ ಅದರ ಮೇಲ್ವಿಚಾರಣೆ ವಹಿಸಬೇಕು. ಮತ್ತು ಧರ್ಮವು ಶಕ್ತಿಶಾಲಿಯಾಗಿದೆಯೇ ಎನ್ನುವುದರ ಕಡೆ ಗಮನ ಹರಿಸಬೇಕು. ಜೊತೆಗೆ ಧರ್ಮದ ವಿರುದ್ಧ ಕಾರ್ಯಗಳು ನೆರವೇರದಂತೆ ಜಾಗ್ರತೆ ವಹಿಸುವದು ಸಹ ಬಹಳ ಮುಖ್ಯ. ಧರ್ಮದ ವಿರುದ್ಧವಾದ ಕೆಲಸಗಳನ್ನು ತಡೆಗಟ್ಟಬೇಕು ಮತ್ತು ಅಪರಾಧಿಗಳನ್ನು ಶಿಕ್ಷಿಸಬೇಕಾಗಬಹುದು ಸಹ. ಇನ್ನೂ ಅಧಿಕವಾದ ನೀತಿಭ್ರಷ್ಟತೆಯು ಧರ್ಮದಲ್ಲಿ ಉಂಟಾದಾಗ ಶಾಸನಸಭೆ ಮತ್ತು ವಿಧ್ಯುಕ್ತ ಸರ್ಕಾರವು ಬೇಕಾಗುವದು. ಆಗಲೇ ನೀತಿ ಸಂಹಿತೆ, ಲಿಖಿತ ಅಥವಾ ಬಾಹ್ಯ ಕಾನೂನುಗಳು ಅಸ್ತಿತ್ವಕ್ಕೆ ಬರುವದು. ಆದರೆ ಬಾಹ್ಯ ಕಾರ್ಯನಿರ್ವಾಹಕ ವಿವರಣೆಗಳನ್ನು ಹೊರತುಪಡಿಸಿ ಅದನ್ನು ನಿರ್ಧರಿಸುವದು, ರಾಜಕೀಯ ಪರಮೋನ್ನತೆಯ ಕ್ರಿಯೆಯಾಗಿರಲಿಲ್ಲ. ಏಕೆಂದರೆ ಅದು ಅದರ ಆಡಳಿತಗಾರ ಮಾತ್ರವಾಗಿತ್ತು, ಆದರೆ ಆ ಕಾರ್ಯವನ್ನು ಬ್ರಾಹ್ಮಣ ಋಷಿ ಅಥವಾ ಸಾಮಾಜಿಕ ಮತೀಯ ಸೃಷ್ಟಿಕರ್ತನು ಮಾಡಬೇಕಾಗಿತ್ತು. ಸ್ವತಃ ಲಿಖಿತ ಅಥವಾ ಅಲಿಖಿತ ಕಾನೂನುಗಳು ರಾಜಕೀಯ ಮತ್ತು ಶಾಸನಸಭೆಯ ಪ್ರಾಧಿಕಾರದಿಂದ ಸೃಷ್ಟಿಯಾಗುತ್ತಿರಲಿಲ್ಲ ಅಥವಾ ರಚಿತವಾಗುತ್ತಿರಲಿಲ್ಲ, ಆದರೆ ಆ ವಿಷಯವು ಈಗಾಗಲೇ ಅಸ್ತಿತ್ವದಲ್ಲಿ ಇದ್ದಿತು. ಅದು ಹೇಗಿದೆಯೋ ಹಾಗೆ ಅಥವಾ ಚೇತನ ಹಾಗು ಸಾಮೂಹಿಕ ಜೀವನ ತತ್ತ್ವ ಮತ್ತು ಹಿಂದಿನ ಕಾನೂನುಗಳ ಮೂಲಕ ಹೊರ ಹೊಮ್ಮಿ ಸಹಜವಾಗಿ ವೃದ್ಧಿಸಿರುವ ರೀತಿಯಲ್ಲಿ ವಿವರಿಸಬೇಕಾಗಿತ್ತು. ಈ ಹೆಚ್ಚಾಗುತ್ತಿರುವ ಕೃತಕತೆ ಮತ್ತು ಸಂಪ್ರದಾಯಗಳಿಂದ ಹೊರಹೊಮ್ಮುತ್ತಿರುವ ಕೊನೆಯ ಅಸಹನೀಯ ಅವಸ್ಥೆಯೇ ಅರಾಜಕತೆ, ಸಂಘರ್ಷ ಮತ್ತು ಧರ್ಮದ ಅವಸಾನ – ಕಲಿಯುಗ – ಒಂದು ಮಹತ್ತರವಾದ ರಕ್ತಸಿಕ್ತ ಸಾಮಾಜಿಕ ಕ್ರಾಂತಿ ಮತ್ತು ಹಿಂಪಡೆಯಲು ವಿಪ್ಲವ ಮತ್ತು ಮಾನವ ಸತ್ತೆಯಲ್ಲಿನ ಚೇತನದ ಒಂದು ನವ ಸ್ವ–ಅಭಿವ್ಯಕ್ತತೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/403–04**

## ಮತೀಯ ಮತ್ತು ಆಧ್ಯಾತ್ಮಿಕ ಜೀವನದ ಒಂದು ನಿಯಮ

ಮತ್ತೊಂದು ಕಡೆ, ಧರ್ಮ ಪದಕ್ಕೆ ನಾವು ಅದರ ಮತೀಯ ಅರ್ಥವನ್ನು ಮಾತ್ರ ನೀಡಿದರೆ, ಅದರಲ್ಲಿ ಅದು ಮತೀಯ ಮತ್ತು ಆಧ್ಯಾತ್ಮಿಕ ಜೀವನದ ನಿಯಮವನ್ನು ಮಾತ್ರ ಹೊಂದಿರುವುದು. ನಾವು ಆಗ ವಿಷಯದ ಕೇಂದ್ರ ಭಾಗವನ್ನು ಸ್ಪರ್ಶಿಸುವೆವು. ಆದರೆ ಅವತಾರವು ನೆರವೇರಿಸಿರುವ ಒಂದು ಬಹಳ ಮುಖ್ಯ ಭಾಗವನ್ನೇ ಮರೆತಿರುವ ಅಪಾಯದಲ್ಲಿ ಇರುವೆವು. ಯಾವಾಗಲೂ ದಿವ್ಯ ಅವತಾರಗಳ ಚರಿತ್ರೆಯಲ್ಲಿ ನಾವು ಎರಡು ವಿಧದ ಕಾರ್ಯಗಳನ್ನು ಕಾಣುವೆವು. ಅನಿವಾರ್ಯವಾಗಿ, ಮಾನವ ಜೀವನದಲ್ಲಿ ಅವತಾರವು ದೈವದ ಕಾರ್ಯವನ್ನು ನೆರವೇರಿಸಬೇಕಾಗಿರುವದರಿಂದ ಅಂದರೆ ಪ್ರಪಂಚದಲ್ಲಿ ದೈವೀ ಸಂಕಲ್ಪ ಮತ್ತು ಜ್ಞಾನದ ಹಾದಿ. ಅದು ಯಾವಾಗಲೂ ಜೀವನದ ಆಂತರಿಕ ಪ್ರಗತಿ ಮತ್ತು ಬಾಹ್ಯ ಬದಲಾವಣೆಯ ಮೂಲಕ ಹೊರಗೆ ಮತ್ತು ಆಂತರಿಕವಾಗಿಯೂ ಸಂಪೂರ್ಣವಾಗುವದು.

ಅವತಾರವು ಓರ್ವ ಶ್ರೇಷ್ಠ ಆಧ್ಯಾತ್ಮಿಕ ಗುರು ಮತ್ತು ರಕ್ಷಕನಾಗಿ, ಕ್ರಿಸ್ತ, ಬುದ್ಧ, ಧರೆಗಿಳಿಯಬಹುದು. ಆದರೆ ತನ್ನ ಭೂಮಿಯ ಮೇಲಿನ ಪ್ರಕಟಣೆಯನ್ನು ಅಂತ್ಯಗೊಳಿಸಿದ ಮೇಲೆ ಯಾವಾಗಲೂ ಆತನ ಕಾರ್ಯವು ನೈತಿಕವಾಗಿ ಮಾತ್ರವಲ್ಲ. ಆದರೆ ಮಾನವ ಸಂಕುಲದ ಬಾಹ್ಯ ಜೀವನ ಮತ್ತು ಧ್ಯೇಯಗಳಲ್ಲಿಯೂ ಸಹ ಒಂದು ಗಂಭೀರವಾದ ಮತ್ತು ಶಕ್ತಿಭರಿತ ಪರಿವರ್ತನೆಯ ಕಡೆ ಕರೆದುಕೊಂಡು ಹೋಗುವುದು. ಅಥವಾ ಆತನು ದಿವ್ಯ ಜೀವನದ ಅವತಾರವಾಗಿ ಅಂದರೆ ತನ್ನ ಕ್ರಿಯಾಶೀಲತೆಯ ಸಹಜ ಸಾಮರ್ಥ್ಯ ಮತ್ತು ದೈವೀ ವ್ಯಕ್ತಿತ್ವದಿಂದಲೂ ಒಡಗೂಡಿರಬಹುದು. ರಾಮ ಅಥವಾ ಕೃಷ್ಣರ ಕಥೆಯಲ್ಲಿ ಪ್ರತಿನಿಧಿಸಿರುವಂತೆ ಒಂದು ಸಾಮಾಜಿಕ, ನೈತಿಕ ಮತ್ತು ರಾಜಕೀಯ ಪ್ರಕಟಿತ ಗುರಿಯನ್ನು ಸಾಧಿಸಲು ಸಹ ಅವತರಿಸಬಹುದು. ಆದರೆ ಆಧ್ಯಾತ್ಮಿಕ ಪುನರ್ಜನ್ಮ ಮತ್ತು ಆಂತರಿಕ ಜೀವನಕ್ಕೆ ಈ ಅವರೋಹಣವು ಯಾವಾಗಲೂ ಮಾನವ ಸಂಕುಲದ ಆತ್ಮದಲ್ಲಿ ಒಂದು ಶಾಶ್ವತ ಶಕ್ತಿಯಾಗಿ ಪರಿಣಮಿಸುವದು. ಬೌದ್ಧ ಧರ್ಮ, ಕ್ರೈಸ್ತ ಮತಗಳ ಶಾಶ್ವತ ಭಾವನಾತ್ಮಕ ವಿಶ್ವಾತೀತ ಪರಿಣಾಮಗಳೇ ಅವುಗಳ ನೈತಿಕ, ಸಾಮಾಜಿಕ ಮತ್ತು ಪ್ರಯೋಗಿಕ ಧ್ಯೇಯಗಳ ಶಕ್ತಿಯಾಗಿದ್ದವು ಎಂಬುದು ನಿಜಕ್ಕೂ ಆಶ್ಚರ್ಯಕರವಾದ ಸಂಗತಿ. ಅವುಗಳ ಮತೀಯ ಆಧ್ಯಾತ್ಮಿಕ ನಂಬಿಕೆಗಳು, ರೂಪಗಳ ಮತ್ತು

ಆಯಾಮಗಳನ್ನು ತಿರಸ್ಕರಿಸಿದ್ದ ಜನರು ಮತ್ತು ಕಾಲಗಳ ಮೇಲೂ ಅದು ಪ್ರಭಾವ ಬೀರಿದ್ದಿತು. ನಂತರದ ಹಿಂದೂ ಧರ್ಮವು ಬುದ್ಧ, ಆತನ ಸಂಘ ಮತ್ತು ಆತನ ಧರ್ಮವನ್ನು ತಿರಸ್ಕರಿಸಿತು. ಆದರೆ ಅದರ ಮೇಲೆ ಬೌದ್ಧ ಧರ್ಮದ ನೈತಿಕ ಪ್ರಭಾವ, ಪೀಳಿಗೆಯ ಜೀವನ ಮತ್ತು ಚಿಂತನೆಗಳ ಮೇಲೆ ಅದು ಉಂಟು ಮಾಡಿದ ಪರಿಣಾಮವು ಅಳಿಸಲಾಗದ ಮುದ್ರೆಯಾಗಿದೆ. ಆಧುನಿಕ ಯುರೋಪಿನಲ್ಲಿ, ಹೆಸರಿಗೆ ಮಾತ್ರ ಕ್ರೈಸ್ತ. ಆದರೆ ಕ್ರೈಸ್ತ ಮತದ ಆಧ್ಯಾತ್ಮಿಕ ಸತ್ಯಗಳ ಸಾಮಾಜಿಕ ಮತ್ತು ರಾಜಕೀಯ ಗೋಳಗಳಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳ ಕಡೆಗಿನ ಅಭೀಪ್ಸೆಯೇ ಅದರ ಅರ್ಥ ಮತ್ತು ನೈತಿಕ ಹಾಗೆ ಸಾಮಾಜಿಕ ಗೋಳಗಳಲ್ಲಿ ಮಾನವ ಹಿತ ಸಾಧನೆಯೇ ಅದರ ಅರ್ಥ. ಕ್ರೈಸ್ತ ಮತ ಒಂದು ಸೂತ್ರ ಮಾತ್ರ ಎಂದು ಅದರಿಂದ ವಿಮೋಚನೆಯನ್ನು ಪಡೆಯಲು ಬೌದ್ಧಿಕ ಪ್ರಯತ್ನವು ಆದ ಕಾಲದಲ್ಲೇ ಮತ್ತು ಕ್ರೈಸ್ತ ಮತದ ಆಧ್ಯಾತ್ಮಿಕ ಆಯಾಮವನ್ನು ಉಗ್ರವಾಗಿ ತಿರಸ್ಕರಿಸಿದ ಜನರೇ ಪರಿಣಾಮಕಾರಿಯಾಗಿ ಮೇಲಿನ ಮೊದಲ ಭಾಗವನ್ನು ಉಪಯೋಗಿಸಿದರು. ಮತ್ತೊಂದು ಕಡೆ ಚರಿತ್ರೆಯಲ್ಲಿನ ದಾಖಲಾತಿಗಳಿಗೂ ಹಿಂದಿನದಾಗಿದೆ ರಾಮ ಮತ್ತು ಕೃಷ್ಣರ ಜೀವನ. ಅದು ಕಾವ್ಯ ಮತ್ತು ಕಥಾನಕವಾಗಿ ಮಾತ್ರ ಅವರೋಹಿಸಿದೆ. ಆದುದರಿಂದ ಅವುಗಳನ್ನು ಪುರಾಣಗಳೆಂದು ತಿಳಿಯಬಹುದು. ಆದರೆ ನಾವು ಅವುಗಳನ್ನು ಪುರಾಣಗಳೆಂದು ಭಾವಿಸುವೆವೋ ಅಥವಾ ಚಾರಿತ್ರಿಕ ಸತ್ಯಗಳೆಂದು ತಿಳಿಯುವೆವೋ ಎಂಬುದು ಮುಖ್ಯವಲ್ಲ. ಏಕೆಂದರೆ ಮಾನವ ಆತ್ಮದ ಜೀವನ ಮತ್ತು ಪೀಳಿಗೆಯ ಆಂತರಿಕ ಚೇತನದಲ್ಲಿ ಅವುಗಳ ಶಾಶ್ವತ ಸತ್ಯ ಮತ್ತು ಮೌಲ್ಯವು ಆಧ್ಯಾತ್ಮಿಕ ರೂಪ, ಸನ್ನಿಧಿ ಮತ್ತು ಪ್ರಭಾವದೊಂದಿಗೆ ನಿರಂತರವಾಗಿ ಮುಂದುವರೆಯುತ್ತಿದೆ. ಬಾಹ್ಯ ಕಾರ್ಯದಲ್ಲಿ ಸಫಲತೆಯನ್ನು ಹೊಂದಿದ್ದರೂ, ತನ್ನ ಕಾರ್ಯವು ನೆರವೇರಿದ ಮೇಲೂ ಅವತಾರದ ಆಧ್ಯಾತ್ಮಿಕ ಪ್ರಭಾವವು ಮುಂದುವರೆಯುವುದು. ಇದು ದಿವ್ಯ ಜೀವನ ಮತ್ತು ಚೇತನದ ಸತ್ಯವಾಗಿದೆ. ಅಥವಾ ಆಧ್ಯಾತ್ಮಿಕ ಪ್ರಭಾವ ಮತ್ತು ಬೋಧನೆಯಲ್ಲಿ ತನ್ನನ್ನು ತಾನು ಅರಿಯಬಹುದು. ಆದರೆ, ನಂತರ ನವ ಮತ ಅಥವಾ ಆಯಾಮವು ಇಲ್ಲವಾದಾಗಲೂ, ಮಾನವ ಸಂಕುಲದ ಬಾಹ್ಯ ಜೀವನದ ಮನೋಭಾವ ಮತ್ತು ಚಿಂತನೆಯಲ್ಲಿ ಅದರ ಶಾಶ್ವತ ಪರಿಣಾಮವು ಮುಂದುವರಿಯಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/170–71**

## ಧರ್ಮ ಮತ್ತು ಅವತಾರದ ಕಾರ್ಯ

ನಾವು ಈಗ ಅವತಾರದ ಕಾರ್ಯವನ್ನು ಗೀತೆಯು ವಿವರಿಸಿರುವ ರೀತಿಯಲ್ಲಿ ಅರಿಯಬೇಕಾಗಿದೆ. ಧರ್ಮದ ಬಗ್ಗೆ ಸಂಪೂರ್ಣವಾಗಿ, ಅತ್ಯಂತ ಆಳವಾಗಿ ಮತ್ತು ವಿಶಾಲವಾದ ಕಲ್ಪನೆಯಲ್ಲಿ ಚಿಂತಿಸಬೇಕಾಗಿದೆ. ಆಂತರಿಕ ಮತ್ತು ಬಾಹ್ಯ ನಿಯಮಗಳ ಮೂಲಕ ದಿವ್ಯ ಸಂಕಲ್ಪ ಮತ್ತು ಜ್ಞಾನವು ಮಾನವ ಕುಲದ ಜೀವನದಲ್ಲಿ ಆಧ್ಯಾತ್ಮಿಕ ವಿಕಸನ, ಅದರ ಪರಿಸ್ಥಿತಿಗಳು ಮತ್ತು ಪರಿಣಾಮಗಳ ತಯಾರಿಯನ್ನು ಮಾಡುವುದು. ಭಾರತೀಯ ಕಲ್ಪನೆಯಲ್ಲಿ ಧರ್ಮವು ಉತ್ತಮತೆ, ಸಮರ್ಪಕತೆ, ನೀತಿ ಮತ್ತು ನ್ಯಾಯ, ನೈತಿಕತೆ ಮಾತ್ರವಲ್ಲ. ಆದರೆ ದೈವ, ಪ್ರಕೃತಿ ಮತ್ತು ಇತರ ಎಲ್ಲಾ ಸತ್ತೆಗಳೊಂದಿಗೆ ಮಾನವನ ಎಲ್ಲಾ ಸಂಬಂಧಗಳ ಸಂಪೂರ್ಣ ಆಡಳಿತವಾಗಿದೆ. ಇಲ್ಲಿ ದೈವವೆಂದರೆ ಒಂದು ದಿವ್ಯ ತತ್ತ್ವವು ಕ್ರಿಯೆಯ ನಿಯಮಗಳು ಮತ್ತು ರೂಪಗಳಾಗಿ ಕಾಣಿಸಿಕೊಳ್ಳುತ್ತಿದೆ ಎಂಬ ದೃಷ್ಟಿಕೋನವನ್ನು ಹೊಂದಲಾಗಿದೆ. ಅಂದರೆ ಬಾಹ್ಯ ಮತ್ತು ಆಂತರಿಕ ಜೀವನದ ರೂಪಗಳು ಹಾಗು ಪ್ರಪಂಚದಲ್ಲಿನ ಪ್ರತಿಯೊಂದು ವಿಧದ ಸಂಬಂಧಗಳ ಶ್ರೇಣಿಗಳು. ನಾವು ಯಾವುದನ್ನು ಆಧರಿಸಿರುವೆವೋ ಮತ್ತು ನಮ್ಮ ಬಾಹ್ಯ ಮತ್ತು ಆಂತರಿಕ ವ್ಯವಹಾರಗಳನ್ನು ಯಾವುದು ಒಗ್ಗೂಡಿಸಿದೆಯೋ ಅದೇ ಧರ್ಮ. ಅದರ ಪ್ರಾಥಮಿಕ ಭಾವದಲ್ಲಿ, ಅದರ ಅರ್ಥ ನಮ್ಮ ಸ್ವಭಾವದ ಮೂಲಭೂತ ನಿಯಮವಾಗಿದೆ. ಅದು ರಹಸ್ಯವಾಗಿ ನಮ್ಮ ಎಲ್ಲಾ ಚಟುವಟಿಕೆಗಳನ್ನು ವ್ಯವಸ್ಥಿತಗೊಳಿಸುವುದು. ಈ ಅರ್ಥದಲ್ಲಿ ತನ್ನದೇ ಆದ ಧರ್ಮವನ್ನು ಪ್ರತಿಯೊಬ್ಬ ವ್ಯಕ್ತಿ, ಜಂತು, ವಿವಿಧ ರೂಪ, ಸತ್ತೆ ಮತ್ತು ಗುಂಪು ಹೊಂದಿದೆ. ಎರಡನೆಯದಾಗಿ, ನಮ್ಮಲ್ಲಿ ಅಭಿವೃದ್ಧಿ ಹೊಂದಿ ಪ್ರಕಟವಾಗಬೇಕಾಗಿರುವ ದಿವ್ಯ ಸ್ವಭಾವವೊಂದಿದೆ. ಈ ಭಾವದಲ್ಲಿ ಆಂತರಿಕ ಕ್ರಿಯೆಗಳ ನಿಯಮವೇ ಧರ್ಮವಾಗಿದೆ. ಧರ್ಮದಿಂದಲೇ ಆ ಕ್ರಿಯೆಗಳು ನಮ್ಮಲ್ಲಿ ವೃದ್ಧಿಸುವದು. ಮೂರನೆಯದಾಗಿ, ಮತ್ತೊಂದು ನಿಯಮವಿದೆ. ಅದರ ಮೂಲಕ ನಮ್ಮ ಹೊರಬರುವ ಚಿಂತನೆ ಮತ್ತು ಕಾರ್ಯವನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವೆವು ಮತ್ತು ಇತರರೊಂದಿಗಿನ ನಮ್ಮ ಸಂಬಂಧವನ್ನು ಸುಮಧುರಗೊಳಿಸುವೆವು. ಇದರಿಂದ ದಿವ್ಯತೆಯ ಕಡೆಗಿನ ಧ್ಯೇಯದಲ್ಲಿ ನಮ್ಮ ಸ್ವಂತ ಅಭಿವೃದ್ಧಿಯು ಉಂಟಾಗುವುದಲ್ಲದೆ ಮಾನವ ಕುಲವು ಸಹ ಅದರ ಕಡೆ ಹೆಜ್ಜೆ ಹಾಕುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/171**

## ಧರ್ಮದ ಅಂಶಗಳು

ಸಾಮಾನ್ಯವಾಗಿ ಧರ್ಮವು ನಿರಂತರವಾದುದೆಂದು ಹೇಳಲಾಗುವದು. (ಭ.ಗೀ. 14.27) ಅದು ಬದಲಾವಣೆರಹಿತವಾದುದರಿಂದ ಮೂಲಭೂತ ತತ್ತ್ವದಲ್ಲಿದೆ ಎಂದು ಹೇಳುವದು. ಭ.ಗೀ. 11.18 ಅದೇ ಧ್ಯೇಯವೆನ್ನುವದು. ಆದರೆ ರೂಪಗಳಲ್ಲಿ ಅದು ಬದಲಾಗುತ್ತಲೇ ಇರುವದು ಮತ್ತು ವಿಕಸಿತವಾಗುತ್ತಿರುವುದು. ಏಕೆಂದರೆ ಮಾನವನು ಧ್ಯೇಯವನ್ನು ಈಗಾಗಲೇ ಹೊಂದಿಲ್ಲ ಅಥವಾ ಅದರಲ್ಲಿ ಜೀವಿಸುತ್ತಿಲ್ಲ. ಆದರೆ ಹೆಚ್ಚು ಕಮ್ಮಿ ಅದರ ಕಡೆ ಪರಿಪೂರ್ಣ ಅಭೀಪ್ಸೆಯನ್ನು ಹೊಂದಿರುವನು. ಮತ್ತು ಅದರ ಜ್ಞಾನ ಅಥವಾ ಅಭ್ಯಾಸದ ಕಡೆ ವೃದ್ಧಿಸುತ್ತಿರುವನು. ಈ ಬೆಳವಣಿಗೆಯಲ್ಲಿ ದಿವ್ಯ ಪರಿಶುದ್ಧತೆ, ವಿಶಾಲತೆ, ಬೆಳಕು, ಸ್ವಾತಂತ್ರ್ಯ, ಶಕ್ತಿ, ಸಾಮರ್ಥ್ಯ, ಸಂತಸ, ಪ್ರೇಮ, ಉತ್ತಮತೆ, ಏಕತ್ವ, ಸೌಂದರ್ಯಗಳ ಕಡೆ ನಾವು ವೃದ್ಧಿಸಲು ಧರ್ಮವು ನೆರವಾಗುವದು. ಇದರ ವಿರುದ್ಧವಾಗಿರುವ ಆದರ ನೆರಳು, ಮತ್ತು ನಿರಾಕರಣೆ. ಅದರ ನಿಯಮಕ್ಕೆ ಒಳಗಾಗದೆ ಅದರ ವೃದ್ಧಿಯನ್ನು ವಿರೋಧಿಸುವದು. ಶರಣಾಗದೆ ಇರುವದು ಮತ್ತು ಅದರ ರಹಸ್ಯವಾದ ದಿವ್ಯ ಮೌಲ್ಯಗಳಿಗೆ ತನ್ನ ಸಂಕಲ್ಪಗಳಲ್ಲಿ ಅನುಮೋದನೆ ನೀಡದೆ ವಿಕೃತಿ, ವಿರೋಧ, ಅಶುದ್ಧತೆ, ಸಂಕುಚಿತತೆ, ಬಂಧನ, ಅಂಧಕಾರ, ದುರ್ಬಲತೆ, ಭ್ರಷ್ಟತೆ, ಅಸಮತೋಲನ, ದುಃಖ, ವಿಭಜನೆ, ಭೀಕರ ಮತ್ತು ಒರಟಾದುದೆಲ್ಲವನ್ನೂ ಮುಂದಿಡುವದು. ಅಂದರೆ ಮಾನವನು ತನ್ನ ಪ್ರಗತಿಯಲ್ಲಿ ಹಿಂದೆ ಬಿಟ್ಟು ಮುಂದೆ ಸಾಗಬೇಕಾಗಿರುವುದೆಲ್ಲವನ್ನೂ ನಮ್ಮ ಮುಂದೆ ಪ್ರದರ್ಶಿಸುವದು. ಇದೇ ಅಧರ್ಮ, ಧರ್ಮವಲ್ಲದಿರುವದು. ಈ ಅಧರ್ಮವು ಧರ್ಮವನ್ನು ಜಯಿಸಲು ಶ್ರಮಿಸುವದು. ಹಿಂದಕ್ಕೆ ಹಾಗೂ ಕೆಳಕ್ಕೆ ಸೆಳೆಯುವ ದುಷ್ಟ, ಅಜ್ಞಾನಭರಿತ ಮತ್ತು ಕತ್ತಲೆಯ ಪ್ರತಿಕ್ರಿಯೆಗಳನ್ನು ಉಂಟುಮಾಡುವ ಶಕ್ತಿ. ಇವೆರಡರ ನಡುವೆ ನಿರಂತರವಾದ ಕಾಳಗ ಮತ್ತು ಹೋರಾಟವು ನಡೆಯುತ್ತಿರುವದು. ವಿಜಯ ಮತ್ತು ಅಪಜಯಗಳ ತೂಗಾಟವು ಉಂಟಾಗುತ್ತಿರುವದು. ಈ ಪ್ರಕ್ರಿಯೆಯಲ್ಲಿ ಕೆಲವೊಮ್ಮೆ ಊರ್ಧ್ವ ಗಮನದ ಶಕ್ತಿಗಳು ಜಯಿಸುವವು ಮತ್ತು ಕೆಲವೊಮ್ಮೆ ಕೆಳಗಿಳಿಸುವ ಶಕ್ತಿಗಳು ಜಯಿಸುವವು. ದೈವೀ ಮತ್ತು ರಾಕ್ಷಸ ಶಕ್ತಿಗಳ ನಡುವಿನ ಹೋರಾಟವನ್ನು ವೈದಿಕ ಬಿಂಬವು ಮಾದರಿ ನಿರೂಪಣೆಯಾಗಿ ತೋರ್ಪಡಿಸುವುದು. ಅಥವಾ ಬೆಳಕಿನ ಪುತ್ರರು ಮತ್ತು ಅವಿಭಾಜಿತ ಅನಂತತೆ ಹಾಗು ಅಂಧಕಾರ ಮತ್ತು ವಿಭಜನೆಯ ಮಕ್ಕಳ ನಡುವಿನ ಹೋರಾಟವು ಇದೇ ಆಗಿದೆ. ಅಹುರಮಜ್ದ ಮತ್ತು ಅಹ್ರಿ

ಮಾನವ ಜರತುಷ್ಟ್ರ (ಪಾರಸಿ) ಮತದಲ್ಲಿ ಇದೇ ಹೋರಾಟವನ್ನು ಕಾಣುವೆವು. ನಂತರದ ಮತಗಳಲ್ಲಿ ದೇವರು ಮತ್ತು ಆತನ ದೈವೀ ಶಕ್ತಿಗಳು ಹಾಗು ಇಬ್ಲಿಸ್ ಮತ್ತು ಆತನ ದೈತ್ಯರು ಮಾನವ ಜೀವನ ಮತ್ತು ಮಾನವ ಆತ್ಮವನ್ನು ಜಯಿಸಲು ಮಾಡುವ ಹೋರಾಟವು ಸಹ ಇದೇ ಆಗಿದೆ. ಈ ವಿಷಯಗಳೇ ಅವತಾರದ ಕಾರ್ಯ ಮತ್ತು ಪರಿಸ್ಥಿತಿಯನ್ನು ನಿರ್ಧರಿಸುವದು. ಬೌದ್ಧ ಮತದ ಸೂತ್ರದಲ್ಲಿ ಶಿಷ್ಯನು ಮೂರು ಶಕ್ತಿಗಳಾದ ಧರ್ಮ, ಸಂಘ ಮತ್ತು ಬುದ್ಧನೊಳಗೆ ಮುಕ್ತಿ ಪಡೆಯುವದನ್ನು ವಿರೋಧಿಸುವ ನೆಲೆಯಲ್ಲಿ ಆಶ್ರಯ ಪಡೆಯುವನು. ಇದೇ ರೀತಿ ಕ್ರೈಸ್ತ ಧರ್ಮದಲ್ಲಿ ಕ್ರೈಸ್ತ ಜೀವನ, ಚರ್ಚು ಮತ್ತು ಕ್ರಿಸ್ತನಿರುವನು. ಈ ಮೂರೂ ಯಾವಾಗಲೂ ಅವತಾರದ ಕೆಲಸಕ್ಕೆ ಅವಶ್ಯಕವಾದ ಅಂಶಗಳು.

ಆತನು ಒಂದು ಧರ್ಮವನ್ನು ನೀಡುವನು, ಒಂದು ಸ್ವ–ನಿಯಂತ್ರಣದ ನಿಯಮ. ಇದರ ಮೂಲಕ ಕೆಳಗಿನದರಿಂದ ಉನ್ನತ ಜೀವನಕ್ಕೆ ವೃದ್ಧಿಸಬೇಕಾಗಿದೆ. ಅದು ಅವಶ್ಯಕವಾಗಿ ಕ್ರಿಯೆಯ ನಿಯಮ ಮತ್ತು ಜೊತೆಗಾರರೊಂದಿಗೆ ಹಾಗು ಮತ್ತಿತರ ಸತ್ತೆಗಳೊಂದಿಗಿನ ಸಂಬಂಧಗಳನ್ನು ಒಳಗೊಂಡಿದೆ. ಜೊತೆಗೆ ಎಂಟು ಹಂತಗಳ ಪಥ, ಶ್ರದ್ಧೆ, ಪ್ರೇಮ, ಪರಿಶುದ್ಧತೆ, ಅಥವಾ ಜೀವನದಲ್ಲಿನ ದಿವ್ಯತೆಯ ಸ್ವಭಾವವನ್ನು ಹೊಂದಿರುವ ಮತ್ತ್ಯಾವುದಾದರೂ ಇದೇ ರೀತಿಯ ದರ್ಶನದಲ್ಲಿನ ಪ್ರಯತ್ನವನ್ನು ಸಹ ಒಳಗೊಂಡಿರುವುದು. ಮಾನವನಲ್ಲಿಯ ಪ್ರತಿಯೊಂದು ಪ್ರವೃತ್ತಿಯು ವೈಯಕ್ತಿಕ ಅಂಶವನ್ನು ಹೊಂದಿರುವದಲ್ಲದೆ ಸಾಮೂಹಿಕ ಅಂಶವನ್ನು ಸಹ ಪಡೆದಿದೆ. ಏಕೆಂದರೆ ಆಧ್ಯಾತ್ಮಿಕ ಸಹಬಾಳ್ವೆ ಮತ್ತು ಏಕತ್ವದ ಕಡೆ ಒಂದೇ ಹಾದಿಯನ್ನು ಅನುಸರಿಸುವವರು ಪರಸ್ಪರ ಸೆಳೆಯಲ್ಪಡುವರು. ಆತನ ವ್ಯಕ್ತಿತ್ವ ಮತ್ತು ಬೋಧನೆ ಜೊತೆಗೂಡಿಸುವವರ ಒಕ್ಕೂಟವನ್ನು ಅಂದರೆ ಸಂಘವನ್ನು ಆತನು ದೃಢೀಕರಿಸುವನು. ವೈಷ್ಣವ ಧರ್ಮದಲ್ಲಿ ಇದೇ ಭಾಗವತ, ಭಕ್ತ ಮತ್ತು ಭಗವಾನರು ಇರುವರು. ಪ್ರೇಮ ಮತ್ತು ಆರಾಧನೆಗಳ ವೈಷ್ಣವ ವಿನಿಯೋಗ ನಿಯಮವಾಗಿದೆ – ಭಾಗವತ. ಆ ನಿಯಮದ ಪ್ರಕಟಣೆಯನ್ನು ಹೊಂದಿರುವವರ ಸಹಯೋಗವನ್ನು ಪ್ರತಿನಿಧಿಸುವನು ಭಕ್ತ, ದಿವ್ಯ ಪ್ರೇಮಿ ಮತ್ತು ಪ್ರಿಯತಮನಾಗಿರುವನು ಭಗವಾನ್. ಪ್ರೇಮದ ದಿವ್ಯ ನಿಯಮವು ಆತನ ಸತ್ತೆಯಲ್ಲಿ ಮತ್ತು ಸ್ವಭಾವದಲ್ಲಿ ಸ್ಥಾಪಿತವಾಗಿದೆ ಮತ್ತು ಅದು ತನ್ನನ್ನು ತಾನು ತೃಪ್ತಿಗೊಳಿಸಿಕೊಳ್ಳುವುದು. ಅವತಾರವು ಈ ಮೂರನೇ ಅಂಶವನ್ನು ಪ್ರತಿನಿಧಿಸುವದು. ಅದೇ ದಿವ್ಯ ವ್ಯಕ್ತಿತ್ವ, ಸ್ವಭಾವ ಮತ್ತು ಸತ್ತೆ. ಅದೇ ಧರ್ಮ ಮತ್ತು

ಸಂಘದ ಆತ್ಮ, ತನ್ನ ಬಗ್ಗೆ ಅವುಗಳಿಗೆ ತಿಳಿಸುವನು. ಅವುಗಳನ್ನು ಜೀವಂತವಾಗಿ ಇರಿಸುವನು. ಜನರನ್ನು ಐಶ್ವರ್ಯ ಮತ್ತು ಮುಕ್ತಿಯ ಕಡೆ ಸೆಳೆಯುವನು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/173**

## ಧರ್ಮ ಮತ್ತು ಅಧರ್ಮ

ಮಾನವನ ಆಂತರಿಕ ಹೋರಾಟ ಮತ್ತು ಬಾಹ್ಯ ಕಾಳಗಗಳ ರಂಗ ಮಂದಿರವಾಗಿದೆ ಈ ಪ್ರಪಂಚ. ಈ ಹೋರಾಟಕ್ಕೆ ಹೆಚ್ಚಿನ ಒತ್ತು ನೀಡುವುದು ಭಗವದ್ಗೀತೆ. ಆಂತರಿಕ ಹೋರಾಟದಲ್ಲಿ ಶತ್ರುಗಳು ವ್ಯಕ್ತಿಯ ಆಂತರ್ಯದಲ್ಲೇ ಇರುವರು. ಆಸೆ, ಅಜ್ಞಾನ, ಅಹಂಕಾರಗಳನ್ನು ಮಣಿಸುವುದೇ ವಿಜಯ. ಆದರೆ ಮಾನವ ಸಮಷ್ಟಿಯಲ್ಲಿ ಧರ್ಮ ಮತ್ತು ಅಧರ್ಮದ ಶಕ್ತಿಗಳ ನಡುವೆ ಒಂದು ಬಾಹ್ಯ ಕಾಳಗವೂ ಸಹ ಇರುವುದು. ಮೊದಲನೆಯದನ್ನು ಮಾನವನಲ್ಲಿಯ ದೈವೀ ಸ್ವಭಾವವಾದ ದಿವ್ಯತೆಯು ಆಧರಿಸುವದು. ಅದನ್ನು ಪ್ರತಿನಿಧಿಸುವವರು ಅಥವಾ ಮಾನವ ಜೀವನದಲ್ಲಿ ಅದರ ಸಾಕ್ಷಾತ್ಕಾರವನ್ನು ಪಡೆಯಲು ಶ್ರಮಿಸುವವರು ಸಹ ಅದಕ್ಕೆ ನೆರವಾಗುವರು. ಎರಡನೆಯದನ್ನು ರಾಕ್ಷಸರು ಅಥವಾ ಅಸುರರು ಬೆಂಬಲಿಸುವರು. ಈ ರಾಕ್ಷಸೀಯ ಪ್ರವೃತ್ತಿಯ ಶಿರವು ಹಿಂಸಾತ್ಮಕ ಅಹಂಕಾರವಾಗಿದ್ದು, ರಾಕ್ಷಸರು ಅದನ್ನು ಪ್ರತಿನಿಧಿಸುವದಲ್ಲದೆ ಅದರ ತೃಪ್ತಿಗಾಗಿ ಶ್ರಮಿಸುವರು. ಇದು ದೇವತೆಗಳು ಮತ್ತು ರಾಕ್ಷಸರ ನಡುವಿನ ಯುದ್ಧ, ಪುರಾತನ ಭಾರತೀಯ ಸಾಹಿತ್ಯದಲ್ಲಿ ಈ ಸಂಕೇತವು ವಿಪುಲವಾಗಿ ದೊರೆಯುವದು, ಮಹಾಭಾರತದಲ್ಲಿನ ಹೋರಾಟದಲ್ಲಿ ಕೃಷ್ಣನು ಕೇಂದ್ರ ಬಿಂದುವಾಗಿರುವನಲ್ಲದೆ ಅನೇಕ ಸಾರಿ ಈ ಬಿಂಬವನ್ನು ಪ್ರತಿನಿಧಿಸುವನು. ಧರ್ಮದ ಸಾಮ್ರಾಜ್ಯವನ್ನು ಸ್ಥಾಪಿಸಲು ಹೋರಾಡುವ ಪಾಂಡವರು ದೇವತೆಗಳ ಪುತ್ರರಾಗಿರುವರು. ಅವರ ಸಾಮರ್ಥ್ಯಗಳು ಮಾನವ ರೂಪದಲ್ಲಿ ಇವೆ. ಅವರ ವೈರಿಗಳು ರಾಕ್ಷಸ ಶಕ್ತಿಗಳ ಅವತಾರಿಗಳಾಗಿರುವರು. ಈ ಬಾಹ್ಯ ಯುದ್ಧದಲ್ಲಿಯೂ ಸಹ ಅವತಾರವು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅಂದರೆ ದುಷ್ಟ ಶಕ್ತಿಗಳ ಆಡಳಿತವನ್ನು ನಾಶ ಮಾಡಲು ನೆರವಾಗುವದು. ಹೀಗೆ ಅವರು ಪ್ರತಿನಿಧಿಸುವ ದುಷ್ಟ ಶಕ್ತಿಯನ್ನು ಹಿಮ್ಮೆಟ್ಟಿಸಿ ದುಸ್ಥಿತಿಯಲ್ಲಿರುವ ಧರ್ಮದ ಆದರ್ಶಗಳನ್ನು ಸಂರಕ್ಷಿಸುವನು. ಸಮಷ್ಟಿಯಲ್ಲಿ ಸ್ವರ್ಗ ಸಾಮ್ರಾಜ್ಯವನ್ನು ಭೂಮಿಯ ಮೇಲೆ ತರುವ ಪ್ರಯತ್ನವನ್ನು

ತಾನೇ ಬರುವ ಮೂಲಕ ಕೃಷ್ಣನು ಮಾಡಿರುವನು. ಜೊತೆಗೆ ಮಾನವ ವೈಯಕ್ತಿಕ ಆತ್ಮದಲ್ಲಿ ಸ್ವರ್ಗ ಸಾಮ್ರಾಜ್ಯವನ್ನು ನಿರ್ಮಿಸಲು ಸಹ ಪ್ರಯತ್ನಿಸಿರುವನು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/175**

## ಭಗವಂತನ ಕಡೆ ಮಾನವನ ಆರೋಹಣದ ಹೆಜ್ಜೆಗಳು

ವಿಕಸನದ ಪಥದಲ್ಲಿ ಮಾನವ ಜ್ಞಾನ ಮತ್ತು ಶಕ್ತಿ ಅನೇಕ ರೀತಿಯಲ್ಲಿ ಅಭಿವ್ಯಕ್ತವಾಗುವುದು. ಅದರ ಮೂರು ಹಂತಗಳನ್ನು ನಾವು ಗಮನಿಸಬಹುದು. ದೇಹವು ಪ್ರಬಲವಾಗಿರುವ ಸಹಜ ಸ್ಥಿತಿ ಮತ್ತು ಪ್ರಾಣ ಶಕ್ತಿಯು ಆಗ ನಿಯಂತ್ರಿಸುವದು, ನಂತರ ನಡುವಣ ಹೆಚ್ಚು ಮುಂದುವರಿದ ಅವಸ್ಥೆ ಮತ್ತು ಪ್ರಮುಖವಾಗಿ ತರ್ಕಬದ್ಧ ಮತ್ತು ಕೊನೆಯದು ಆತ್ಮದ ಅತ್ಯುನ್ನತ ಅವಸ್ಥೆ.

ಮಾನವನ ದೇಹವು ಪ್ರಬಲವಾಗಿದ್ದು ಪ್ರಾಣ ಶಕ್ತಿಯಿಂದ ಚಾಲಿತವಾಗುತ್ತಿರುವಾಗ ತನ್ನ ಅಪೇಕ್ಷೆ ಮತ್ತು ಆಸಕ್ತಿಗಳ ಗುಲಾಮನಾಗಿರುವನು. ಆತನಿಗೆ ತನ್ನ ಸ್ವಾರ್ಥ, ಸಾಮಾನ್ಯ ಸ್ಫುರಣೆ ಮತ್ತು ಪ್ರೇರಣೆಗಳ ಅರಿವು ಮಾತ್ರವಿರುವುದು. ಅಪೇಕ್ಷೆಗಳು ಮತ್ತು ಆಸಕ್ತಿಗಳ ಸಂಘರ್ಷದಿಂದ ಉಂಟಾಗುವ ಘಟನೆಗಳ ಸರಣಿಯ ಮೂಲಕ ಅನುಕೂಲಕರವೆನ್ನಿಸುವ ಸಾಮಾಜಿಕ ವ್ಯವಸ್ಥೆಯನ್ನು ಆರಿಸಿಕೊಳ್ಳುವನು. ಅಂತಹ ಅನೇಕ ಅಥವಾ ಕೆಲವು ವಿಧಾಯಕಗಳ ಸಂಗ್ರಹವನ್ನು ಆತನು ತನ್ನ ಧರ್ಮ ಅಥವಾ ಜೀವನದ ಹಾದಿ ಎಂದು ಕರೆಯುವನು. ಈ ಕೆಳಗಿನ ಸಹಜ ಅವಸ್ಥೆಯಲ್ಲಿ ಕುಟುಂಬ ಅಥವಾ ಸಮಾಜದ ಸಂಪ್ರದಾಯಗಳು ಅನುಸರಿಸುವ ಪದ್ಧತಿಗಳೇ ಧರ್ಮ ಅಥವಾ ನಿಯಮವಾಗಿ ಇರುವದು. ಈ ಸಹಜ ಮಾನವನಿಗೆ ಆತ್ಮದ ಅರಿವು ಇರುವುದಿಲ್ಲ ಮತ್ತು ಮುಕ್ತಿಯ ಕಲ್ಪನೆಯೂ ಸಹ ಇರುವುದಿಲ್ಲ. ಅನಿಯಂತ್ರಿತವಾಗಿ ತನ್ನ ಭೌತಿಕ ಮತ್ತು ಭಾವನಾತ್ಮಕ ಪ್ರೇರಣೆಗಳನ್ನು ಕಾರ್ಯಗತಗೊಳಿಸಬಹುದಾದ ಜಾಗವನ್ನೇ ಕಾಲ್ಪನಿಕ ಸ್ವರ್ಗವೆಂದು ಭಾವಿಸುವನು. ಭೌತಿಕ ಮರಣದ ನಂತರ ಅಂತಹ ಸ್ವರ್ಗವನ್ನು ತಲುಪುವದೇ ಆತನ ಮೋಕ್ಷವಾಗಿರುವದು.

ಸಹಜವಾಗಿ ಬೌದ್ಧಿಕತೆಯನ್ನು ಹೊಂದಿರುವ ಮಾನವನು ಯಾವಾಗಲೂ ತರ್ಕದ ಮೂಲಕ ತನ್ನ ಅಪೇಕ್ಷೆಗಳು ಮತ್ತು ಆಸಕ್ತಿಗಳನ್ನು ನಿಯಂತ್ರಿಸಲು ಪ್ರಯತ್ನಿಸುವನು. ಅಪೇಕ್ಷೆಗಳನ್ನು ಪೂರ್ಣಗೊಳಿಸುವಿಕೆಯು ಎಲ್ಲಿ ನೆಲೆಸಿದೆ, ಅನೇಕ ಆಸಕ್ತಿಗಳಲ್ಲಿ ಯಾವ ನಿರ್ದಿಷ್ಟ ಆಸಕ್ತಿಗೆ ಮೊಟ್ಟ ಮೊದಲು ಪ್ರಾಮುಖ್ಯತೆ

ನೀಡಬೇಕು, ಆದರ್ಶ ಜೀವನದ ಸ್ವಭಾವವೇನು? ಗುರಿಯನ್ನು ತಲುಪಲು ಮತ್ತು ಸ್ವಭಾವವನ್ನು ಪರಿಶುದ್ಧಗೊಳಿಸಲು ತರ್ಕಬದ್ಧವಾಗಿರುವ ಯಾವ ಆಯಾಮವನ್ನು ಹೇಗೆ ಅನುಸರಿಸಬೇಕು? ಆತನು ಯಾವಾಗಲೂ ಈ ವಿಚಾರಗಳ ಬಗ್ಗೆ ಚಿಂತಿಸುತ್ತಿರುವನು. ಆ ಆದರ್ಶ ತತ್ತ್ವ ಮತ್ತು ಸ್ವಭಾವದ ಕೆಲವು ನಿಯಂತ್ರಿತ ಅನಿವಾರ್ಯವೆನಿಸುವ ಬೆಳವಣಿಗೆಯನ್ನು ತನ್ನ ಧರ್ಮವಾಗಿ ದೃಢಪಡಿಸಿಕೊಳ್ಳಲು ಆತನು ಸಿದ್ಧನಿರುವನು. ಧರ್ಮದ ಇಂತಹ ಕರಣ ಸಾಮರ್ಥ್ಯವು ನಿಜಕ್ಕೂ, ತರ್ಕಬದ್ಧ ಜ್ಞಾನದ ಮೂಲಕ ಪ್ರಕಾಶಭರಿತವಾಗಿರುವ ಮುಂದುವರಿದ ಸಮಾಜದ ನಿಯಾಮಕನಾಗಿದೆ.

ಆಧ್ಯಾತ್ಮಿಕವಾಗಿ ಪ್ರಭಾವಶಾಲಿಯಾದ ಮಾನವನು ದೇಹ, ಪ್ರಾಣ, ಮನಸ್ಸು ಮತ್ತು ಬುದ್ಧಿಗಳ ಆಚೆಯಿರುವ ರಹಸ್ಯ ಆತ್ಮದ ಬಗ್ಗೆ ಜಾಗೃತವಾಗಿರುವನು. ಸ್ವ–ಜ್ಞಾನವನ್ನು ಆಧರಿಸಿರುವದು ಆತನ ಜೀವನದ ಚಲನೆ. ಮುಕ್ತಿ, ಸ್ವ–ಅರಿವು ಮತ್ತು ದೈವವನ್ನು ತಲುಪುವುದರ ಕಡೆ ಆತನ ಎಲ್ಲಾ ಚಟುವಟಿಕೆಗಳು ನಿಯೋಜಿತವಾಗಿರುವವು. ಇವೇ ಜೀವನದ ಅತ್ಯುನ್ನತ ಸ್ಥಿತಿಯೆಂದು ಆತನು ಅರಿತಿರುವನು. ಆ ಜೀವನದ ಪಥ ಮತ್ತು ಆ ಆದರ್ಶದ ಕಡೆ ವೃದ್ಧಿಸುವದೇ ತನ್ನ ಧರ್ಮವೆಂದು ಆತನು ಪರಿಗಣಿಸುವನು. ಆತ್ಮ ಸಾಕ್ಷಾತ್ಕಾರಕ್ಕೆ ಆ ಹಾದಿಯು ಸಹಾಯಕವಾಗಿರುವದು ಮತ್ತು ವಿಕಸನದ ಚಲನೆಯನ್ನು ಆ ಗುರಿಯತ್ತ ಕರೆದುಕೊಂಡು ಹೋಗುವದು ಎಂದೂ ಸಹ ಆತನು ತಿಳಿದಿರುವನು. ಅಂತಹ ಧರ್ಮ ಮತ್ತು ಆದರ್ಶದಿಂದ ಪ್ರೇರೇಪಿತವಾಗಿರುವ ಸಮಾಜವು ಅತ್ಯುನ್ನತ ಮಟ್ಟದ್ದಾಗಿರುವದು.

ಭೌತ ಜೀವನದಿಂದ ತರ್ಕ ನಂತರ ತರ್ಕದಿಂದ ಸುಪ್ರ ವಿವೇಚನಾಶೀಲ ಪ್ರೇಮಗಳೇ ಭಗವಂತನ ಶಿಖರಾಗ್ರಗಳ ಕಡೆಗಿನ ಮಾನವನ ಆರೋಹಣದ ಹೆಜ್ಜೆಗಳು.

**ಬೆಂಗಾಲಿ ಬರಹಗಳು: 177**

**ತರ್ಕಬದ್ಧತೆಯ ನಿಯಮ**

ಒಂದು ನಿರ್ದಿಷ್ಟ ಸಮಾಜದಲ್ಲಿ ವಿಕಸನದ ಒಂದೇ ಒಂದು ಗೆರೆಯು ಇರುವುದಿಲ್ಲ. ಸರಿ ಸುಮಾರು ಎಲ್ಲಾ ಸಮಾಜಗಳಲ್ಲಿ ಈ ಮೂರು ವಿಧದ ಜನರು ಅಸ್ತಿತ್ವದಲ್ಲಿ ಇರುವರು. ಮಿಶ್ರಿತವಾದುದಾಗಿರುವದು. ಇಂತಹ ಜನರ ಸಮೂಹವನ್ನು ಒಳಗೊಂಡಿರುವ ಸಮುದಾಯ.

ತರ್ಕವನ್ನು ಅವಲಂಬಿಸಿರುವ ಸಾಮಾನ್ಯ ಜನರು ಸಮಾಜದಲ್ಲಿ ಇರುವರು. ಚೇತನವನ್ನು ಅವಲಂಬಿಸಿರುವ ಜನರು ಸಹ ಇರುವರು. ಇವರ ಸಂಖ್ಯೆ ಬಹಳ ಕಡಿಮೆ, ಅವ್ಯವಸ್ಥಿತ ಮತ್ತು ಅಪರಿಪೂರ್ಣವಾಗಿದ್ದರೆ ಆಗ ಸಮಾಜದ ಮೇಲೆ ಅವರ ಪ್ರಭಾವವು ಬಹಳ ಕಡಿಮೆಯಾಗಿ ಇರುವದು. ಆದರೂ ಅಲ್ಪ ಸ್ವಲ್ಪ ಪ್ರಗತಿಯನ್ನು ಅವರು ಉಂಟು ಮಾಡುವರು, ಸಮಾಜದ ಮೇಲೆ ಹಿಡಿತವನ್ನು ಹೊಂದಿರುವರು. ಆದರೇನು ಅವರು ಅನೇಕರನ್ನು ವ್ಯವಸ್ಥಿತಗೊಳಿಸಿದರೆ ಮಾತ್ರ ಅವರ ಪ್ರಭಾವವು ಬಲಿಷ್ಠವಾಗುವದು. ಆದರೆ ಸಾಮಾನ್ಯ ಜನರ ಸಂಖ್ಯೆ ಅತ್ಯಧಿಕವಾಗಿ ಇರುವದು. ವಿವೇಚನಾಶೀಲ ಅಥವಾ ಆಧ್ಯಾತ್ಮಿಕ ಮಾನವನ ನಿಯಮವು ಅನೇಕ ಸಲ ವಿಕೃತವಾಗುವದು. ತರ್ಕಬದ್ಧತೆಯು ಅವನತಿಯನ್ನು ಹೊಂದಿ ಔಪಚಾರಿಕವಾಗುವುದು, ಸ್ವಂತ ಅಪೇಕ್ಷೆಯ ಒತ್ತಡಕ್ಕೆ ಆಧ್ಯಾತ್ಮಿಕ ಮಾನವನು ಒಳಗಾಗಬಹುದು. ಬಾಹ್ಯ ಸಂಪ್ರದಾಯಗಳಿಂದ ಪೀಡಿತನಾಗಿ ಅವುಗಳಿಗೆ ಸೋಲಬಹುದು. ಜೊತೆಗೆ ಜೀವರಹಿತನಾಗಿ ತನ್ನ ಗುರಿಯನ್ನು ಮರೆತು ಬೇರೆ ದಾರಿಯಲ್ಲಿ ಸಾಗಬಹುದು. ನಾವು ಯಾವಾಗಲೂ ಕಾಣುವದು ಇಂತಹುದೇ ಅಂತ್ಯವನ್ನು.

ತರ್ಕವು ಪ್ರಮುಖವಾಗಿರುವಾಗ, ಅದು ಸಮಾಜದ ನಾಯಕತ್ವವನ್ನು ವಹಿಸಿಕೊಳ್ಳುವುದು. ಅದು ಅವಿವೇಕದ ರಚನೆಗಳನ್ನು ನಾಶ ಮಾಡಿ ಅಥವಾ ಬದಲಾಯಿಸಿ ಬೌದ್ಧಿಕ ಜ್ಞಾನದಿಂದ ಪ್ರಕಾಶಮಾನವಾಗಿರುವ ಧರ್ಮವನ್ನು ಸ್ಥಾಪಿಸಲು ಪ್ರಯತ್ನಿಸುವುದು.

ಪಶ್ಚಿಮದ ಪ್ರಬೋಧನೆಯಾದ – ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವಗಳು – ಈ ಪ್ರಯತ್ನಗಳ ಒಂದು ರೂಪವಾಗಿದೆ ಸಫಲತೆಯ ಅಸಾಧ್ಯ. ವಿವೇಚನಾಶೀಲ ಮಾನವನು ಸಹ ಆಧ್ಯಾತ್ಮಿಕ ಜ್ಞಾನವು ಇಲ್ಲದಿರುವದರಿಂದ, ಶರೀರ, ಪ್ರಾಣ ಮತ್ತು ಮನಸ್ಸುಗಳ ಒತ್ತಡಕ್ಕೆ ಒಳಗಾಗಿ ತನ್ನ ಧ್ಯೇಯವನ್ನೇ ವಿಕೃತಗೊಳಿಸುವನು. ಈ ಹಂತವು ಮಧ್ಯಸ್ಥ ಸ್ತರ ಮಾತ್ರವಾಗಿದ್ದು ಇಲ್ಲಿ ಸುಭದ್ರತೆಯು ಇರಲು ಸಾಧ್ಯವಿಲ್ಲ – ಇಲ್ಲಿ ಅವನತಿ ಅಥವಾ ಔನ್ನತ್ಯದ ಕಡೆಗಿನ ಆರೋಹಣವಿರುವದು. ತರ್ಕವು ಈ ಎರಡು ಸೆಳತಗಳ ಮಧ್ಯೆ ತೂಗಾಡುತ್ತಿರುವದು.

**ಬೆಂಗಾಲಿ ಬರಹಗಳು: 178** **– ಶ್ರೀ ಅರವಿಂದರು**

# ಸನಾತನ ಧರ್ಮ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಆರ್ಯ ಧರ್ಮದ ಮೂಲಗಳು

ಈ ಜ್ಞಾನದ (ಸನಾತನ ಧರ್ಮದ) ಹಾಗೂ ಸಾಧನೆಯ ಪ್ರಥಮ ಸ್ವರೂಪವನ್ನು ಹಾಗೂ ಹಂತವನ್ನು ಇತಿಹಾಸದ ಪ್ರಾರಂಭದಲ್ಲಿ, ಆರ್ಯ ಧರ್ಮ ಮಂದಿರದ ಪ್ರವೇಶ ದ್ವಾರದ ಬಳಿ ಇರುವ ಸ್ತೂಪದ ಮೇಲೆ ಕೆತ್ತಲಾದ ಮೊಟ್ಟಮೊದಲಿನ ಅಕ್ಷರಗಳನ್ನು ಋಗ್ವೇದದಲ್ಲಿ ಕಾಣುತ್ತೇವೆ. ಅದು ಋಗ್ವೇದದಲ್ಲಿ ಮೊದಲ ಬಾರಿಗೆ ಅಭಿವ್ಯಕ್ತಗೊಂಡಿದೆ ಎನ್ನುವುದನ್ನು ನಾವು ನಿಶ್ಚಿತವಾಗಿ ಹೇಳಲಾರೆವು. ಏಕೆಂದರೆ, ಋಗ್ವೇದದ ಋಷಿಗಳಿಗಿಂತ ಮೊದಲಿದ್ದ ಋಷಿಗಳು, ಮನುಕುಲದ ಪುರಾತನ ಪಿತೃಗಳು”ಎಂದು ಕರೆಯಲ್ಪಡುವ ಆರ್ಯ ಜನಾಂಗದ ಆದಿ ಪೂರ್ವಜರು, ನಂತರದ ಮಾನವನಿಗಾಗಿ ಸತ್ಯದ ಹಾಗೂ ಅಮೃತತ್ವದ ಈ ಮಾರ್ಗವನ್ನು ಕಂಡು ಹಿಡಿದಿದ್ದರೆಂದು ಋಗ್ವೇದದ ಋಷಿಗಳೂ ಸಹ ಒಪ್ಪಿಕೊಳ್ಳುತ್ತಾರೆ. ಪ್ರಾಚೀನ ಋಷಿಗಳಿಂದ ತೋರಿಸಲ್ಪಟ್ಟ ಮಾರ್ಗವನ್ನು ಮಾತ್ರ ಅಭಿನವ ಋಷಿಗಳು ಅನುಸರಿಸುತ್ತಾರೆ ಎನ್ನುವುದನ್ನೂ ಸಹ ಅವರು ಹೇಳುತ್ತಾರೆ. ಋಗ್ವೇದದ ಮಂತ್ರವು ಪಿತೃಗಳ”ನುಡಿಗಳ, ಅವರು ಉಚ್ಚರಿಸಿದ ದೈವೀ ವಾಣಿಯ ಪ್ರತಿಧ್ವನಿಯಾಗಿದೆ ಎನ್ನುವುದನ್ನು ನಾವು ಕಾಣುತ್ತೇವೆ; ಅದರ ಫಲವಾಗಿ, ಋಗ್ವೇದದಲ್ಲಿ ನಾವು ನೋಡುವಂಥ ಧರ್ಮದ ಸ್ವರೂಪವು ಅದರ ಮೊಟ್ಟಮೊದಲ ಸ್ವರೂಪವೆಂದು ಹೇಳಬಹುದು. ಉಪನಿಷತ್ತುಗಳ ಜ್ಞಾನ, ವೇದಾಂತದ ಸಾಧನೆ, ಈ ಧರ್ಮದ ಅತ್ಯಂತ ಉದಾತ್ತ ಹಾಗೂ ಉದಾರ ಪರಿವರ್ತನೆಗಳು ಮಾತ್ರ. ಪರಮಶಕ್ತನ ಜ್ಞಾನ, ವೇದಗಳ ದೈವೀ ಜೀವನವನ್ನು ಹೊಂದಲು ಮಾಡುವ ಸಾಧನೆ, ಆತ್ಮ ಜ್ಞಾನ ಮತ್ತು ಉಪನಿಷತ್ತುಗಳ ಬ್ರಹ್ಮನನ್ನು ಅರಿತುಕೊಳ್ಳಲು ಮಾಡುವ ಸಾಧನೆ, ಇವೆರಡೂ ಸಂಯೋಜಿತ ಧರ್ಮದ ಮೇಲೆ ಆಧರಿಸಿವೆ; ಬ್ರಹ್ಮಾಂಡ ಪುರುಷನ ಹಾಗೂ ಬ್ರಹ್ಮಾಂಡ ಶಕ್ತಿಯ ವಿವಿಧ ಅಂಶಗಳು, ಬ್ರಹ್ಮನ ಸರ್ವ ಸತ್ಯಗಳನ್ನು ಒಂದುಗೂಡಿಸುವ ಸರ್ವಶಕ್ತನ ಅನುಭವ ಹಾಗೂ ಪರಬ್ರಹ್ಮನ ಅನ್ವೇಷಣೆಯು ಅದರ ಅಮೂಲಾಗ್ರವಾದ ವಸ್ತು ವಿಷಯಗಳಾಗಿವೆ.

**ಬೆಂಗಾಲಿ ಬರಹಗಳು: 61–62**

**ಸನಾತನ ಧರ್ಮ ಮತ್ತು ಭಾರತ**

ನಾವು ಆಗಾಗ್ಗೆ, ಹಿಂದೂ ಧರ್ಮದ, ಸನಾತನ ಧರ್ಮದ ಬಗ್ಗೆ ಮಾತನಾಡುತ್ತೇವೆ, ಅದರೆ ಆ ಧರ್ಮವು ಏನೆಂದು ನಿಜವಾಗಿಯೂ ತಿಳಿದುಕೊಂಡವರು ನಮ್ಮಲ್ಲಿ ಕೆಲವರು ಮಾತ್ರ. ಇನ್ನುಳಿದ ಧರ್ಮಗಳು, ನಂಬಿಕೆಯ ಮತ್ತು ವೃತ್ತಿಯ ಪೂರ್ವಭಾವಿ ಧರ್ಮಗಳಾಗಿವೆ, ಆದರೆ ಸನಾತನ ಧರ್ಮವು ಸ್ವತಃ ಜೀವನವಾಗಿದೆ; ಇದು ಜೀವಂತವಿದೆ ಎಂದು ನಂಬಲಾರದಂಥ ಸಂಗತಿಯಾಗಿದೆ. ಈ ಧರ್ಮವು, ಮಾನವ ಕುಲದ ವಿಮೋಚನೆಗಾಗಿ, ಈ ದ್ವೀಪಕಲ್ಪದ ಏಕಾಂತತೆಯಲ್ಲಿ ಪುರಾತನ ಕಾಲದಿಂದ ಪೋಷಿಸಲ್ಪಟ್ಟಂಥ ಧರ್ಮವಾಗಿದೆ. ಭಾರತವು ಅಭಿವೃದ್ಧಿ ಹೊಂದುತ್ತಿರುವುದಕ್ಕೆ ಈ ಧರ್ಮವು ಕೊಡುಗೆ ನೀಡಿದೆ. ಸ್ವಾರ್ಥಕ್ಕಾಗಿ ಅಥವಾ ತಾನು ಬಲಶಾಲಿಯಾದಾಗ ದುರ್ಬಲರನ್ನು ತುಳಿದುಹಾಕಲು ಇತರ ದೇಶಗಳು ಅಭಿವೃದ್ಧಿ ಹೊಂದಿದಂತೆ ಭಾರತ ಮಾತೆಯು ಅಭಿವೃದ್ಧಿ ಹೊಂದಿಲ್ಲ. ಜಗತ್ತಿನ ಮೇಲೆ ಅನಂತ ಪ್ರಕಾಶವನ್ನು ಹರಡಲು ಅವಳು ಉದಯಿಸುತ್ತಿದ್ದಾಳೆ. ಭಾರತವು, ತನಗಾಗಿ ಅಸ್ತಿತ್ವದಲ್ಲಿರದೆ ಮಾನವ ಕುಲಕ್ಕಾಗಿ ಅಸ್ತಿತ್ವದಲ್ಲಿದೆ, ಅವಳು (ಭಾರತ ಮಾತೆ) ಶ್ರೇಷ್ಠವಾಗಿರಲೇಬೇಕಾಗಿದ್ದು ಮಾನವತೆಗಾಗಿ, ತನಗಾಗಿ ಅಲ್ಲ.

ಈ ಮೊದಲು ನಿನಗೆ ನಿಜವಾಗಿಯೂ ತಿಳಿದಿರದ ಈ ಧರ್ಮವು ಸನಾತನ ಧರ್ಮ ಇದಾಗಿದೆ, ಚಿರಂತನವಾದ ಧರ್ಮ ಇದಾಗಿದೆ, ಆದರೆ ನಾನು ಈಗ ನಿನಗೆ ತಿಳಿಯಪಡಿಸಿದ್ದು ಈ ಧರ್ಮದ ಬಗ್ಗೆ. ನಿನ್ನಲ್ಲಿರುವ ನಾಸ್ತಿಕವಾದಿಗೆ ಮತ್ತು ಸಂದೇಹವಾದಿಗೆ ಉತ್ತರವನ್ನು ನೀಡಲಾಗಿದೆ, ನಾನು ನಿನಗೆ ನೀಡಿದ ಭೌತಿಕ ಹಾಗೂ ಆತ್ಮನಿಷ್ಠ ಪುರಾವೆಗಳನ್ನು (ನಿನ್ನೊಳಗೆ ಮತ್ತು ನೀನಿರದೆ) ನೀಡಿದ್ದರಿಂದ ನೀನು ತೃಪ್ತನಾಗಿರುವಿ. ನೀನು ಮುಂದುವರೆದಂತೆ, ಅವರು ಉದಯಿಸಿದ್ದು ಸನಾತನ ಧರ್ಮಕ್ಕಾಗಿ, ಜಗತ್ತಿಗಾಗಿ, ಅವರಿಗಾಗಿ ಅಲ್ಲ ಎನ್ನುವುದನ್ನು ನೀನು ನಿನ್ನ ರಾಷ್ಟ್ರಕ್ಕೆ ಯಾವಾಗಲೂ ಹೇಳಬೇಕು. ಜಗತ್ತಿನ ಸೇವೆಯನ್ನು ಮಾಡುವುದಕ್ಕಾಗಿ ನಾನು ಅವರಿಗೆ ಸ್ವಾತಂತ್ರ್ಯವನ್ನು ನೀಡುತ್ತಿದ್ದೇನೆ. ಯಾವಾಗ ಭಾರತವು ಉದಯವಾಗುತ್ತದೆ ಎಂದು ಹೇಳಲಾಗುತ್ತದೆಯೊ, ಆಗ ಉದಯವಾಗುವುದು ಸನಾತನ ಧರ್ಮವು. ಯಾವಾಗ ಭಾರತವು ಶ್ರೇಷ್ಠವೆಂದು ಎಂದು ಹೇಳಲಾಗುತ್ತದೆಯೊ, ಆಗ ಶ್ರೇಷ್ಠವಾಗುವುದು ಸನಾತನ ಧರ್ಮವು. ಯಾವಾಗ ಭಾರತವು ವಿಸ್ತಾರಗೊಳ್ಳುತ್ತದೆ ಮತ್ತು (ಭಾರತ ಮಾತೆಯು ತನ್ನನ್ನು ತಾನು

ವಿಸ್ತರಿಸಿಕೊಳ್ಳುತ್ತಾಳೆ) ಎಂದು ಹೇಳಲಾಗುತ್ತದೆಯೊ, ಆಗ ವಿಸ್ತಾರಗೊಳ್ಳುವುದು ಸನಾತನ ಧರ್ಮವು ಮತ್ತು ಜಗತ್ತಿನೆಲ್ಲೆಡೆ ವ್ಯಾಪಿಸುವುದು ಭಾರತ ಮಾತೆ. ಭಾರತದ ಅಸ್ತಿತ್ವವಿರುವುದು ಧರ್ಮಕ್ಕಾಗಿ ಮತ್ತು ಅದರ ಧರ್ಮದಿಂದ. ಧರ್ಮವನ್ನು ಕೊಂಡಾಡುವುದೆಂದರೆ ರಾಷ್ಟ್ರವನ್ನು ಕೊಂಡಾಡಿದಂತೆ. ನನ್ನ ಅಸ್ತಿತ್ವವು ಎಲ್ಲ ಕಡೆಯೂ ಇದೆ ಮತ್ತು ಎಲ್ಲ ಮಾನವರಲ್ಲೂ ಹಾಗೂ ವಸ್ತುಗಳಲ್ಲೂ ಇದೆ ಎನ್ನುವುದನ್ನು, ನಾನು ಈ ಕ್ರಿಯೆಯಲ್ಲಿ ತೊಡಗಿದ್ದೇನೆ ಎನ್ನುವುದನ್ನು ಮತ್ತು ದೇಶಕ್ಕಾಗಿ ಶ್ರಮಿಸುವವರಲ್ಲಿ ಮಾತ್ರ ನಾನು ಕಾರ್ಯನಿರ್ವಹಿಸುತ್ತಿಲ್ಲ ಆದರೆ ಶ್ರಮಿಸುವವರನ್ನು ವಿರೋಧಿಸುವವರಲ್ಲಿ ಮತ್ತು ಅವರ ಪಥದಲ್ಲಿ ನಿಲ್ಲುವವರಲ್ಲೂ ನಾನು ಕಾರ್ಯನಿರ್ವಹಿಸುತ್ತಿದ್ದೇನೆ ಎನ್ನುವುದನ್ನು ನಾನು ನಿಮಗೆ ತೋರಿಸಿದ್ದೇನೆ. ನಾನು ಎಲ್ಲರಲ್ಲೂ ಕಾರ್ಯನಿರ್ವಹಿಸುತ್ತಿದ್ದೇನೆ ಮತ್ತು ಮಾನವರು ಏನನ್ನೇ ಯೋಚಿಸಲಿ ಅಥವಾ ಏನನ್ನೇ ಮಾಡಲಿ ನನ್ನ ಉದ್ದೇಶ ಈಡೇರಲು ಸಹಾಯ ಮಾಡುವುದನ್ನು ಬಿಟ್ಟು ಬೇರೆ ಏನನ್ನೂ ಮಾಡುವುದಿಲ್ಲ. ಅವರೂ ಸಹ ನನ್ನ ಕಾರ್ಯವನ್ನು ಮಾಡುತ್ತಿದ್ದಾರೆ; ಅವರು ನನ್ನ ಶತ್ರುಗಳಲ್ಲ, ಅವರು ನನ್ನ ಸಾಧನಗಳು. ನಿನ್ನ ಎಲ್ಲ ಕ್ರಿಯೆಗಳಲ್ಲಿ, ನೀನು ಮುಂದೆ ಸಾಗುತ್ತಿರುವಿ (ಯಾವ ದಿಕ್ಕಿನಲ್ಲಿ ಚಲಿಸುತ್ತಿರುವಿ ಎನ್ನುವುದನ್ನು ತಿಳಿಯದೆ). ನೀನು ಒಂದು ಕಾರ್ಯವನ್ನು ಮಾಡಬೇಕೆಂದು ಯೋಚಿಸುವಿ, ಆದರೆ ಮತ್ತೊಂದನ್ನು ಮಾಡುವಿ. ನೀನು ಒಂದು ಫಲಿತಾಂಶದ ಮೇಲೆ ಗುರಿಯನ್ನು ಹೊಂದುವಿ,  ಆದರೆ ನಿನ್ನ ಪ್ರಯತ್ನಗಳು ಸಾಧನವಾಗುವುದು ಭಿನ್ನವಾದುದಕ್ಕೆ ಅಥವಾ ವ್ಯತಿರಿಕ್ತವಾದುದಕ್ಕೆ. ಮುಂದುವರೆದಿರುವುದು ಮತ್ತು ಜನರಲ್ಲಿ ಪ್ರವೇಶ ಮಾಡಿರುವುದು ಶಕ್ತಿಯಾಗಿದೆ. ನಾನು ಈ ಬಂಡಾಯಕ್ಕಾಗಿ ಬಹಳ ಹಿಂದಿನಿಂದ ತಯಾರಿ ಮಾಡುತ್ತಿದ್ದೇನೆ. ಅದರ ನೆರವೇರಿಕೆಗೆ ನಾನು ನೇತೃತ್ವವಹಿಸುವ ಸಮಯ ಈಗ ಬಂದಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/6–11**

## ಸನಾತನ ಧರ್ಮ ಮತ್ತು ಹಿಂದೂ ಧರ್ಮ

"ಧರ್ಮದ ರಕ್ಷಣೆಗಾಗಿ ಸಮಾಜ" ಎನ್ನುವುದು ನಿಮ್ಮ ಸಮಾಜದ ಹೆಸರಾಗಿದೆ. ನಮ್ಮ ಮುಂದೆ, ಹಿಂದೂ ಧರ್ಮದ ಜಗತ್ತಿನ ಮುಂದೆ ಇರುವ ಕಾರ್ಯವು, ಧರ್ಮದ ರಕ್ಷಣೆ, ರಕ್ಷಣೆ ಮತ್ತು ಅದನ್ನು ಉನ್ನತ ಮಟ್ಟಕ್ಕೇರಿಸುವುದಾಗಿದೆ. ಆದರೆ ಹಿಂದೂ ಧರ್ಮವೆಂದರೇನು? ನಾವು ಸನಾತನ

ಧರ್ಮವೆಂದು ಕರೆಯುವ ಈ ಧರ್ಮವು ಏನಾಗಿದೆ? ಹಿಂದೂ ದೇಶವು ಅದನ್ನು ಪೋಷಿಸಿದ್ದರಿಂದ ಮಾತ್ರ ಅದು ಹಿಂದೂ ಧರ್ಮವಾಗಿದೆ. ಸಾಗರಗಳ ಮತ್ತು ಹಿಮಾಲಯಗಳ ಏಕಾಂತತೆಯಲ್ಲಿ, ಈ ದ್ವೀಪ ಕಲ್ಪದಲ್ಲಿ ಅದು ತಲೆಯೆತ್ತಿದ್ದರಿಂದ ಅದು ಹಿಂದೂ ಧರ್ಮವಾಗಿದೆ. ಈ ಪವಿತ್ರ ಹಾಗೂ ಪ್ರಾಚೀನ ಭೂಮಿಯಲ್ಲಿ, ಯುಗಗಳ ಮೂಲಕ ಅದನ್ನು ಸಂರಕ್ಷಿಸುವ ಕಾರ್ಯವನ್ನು ಆರ್ಯರಿಗೆ ನೀಡಿದ್ದರಿಂದ ಅದು ಹಿಂದೂ ಧರ್ಮವಾಗಿದೆ. ಆದರದು, ಒಂದೇ ದೇಶದ ಮಿತಿಗಳಿಂದ ಸುತ್ತುವರೆದಿಲ್ಲ. ವಿಶೇಷವಾಗಿ ಮತ್ತು ಎಂದಿಗೂ ಅದು ಜಗತ್ತಿನ ಪರಿವೃತವಾದ ಒಂದು ಭಾಗಕ್ಕೆ ಸೇರಿಲ್ಲ. ನಾವು ಯಾವುದನ್ನು ಹಿಂದೂ ಧರ್ಮವೆಂದು ಕರೆಯುತ್ತೇವೆಯೊ, ಅದು ನಿಜವಾಗಿಯೂ ಸನಾತನ ಧರ್ಮವಾಗಿದೆ, ಏಕೆಂದರೆ, ಅದು ಜಗತ್ತಿನ ಉಳಿದೆಲ್ಲ ಧರ್ಮಗಳನ್ನು ಅಂಗೀಕರಿಸುವಂಥ ಸಾರ್ವಕಾಲಿಕ/ವಿಶ್ವವ್ಯಾಪಿ ಧರ್ಮವಾಗಿದೆ. ವಿಶ್ವವ್ಯಾಪಿಯಾಗಿರದ ಧರ್ಮವು ಸನಾತನ ಧರ್ಮವಾಗಿರಲಾರದು. ಒಂದು ಸಂಕುಚಿತ ಧರ್ಮವು, ಒಂದು ಪಂಥಾನುಯಾಯಿ ಧರ್ಮವು, ಒಂದು ಮೀಸಲಾದ ಧರ್ಮವು ಒಂದು ಸೀಮಿತ ಸಮಯದವರೆಗೆ ಮತ್ತು ಒಂದು ಸೀಮಿತ ಉದ್ದೇಶಕ್ಕಾಗಿ ಬಾಳುತ್ತದೆ. ಈ ಧರ್ಮವು (ಸನಾತನ), ವಿಜ್ಞಾನದ ಆವಿಷ್ಕಾರಗಳನ್ನು ಮತ್ತು ತತ್ತ್ವ ಶಾಸ್ತ್ರದ ಕಲ್ಪನೆಗಳನ್ನು ಒಳಗೊಳ್ಳುತ್ತ ಮತ್ತು ನಿರೀಕ್ಷಿಸುತ್ತ ಪ್ರಾಪಂಚಿಕ ವಾದದ ಮೇಲೆ ಗೆಲುವು ಸಾಧಿಸಬಹುದಾದಂಥ ಒಂದು ಧರ್ಮವಾಗಿದೆ. ಈ ಧರ್ಮವು, ದೇವರ ಸಾಮಿಪ್ಯವನ್ನು ಮಾನವ ಕುಲದ ಮೇಲೆ ಪ್ರಭಾವ ಬೀರುವಂಥ ಮತ್ತು ತನ್ನ ಪರೀಧಿಯಲ್ಲಿ (ದೇವರನ್ನು ಸಮೀಪಿಸಲು) ಸಾಧ್ಯವಾದ ಎಲ್ಲ ಸಾಧನಗಳನ್ನು/ ಉಪಾಯಗಳನ್ನು ಅಪ್ಪಿಕೊಳ್ಳುವಂಥ ಒಂದು ಧರ್ಮವಾಗಿದೆ. ಇದು (ಸನಾತನ ಧರ್ಮವು) ಎಲ್ಲ ಧರ್ಮಗಳು ಕೃತಜ್ಞತೆಯಿಂದ ಸ್ಮರಿಸುವಂಥ ಸತ್ಯಕ್ಕಾಗಿ (ದೇವರು ಎಲ್ಲ ಮನುಷ್ಯರಲ್ಲೂ ಮತ್ತು ವಸ್ತುಗಳಲ್ಲೂ ಇರವನು ಮತ್ತು ಅವನಲ್ಲಿ ನಾವು ಬೇಡಿಕೊಳ್ಳುತ್ತೇವೆ ಮತ್ತು ನಮ್ಮ ಅಸ್ತಿತ್ವವನ್ನು ಪಡೆದುಕೊಳ್ಳುತ್ತೇವೆ ಎನ್ನುವ ಸತ್ಯಕ್ಕಾಗಿ) ಪ್ರತಿ ಕ್ಷಣವೂ ಆಗ್ರಹಿಸುವಂಥ ಒಂದು ಧರ್ಮವು ಇದಾಗಿದೆ. ಇದು, ಈ ಸತ್ಯವನ್ನು ನಾವು ತಿಳಿದುಕೊಳ್ಳುವಂತೆ ಮತ್ತು ನಂಬುವಂತೆ ನಮ್ಮನ್ನು ಸಮರ್ಥರನ್ನಾಗಿ ಮಾಡುವುದಷ್ಟೇ ಅಲ್ಲದೆ ನಮ್ಮ ಇರುವಿಕೆಯ ಪ್ರತಿಯೊಂದು ಭಾಗದೊಂದಿಗೆ ಅದನ್ನು ಮನಗಾಣುವಂತೆ ಸಮರ್ಥರನ್ನಾಗಿ ಮಾಡುವ ಧರ್ಮವು ಇದಾಗಿದೆ. ಈ ಪ್ರಪಂಚವು ವಾಸುದೇವನ ಲೀಲೆಯಾಗಿದೆ ಎಂದು ಜಗತ್ತಿಗೆ ತೋರಿಸುವಂಥ ಒಂದು ಧರ್ಮವು ಇದಾಗಿದೆ. ಆ ಲೀಲೆಯಲ್ಲಿ, ಅದರ ಅತ್ಯಂತ ಸೂಕ್ಷ್ಮ ವಿಧಿಗಳಲ್ಲಿ

ಹಾಗೂ ಅದರ ಅತ್ಯಂತ ಉದಾತ್ತ ನಿಯಮಗಳಲ್ಲಿ ನಾವು ನಮ್ಮ ಪಾತ್ರವನ್ನು ಹೇಗೆ ಉತ್ತಮವಾಗಿ ನಿಭಾಯಿಸಬಹುದು ಎನ್ನುವುದನ್ನು ನಮಗೆ ತೋರಿಸುವಂಥ ಒಂದು ಧರ್ಮವು ಇದಾಗಿದೆ. ಧರ್ಮದಿಂದ ಜೀವನವನ್ನು ಯಾವುದೇ ಸೂಕ್ಷ್ಮ ವಿವರಣೆಯಲ್ಲಿ ಬೇರ್ಪಡಿಸದಂಥ ಒಂದು ಧರ್ಮವು ಇದಾಗಿದೆ. ಅಮೃತತ್ತ್ವ ಎಂದರೆ ಏನು ಎಂದು ತಿಳಿದಂಥ ಮತ್ತು ಸಾವಿನ ಸತ್ಯತೆಯನ್ನು ನಮ್ಮಿಂದ ಸಂಪೂರ್ಣವಾಗಿ ತೆಗೆದುಹಾಕಿದಂಥ ಧರ್ಮವು ಇದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/11–12**

### ಸನಾತನ ಧರ್ಮ ಮತ್ತು ರಾಷ್ಟ್ರೀಯತೆ

ಇಂದು ನಿಮ್ಮೊಡನೆ ಮಾತನಾಡಲು, ನನಗೆ ಸಲಹೆ ಮಾಡಿದಂಥ ಶಬ್ದವು ಇದಾಗಿದೆ. ನಾನು ಮಾತನಾಡಲು ಬಯಸಿದ್ದನ್ನು ನನ್ನಿಂದ ದೂರ ಇರಿಸಲಾಗಿದೆ ಮತ್ತು ನನಗೆ ಏನನ್ನು (ಮಾತನಾಡಲು) ಕೊಡಲಾಗಿತ್ತೊ ಅದರಾಚೆ, ನನಗೆ ಹೇಳುವುದು ಏನೂ ಇಲ್ಲ. ನನಗೆ ಏನನ್ನು ಹೇಳಲು ಸಲಹೆ ಮಾಡಲಾಗಿತ್ತೊ, ಅದರ ಬಗ್ಗೆ ನಿಮಗೆ ಹೇಳಬಲ್ಲೆ. ಆ ಮಾತು ಈಗ ಮುಗಿದು ಹೋಗಿದೆ. ನನ್ನಲ್ಲಿರುವ ಈ ಬಲದೊಂದಿಗೆ ಈ ಮೊದಲು ಒಂದು ಸಲ ಮಾತನಾಡಿದ್ದೆ, ಈ ಆಂದೋಲನವು ರಾಜಕೀಯ ಆಂದೋಲನವಲ್ಲ ಮತ್ತು ರಾಷ್ಟ್ರೀಯತೆಯು ರಾಜಕೀಯವಲ್ಲ, ಅದರೆ ಅದೊಂದು ಧರ್ಮ, ಒಂದು ನಂಬಿಕೆ, ಒಂದು ಸಿದ್ಧಾಂತ ಎಂದು ನಾನು ಹೇಳಿದ್ದೆ. ನಾನದನ್ನು, ಇಂದು ಮತ್ತೆ ಹೇಳುತ್ತಿದ್ದೇನೆ, ಆದರೆ ಬೇರೆ ರೀತಿಯಲ್ಲಿ ಹೇಳುತ್ತಿದ್ದೇನೆ. ರಾಷ್ಟ್ರೀಯತೆಯು ಒಂದು ಸಿದ್ಧಾಂತ, ಒಂದು ನಂಬಿಕೆ, ಒಂದು ಧರ್ಮ ಎಂದು ಇನ್ನೆಂದೂ ಹೇಳುವುದಿಲ್ಲ; ಸನಾತನ ಧರ್ಮವು ನಮಗೆ ರಾಷ್ಟ್ರೀಯತೆ ಆಗಿದೆ ಎಂದು ನಾನು ಹೇಳುತ್ತೇನೆ. ಈ ಹಿಂದೂ ರಾಷ್ಟ್ರವು ಸನಾತನ ಧರ್ಮದೊಂದಿಗೆ ಜನಿಸಿತ್ತು. ಹಿಂದೂ ರಾಷ್ಟ್ರವು ಸನಾತನ ಧರ್ಮದೊಂದಿಗೆ ಚಲಿಸುತ್ತದೆ ಮತ್ತು ಬೆಳೆಯುತ್ತದೆ. ಸನಾತನ ಧರ್ಮವು ಅವನತಿ ಹೊಂದಿದಾಗ ರಾಷ್ಟ್ರವು ಪತನವಾಗುತ್ತದೆ. ಸನಾತನ ಧರ್ಮವು ಅಳಿಯಲು ಸಾಧ್ಯವಾಗುವುದಾದರೆ, ಸನಾತನ ಧರ್ಮದೊಂದಿಗೆ ರಾಷ್ಟ್ರವೂ ನಾಶ ಹೊಂದುತ್ತದೆ. ಸನಾತನ ಧರ್ಮವು ರಾಷ್ಟ್ರೀಯತೆಯಾಗಿದೆ. ನಾನು ನಿಮಗೆ ಹೇಳಬೇಕಾಗಿರುವ ಸಂದೇಶವು ಇದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/12**

## ಧರ್ಮದ ವಿಶ್ವಾತ್ಮಕ ಹಾಗೂ ವೈಯಕ್ತಿಕ ದೃಷ್ಟಿಕೋನಗಳು

ಈ ಜ್ಞಾನದ ಮೇಲೆ ಸ್ಥಾಪಿಸಲ್ಪಟ್ಟ ಜೀವನದ ಸಂಪೂರ್ಣ ಪದ್ಧತಿಯು ಭಾರತೀಯ ಸಂಸ್ಕೃತಿಯ (ಧರ್ಮದ) ದೃಷ್ಟಿಕೋನದಲ್ಲಾಗಿತ್ತು. ಈ ಧರ್ಮವು, ಯುಕ್ತ ತಿಳುವಳಿಕೆಯ ಮತ್ತು ಸ್ವ–ಸಂಸ್ಕೃತಿಯ ಸರಿಯಾದ ದೃಷ್ಟಿಕೋನದ ಅನುಗುಣವಾಗಿ, ವಿಷಯಗಳ ಹಾಗೂ ಜೀವನದ ಜ್ಞಾನದ ಮತ್ತು ಆ ಜ್ಞಾನದಲ್ಲಿ ಕ್ರಿಯೆಯ ಒಂದು ಜೀವನ ಕಲೆಯಾಗಿತ್ತು. ಈ ಪ್ರಕಾರವಾಗಿ, ಪ್ರತಿಯೊಬ್ಬ ಮನುಷ್ಯ, ವರ್ಗ, ಪ್ರಭೇದ ಮತ್ತು ವಂಶಗಳು ಮತ್ತು ಆತ್ಮದ, ಮನಸ್ಸಿನ, ಜೀವದ, ದೇಹದ ಪ್ರತಿಯೊಂದು ಚಟುವಟಿಕೆಯು ತನ್ನ ಧರ್ಮವನ್ನು ಹೊಂದಿದೆ. ಆದರೆ, ಅತ್ಯಂತ ದೊಡ್ಡದಾದ ಅಥವಾ ಕನಿಷ್ಠ ಪಕ್ಷ ಧರ್ಮದ ಅತ್ಯಂತ ಮಹತ್ವದ ಭಾಗವನ್ನು ಸಂಸ್ಕೃತಿ ಮತ್ತು ಮನುಷ್ಯನ ನೈತಿಕ ಸ್ವಭಾವದ ವ್ಯವಸ್ಥೆಗೊಳಿಸುವಿಕೆ ಎಂದು ಭಾವಿಸಲಾಗಿತ್ತು. ಜೀವನದ ನೈತಿಕತೆಯ ಅಂಶವು, ಕೆಲವು ರೀತಿಯ ವಿಮರ್ಶೆಗಳ ಅದ್ಭುತವಾದ ಅಜ್ಞಾನಪೂರಿತ ಅಭಿಪ್ರಾಯಕ್ಕೆ ಪ್ರತಿಯಾಗಿ ತುಂಬಾ ಅಗಾಧ ಪ್ರಮಾಣದ ಗಮನವನ್ನು ಸೆಳೆಯಿತು, ಶುದ್ಧ ಜ್ಞಾನದ ಮತ್ತು ಆತ್ಮದ ವಿಷಯಗಳಿಗೆ ಸಮರ್ಪಿಸಲಾರದಂಥ ಭಾರತೀಯ ಚಿಂತನೆಯ ಹಾಗೂ ಬರವಣಿಗೆಯ ಹೆಚ್ಚಿನ ಭಾಗವನ್ನು ವ್ಯಾಪಿಸಿತು, ಅಲ್ಲಿ ನೈತಿಕ ಮೌಲ್ಯಗಳ ರೂಪಿಸುವಿಕೆಯಿಲ್ಲ ಅಥವಾ ಅದರಲ್ಲಿ ತನ್ನ ಅತ್ಯುನ್ನತ ಕಲ್ಪನೆಯನ್ನು ಮತ್ತು ಆದರ್ಶ ಆಚರಣೆಯ ಒಂದು ದೈವೀ ಪ್ರಭುತ್ವವನ್ನು ತಲುಪದಂಥ ಆದರ್ಶವಿಲ್ಲವೆಂದು ಅದುಮಲ್ಪಟ್ಟಿತು. ಅಲ್ಲಿ ಕೆಲವು ಗಮನಾರ್ಹ ಕಲ್ಪನೆಗಳಿದ್ದರೂ, ಅದಕ್ಕೆ ಪ್ರತಿಯಾಗಿ, ಭಾರತೀಯ ಚಿಂತನೆಯು ಮಾನವನ ನೈತಿಕ ಸ್ವಭಾವವನ್ನು ಮತ್ತು ಜಗತ್ತಿನ ನೈತಿಕ ನಿಯಮವನ್ನು ಲಘುವಾಗಿ ತೆಗೆದುಕೊಂಡಿತು. ಮನುಷ್ಯನು ತನ್ನ ಬಯಕೆಗಳನ್ನು ಪೂರೈಸುವಲ್ಲಿ ಸಮರ್ಥನೆ ಹೊಂದಿದ್ದಾನೆಂದು ಅದು ಪರಿಗಣಿಸಿತು, ಏಕೆಂದರೆ ಜೀವನದ ತೃಪ್ತಿಗಾಗಿ ಮತ್ತು ವಿಸ್ತರಣೆಗಾಗಿ ಅದು ಅವಶ್ಯಕವಾಗಿತ್ತು, ಆದರೆ ತನ್ನ ಅಸ್ತಿತ್ವದ ವಿಧಿಯಾಗಿ ಬಯಕೆಯ ಆಜ್ಞೆಗಳನ್ನು ಅನುಸರಿಸುವುದರಲ್ಲಿ ಅಲ್ಲ; ಎಲ್ಲ ಸಂಗತಿಗಳಲ್ಲಿ ಒಂದು ದೊಡ್ಡ ಶಾಸನವಿರುವುದರಿಂದ, ಪ್ರತಿಯೊಂದೂ ಅದರ ಆಸಕ್ತಿಯ ಮತ್ತು ಬಯಕೆಯ ಭಾಗವನ್ನು ಮಾತ್ರವಲ್ಲದೆ ಅದರ ಧರ್ಮ ಅಥವಾ ಸರಿಯಾದ ಆಚರಣೆಯ ನಿಯಮವನ್ನು, ತೃಪ್ತಿ, ವಿಸ್ತರಣೆ, ನಿಯಂತ್ರಣವನ್ನೂ ಅದು ಹೊಂದಿದೆ. ಶಾಸ್ತ್ರದಲ್ಲಿ ಪರಿಣಿತಿ ಹೊಂದಿದವರಿಂದ ನಿಗದಿ ಪಡಿಸಿದ ಧರ್ಮವು ಆಚರಿಸಲು ಸರಿಯಾದ ಸಂಗತಿಯಾಗಿದೆ, ಕರ್ಮದ ನಿಜವಾದ ನಿಯಮವಾಗಿದೆ. ಧರ್ಮದ ಜಾಲದಲ್ಲಿ

ಮೊದಲಿಗೆ ಬರುವುದು ಸಾಮಾಜಿಕ ಕಟ್ಟಳೆ; ಪ್ರಾರಂಭದಲ್ಲಿ ಮನುಷ್ಯನ ಜೀವನವು ಆತನ ಪ್ರಾಣ, ವ್ಯಕ್ತಿಗತ ಸ್ವಂತಕ್ಕೆ ಮಾತ್ರ ಇದ್ದರೂ, ಅತಿ ಹೆಚ್ಚು ಅವಶ್ಯಕವಾಗಿ ಇರುವುದು ಸಮುದಾಯದ ಸಲುವಾಗಿ, ದೇವರಿಗಾಗಿ, ಆತ್ಮದ ಸಲುವಾಗಿ. ಆದ್ದರಿಂದ, ಸಾಮುದಾಯಿಕ ಕಲ್ಪನೆಯ ತೀವ್ರವಾದಿಗಳು ಕಲ್ಪಿಸುವಂತೆ, ಅದರಲ್ಲಿ ತನ್ನನ್ನು ತಾನು ಅಳಿಸಿಕೊಳ್ಳಲು ಯಾವುದೇ ವಿಧಾನದಿಂದ ಪೂರ್ಣವಾಗಿ ಬದ್ಧವಾಗಿರದಿದ್ದರೂ, ಮೊದಲಿಗೆ ವ್ಯಕ್ತಿಯು ತನ್ನನ್ನು ತಾನು ಸಾಮುದಾಯಿಕ ವ್ಯಕ್ತಿತ್ವಕ್ಕೆ ಒಳಪಡಿಸಿಕೊಳ್ಳಲೇಬೇಕು. ತನ್ನ ಸಾಮಾಜಿಕ ರೀತಿ ಹಾಗೂ ವರ್ಗದ ಜೊತೆ ಸಾಮರಸ್ಯಗೊಂಡ ವಿಧಿಯೊಂದಿಗೆ ತನ್ನ ಸ್ವಭಾವದ ಅನುಸಾರವಾಗಿ – ಮಾನವತೆಗಾಗಿ, ರಾಷ್ಟ್ರಕ್ಕಾಗಿ ಆತ ಬದುಕಬೇಕೆಂದು ಬೌದ್ಧರು ಒತ್ತಿ ಒತ್ತಿ ಹೇಳಿದರು. ಬದುಕುತ್ತ ಮತ್ತು ಕೆಲಸ ಮಾಡುತ್ತ, ಧರ್ಮದ ಸಾಮಾಜಿಕ ಮಾನದಂಡವನ್ನು ಅಧಿಗಮಿಸಲು ಆತ ಕಲಿತುಕೊಳ್ಳಬಹುದು, ಜೀವನದ ಮೂಲಾಧಾರಗಳನ್ನು ಹಾನಿಮಾಡದೆ ಆದರ್ಶ ಮಾನದಂಡವನ್ನು ಆಚರಿಸಲು ಕಲಿತು, ಅದರ ಪರಿಣಾಮವಾಗಿ, ಕೊನೆಯಲ್ಲಿ (ನಿಯಮ ಮತ್ತು ಕರ್ತವ್ಯಗಳು ಕಟ್ಟಿಹಾಕದಿದ್ದಾಗ) ಆತ್ಮನನ್ನು ಬಿಡುಗಡೆ ಮಾಡುವಂತಾಗಬಹುದು, ಏಕೆಂದರೆ ಅವನು ದೈವೀ ಸಹಜ ಸ್ವಭಾವದ ಮುಕ್ತ ಹಾಗೂ ಶಾಶ್ವತ ಧರ್ಮದಲ್ಲಿ ಸಾಗಿ ಕಾರ್ಯ ನಿರ್ವಹಿಸಬಹುದು. ಧರ್ಮದ ಈ ಎಲ್ಲ ಅಂಶಗಳು, ಪ್ರಗತಿಶೀಲ ಏಕತೆಯಲ್ಲಿ ಒಟ್ಟಾಗಿ ನಿಕಟವಾಗಿ ಸಂಪರ್ಕ ಹೊಂದಿದ್ದವು. ಉದಾಹರಣೆಗಾಗಿ, ನಾಲ್ಕು ಆದೇಶಗಳ, ಪ್ರತಿಯೊಂದು ಆದೇಶವು ತನ್ನದೇ ಆದ ಸಾಮಾಜಿಕ ಕ್ರಿಯೆ ಹಾಗೂ ನೀತಿಯನ್ನು ಹೊಂದಿದ್ದವು, ಆದರೆ ಶುದ್ಧ ನೈತಿಕ ಪುರುಷನ ಬೆಳವಣಿಗೆಗಾಗಿ ಒಂದು ಆದರ್ಶ ನಿಯಮವನ್ನೂ ಹೊಂದಿದ್ದವು. ಪ್ರತಿಯೊಬ್ಬ ಮನುಷ್ಯನು ತನ್ನ ಧರ್ಮವನ್ನು ಆಚರಿಸುವುದರಿಂದ ಮತ್ತು ತನ್ನ ಕಾರ್ಯವನ್ನು ದೇವರಿಗಾಗಿ ಮಾಡುವುದರಿಂದ ಆಧ್ಯಾತ್ಮಿಕ ಸ್ವಾತಂತ್ರ್ಯದಲ್ಲಿ ಬೆಳೆಯಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/226–27**

### ಸನಾತನ ಧರ್ಮದ ಉದಾರತೆ / ಸಾರ್ವತ್ರಿಕತೆ

ಪ್ರಾಚೀನ ತಿಳುವಳಿಕೆಯ/ಮನೋವೃತ್ತಿಯ ಸಾರ್ವತ್ರಿಕತೆಯಿಂದ ಉದಾರಗೊಂಡ ಭಾರತೀಯ ನೀತಿ ವ್ಯವಸ್ಥೆಯು, ಬೆಳೆಯುತ್ತಿರುವ ವೈರಾಗ್ಯ ಪ್ರವೃತ್ತಿಯ ಮತ್ತು

ಶೃಂಗಗಳ ಒಂದು ವಿಶಿಷ್ಟವಾದ ಉನ್ನತ ತಪಸ್ಸಿನ ಹೊರತಾಗಿಯೂ ಮನುಷ್ಯನ ಭೋಗವಾದವನ್ನು ಅಥವಾ ಆನಂದಕರ ಇರುವಿಕೆಯನ್ನೂ ಸಹ ನಿಷೇಧಿಸಲಿಲ್ಲ ಅಥವಾ ತೀವ್ರವಾಗಿ ವಿರೋಧಿಸಲಿಲ್ಲ. ಎಲ್ಲ ವಿಧಗಳ ಮತ್ತು ಶ್ರೇಣಿಗಳ ಸಮಾಧಾನಕರ ತೃಪ್ತಿಗಳು ಸಂಸ್ಕೃತಿಯ ಒಂದು ಮಹತ್ವದ ಭಾಗವಾಗಿದ್ದವು. ಕವನ, ನಾಟಕ, ಗೀತೆ, ನೃತ್ಯ, ಸಂಗೀತ, ದೊಡ್ಡ ಹಾಗೂ ಸಣ್ಣ ಕಲೆಗಳನ್ನು ಋಷಿಗಳ ಕಡಿವಾಣದಲ್ಲಿ ಇರಿಸಲಾಗಿತ್ತು ಮತ್ತು ಅವುಗಳನ್ನು ಚೈತನ್ಯದ ಉಪಕರಣಗಳನ್ನಾಗಿ ಮಾಡಲಾಗಿತ್ತು. ಆರಂಭದಲ್ಲಿ, ಅವುಗಳು ಒಂದು ಶುದ್ಧ ಸೌಂದರ್ಯ ತೃಪ್ತಿಯ ಸಾಧನವಾಗಿರಲೆಂದು ಒಂದು ನೈತಿಕ ಸಿದ್ಧಾಂತವು ಭಾವಿಸಿತು ಮತ್ತು ಪ್ರತಿಯೊಂದು ತನ್ನದೇ ಆದ ಮೂಲಭೂತ ನಿಯಮ ಹಾಗೂ ವಿಧಿಯ ಮೇಲೆ ಸ್ಥಾಪಿಸಲ್ಪಟ್ಟವು. ಆದರೆ, ಆ ತಳಹದಿಯ ಮೇಲೆ ಮತ್ತು ಅದಕ್ಕೆ ಒಂದು ಪರಿಪೂರ್ಣ ಪ್ರಾಮಾಣಿಕತೆ–ಯೊಂದಿಗೆ ಮುಖ್ಯಾಧಿಕಾರಿಯ ಹಂತದವರೆಗೆ, ಪ್ರಾಜ್ಞ, ನೈತಿಕ ಮತ್ತು ಜೀವಿಯ ಧಾರ್ಮಿಕ ಅಭಿವೃದ್ಧಿಯ ಹಂತದವರೆಗೆ ಬೆಳೆಸಲ್ಪಟ್ಟಿತು. ಭಾರತದ ಎರಡು ಮಹತ್ತಾದ ಮಹಾಕಾವ್ಯಗಳನ್ನು (ಪುರಾಣ ಕಾವ್ಯಗಳನ್ನು) ಧರ್ಮಶಾಸ್ತ್ರಗಳೆಂದು, ಇತಿಹಾಸ–ಪೌರಾಣಿಕ ಮಹಾಕಾವ್ಯ ಕಥೆಗಳೆಂದು (ಇತಿಹಾಸವೆಂದು) ಪರಿಗಣಿಸಿರುವುದು ಗಮನಿಸತಕ್ಕ ಸಂಗತಿಯಾಗಿದೆ. ಅವುಗಳು, ಜೀವನದ ಶ್ರೇಷ್ಠ, ಸ್ಪಷ್ಟ, ಮತ್ತು ಪ್ರಬಲ ಚಿತ್ರಗಳಾಗಿವೆ. ಅವುಗಳು, ಅವುಗಳ ಮಾರ್ಗದುದ್ದಕ್ಕೂ, ಜೀವನದಲ್ಲಿ, ವಿಧಿಯ ಮತ್ತು ಉನ್ನತ ಆದರ್ಶದ ಹಾಗೂ ಉನ್ನತ ನೈತಿಕ ಮತ್ತು ಧಾರ್ಮಿಕ ಮನೋಭಾವವನ್ನು ಉಚ್ಚರಿಸುತ್ತವೆ ಮತ್ತು ಹೊರಸೂಸುತ್ತವೆ. ಮತ್ತು ಅವುಗಳ ಉನ್ನತ ಉದ್ದೇಶದಲ್ಲಿ ದೈವೀ ಕಲ್ಪನೆಯ ಮೇಲೆ ಮತ್ತು ಜಗತ್ತಿನ ಕ್ರಿಯೆಯಲ್ಲಿ ಆರೋಹಣ ಮಾರ್ಗದ ಮೇಲೆ ಗುರಿಯನ್ನಿಡುತ್ತವೆ. ಭಾರತೀಯ ಚಿತ್ರಕಲೆ, ಶಿಲ್ಪಕಲೆ ಮತ್ತು ವಾಸ್ತುಶಿಲ್ಪ ಕಲೆಗಳು, ಮನುಷ್ಯನ ಕಲಾತ್ಮಕ ತೃಪ್ತಿಗೆ ಮತ್ತು ಸಾಮಾಜಿಕ, ನಾಗರಿಕ ಮತ್ತು ವೈಯಕ್ತಿಕ ಜೀವನದ ವ್ಯಾಖ್ಯಾನಕ್ಕೆ ಸೇವೆಯನ್ನು ನಿರಾಕರಿಸಲಿಲ್ಲ; ಈ ಸಂಗತಿಗಳು (ಎಲ್ಲ ಪುರಾವೆಗಳು ತೋರಿಸುವಂತೆ) ರಚನೆಯ ಉದ್ದೇಶಗಳಲ್ಲಿ ತಮ್ಮ ಬೃಹತ್ತಾದ ಪಾತ್ರವನ್ನು ನಿರ್ವಹಿಸಿದವು. ಆದರೂ, ಅವುಗಳ ಮಹಾನ್ಕಾರ್ಯವನ್ನು, ಸಂಸ್ಕೃತಿಯ ಶ್ರೇಷ್ಠವಾದ ಆಧ್ಯಾತ್ಮಿಕ ಭಾಗಕ್ಕೆ ಮೀಸಲಿಡಲಾಗಿತ್ತು. ಈ ಪ್ರಕ್ರಿಯೆಯಾದ್ಯಂತವಾಗಿ, ಚೇತನದ ಮೇಲೆ, ಸೃಷ್ಟಿಕರ್ತನ ಮೇಲೆ, ಆಧ್ಯಾತ್ಮದ ಮೇಲೆ, ಅನಂತದ ಮೇಲೆ, ಭಾರತೀಯ ಮನೋಭಾವದ ಒತ್ತಡವನ್ನು

ಪೋಷಿಸುವುದರೊಂದಿಗೆ ಅವುಗಳು ಬಂಧಿಸಲ್ಪಟ್ಟಿದ್ದನ್ನು ಹಾಗೂ ವ್ಯಾಪಿಸಿದ್ದನ್ನು ನಾವು ಕಾಣುತ್ತೇವೆ. ಕಲಾತ್ಮಕ ಹಾಗೂ ಸುಖಲೋಲುಪದ ಪುರುಷನನ್ನು, ಆ ಉದ್ದೇಶಕ್ಕಾಗಿ ಬಳಸಲ್ಪಟ್ಟ ಧರ್ಮಕ್ಕೆ, ಆಧ್ಯಾತ್ಮಿಕತೆಗೆ ಮತ್ತು ಮುಕ್ತತೆಗೆ ಒಂದು ಸಾಧನವನ್ನಾಗಿ ಮಾತ್ರ ಮಾಡಿದ್ದಲ್ಲದೆ, ಆತ್ಮನನ್ನು ಅರಿತುಕೊಳ್ಳುವ ಮನುಷ್ಯನ ಮಾರ್ಗದ ಮುಖ್ಯ ದ್ವಾರವನ್ನಾಗಿಯೂ ಸಹ ಮಾಡಲಾಯಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/227–28**

**ಸರ್ವ ಜೀವನವು ಧರ್ಮ ಕ್ಷೇತ್ರವಾಗಿದೆ**

ನಮ್ಮ ದೇಶದ ಬುದ್ಧಿವಂತರು, ಜೀವನದ ಶ್ರೇಷ್ಠ ಚಟುವಟಿಕೆಗಳಿಗೆ ತದ್ವಿರುದ್ಧವಾಗಿ, ಧರ್ಮದ ಯಾವುದೇ ಸಂಕುಚಿತ ವ್ಯಾಖ್ಯಾನವನ್ನು, ಜೀವನದ ಸರಿಯಾದ ವಿಧಿಯನ್ನು, ದೈವೀ ನಿಯಮವನ್ನು ಎಂದಿಗೂ ಸ್ವೀಕರಿಸಲಿಲ್ಲ. ಸರ್ವ ಜೀವನವೂ ಧರ್ಮ ಕ್ಷೇತ್ರವಾಗಿದೆ ಎನ್ನುವ ಶ್ರೇಷ್ಠ ಹಾಗೂ ಗಹನವಾದ ಸಿದ್ಧಸೂತ್ರವು ಹಿಂದೂಗಳ ಸಿದ್ಧಾಂತ ಮತ್ತು ಪಾಂಡಿತ್ಯದ ಅಡಿಯಲ್ಲಿ ನೆಲೆಸಿದೆ. ಪಶ್ಚಿಮದ ಉಪದೇಶಗಳಿಂದ ಕಳಂಕಿತಗೊಂಡ ನಮ್ಮ ಜ್ಞಾನ ಹಾಗೂ ಶಿಕ್ಷಣಗಳು ತಿರುಚಲ್ಪಟ್ಟ ಮತ್ತು ಅಸಂಗತ ಸ್ಥಿತಿಯಾಗಿ ಕ್ಷೀಣಿಸಿವೆ. ವಿರಕ್ತಿ, ಭಕ್ತಿ ಅಥವಾ ಸಾತ್ವಿಕ ಮನೋಭಾವ ಹೊರತುಪಡಿಸಿ ಯಾವುದೂ ಧರ್ಮದ ಭಾಗವಾಗಲಾರದು ಎನ್ನುವ ಈ ತಪ್ಪು ಕಲ್ಪನೆಗೆ ನಾವು ಆಗಾಗ್ಗೆ ಬಲಿಯಾಗುತ್ತೇವೆ. ಪಾಶ್ಚಿಮಾತ್ಯರು, ಧರ್ಮವನ್ನು ಇಂತಹ ಬಿಗಿಯಾದ ಸಂಕಲ್ಪದಿಂದ ಕಲಿಯುತ್ತಾರೆ. ಹಿಂದೂಗಳು, ಜೀವನದ ಎಲ್ಲ ಚಟುವಟಿಕೆಗಳನ್ನು, ಧರ್ಮದ ಮತ್ತು ಅಧರ್ಮದ ಚಟುವಟಿಕೆಗಳು ಎಂದು ಎರಡು ವರ್ಗಗಳಲ್ಲಿ ವಿಭಜಿಸುತ್ತಿದ್ದರು; ಪಾಶ್ಚಾತ್ಯ ಜಗತ್ತಿನಲ್ಲಿ ಅವರಗಳು ಧರ್ಮ, ನಾಸ್ತಿಕತೆ ಮತ್ತು ಜೀವನದ ಅನ್ವೇಷಣೆಗಳು ಮತ್ತು ಕಾರ್ಯಾಚರಣೆಗಳು (ಧರ್ಮದ ಮತ್ತು ನಾಸ್ತಿಕತೆಯ ನಿಯಮಗಳ ಹೊರಗೆ) ಎಂಬಂತಹ ಮೂರು ವಿಭಾಗಗಳನ್ನು ಮಾಡಿದ್ದಾರೆ. ದೇವರನ್ನು ಸ್ತುತಿಸುವುದು, ಪ್ರಾರ್ಥನೆಗಳನ್ನು ಹೇಳುವುದು ಮತ್ತು ಮಂತ್ರಗಳನ್ನು ಪಠಿಸುವುದು, ಮತ್ತು ಚರ್ಚುಗಳಲ್ಲಿ ಪಾದ್ರಿಯ ನೀತಿಬೋಧನೆಯನ್ನು ಕೇಳುವುದು ಹಾಗೂ ಇಂತಹ ಇತರೇ ಚಟುವಟಿಕೆಗಳು ಧರ್ಮದ ಹೆಸರಿನಿಂದ ನಡೆದು ಹೋಗುತ್ತವೆ. ನೈತಿಕತೆಯು ಧರ್ಮದ ಭಾಗವಾಗುವುದಿಲ್ಲ, ಅದು ತನ್ನದೇ ಆದ ಬೇರೆಯ ವರ್ಗವನ್ನು ರಚಿಸಿಕೊಳ್ಳುತ್ತದೆ;

ಆದರೆ ಬಹಳಷ್ಟು ಜನ, ಧರ್ಮ ಮತ್ತು ನೈತಿಕತೆಯನ್ನು ಧರ್ಮಶ್ರದ್ಧೆಯ ಎರಡು ಪೂರಕ ಅಂಗಗಳೆಂದು ಸ್ವೀಕರಿಸುತ್ತಾರೆ. ಚರ್ಚಗೆ ಹೋಗದಿರುವುದು, ನಾಸ್ತಿಕತೆಯ ಅಥವಾ ನಿರೀಶ್ವರವಾದದ ಭಾವನೆಯನ್ನು ಅಂಗೀಕರಿಸುವುದು, ಧರ್ಮವನ್ನು ಹೀಗಳೆಯುವುದು ಅಥವಾ ಅದರಡೆಗೆ ಔದಾಸೀನ್ಯ ತೋರುವುದನ್ನೂ ಸಹ ಅಧರ್ಮದ ಮತ್ತು ಅನೈತಿಕತೆಯ ಕ್ರಿಯೆಗಳೆಂದು ಕರೆಯಲಾಗುತ್ತದೆ. ಮೇಲೆ ಹೇಳಿದ ಅಭಿಪ್ರಾಯದ ಪ್ರಕಾರ, ಇವುಗಳೂ ಸಹ ನಾಸ್ತಿಕತೆಯನ್ನು ಪ್ರತಿನಿಧಿಸುತ್ತವೆ. ಆದರೆ ಇದಕ್ಕೆ ಬದಲಾಗಿ, ಬಹಳಷ್ಟು ಅನ್ವೇಷಣೆಗಳು ಮತ್ತು ಕಾರ್ಯಾಚರಣೆಗಳು ಧರ್ಮದ ಮತ್ತು ಅಧರ್ಮದ ಹೊರಗೆ ಬೀಳುತ್ತವೆ. ಧರ್ಮ ಹಾಗೂ ಜೀವನ, ಧರ್ಮ ಹಾಗೂ ಕರ್ಮ, ಎರಡು ಬೇರೆಯ ವರ್ಗಗಳಾಗಿವೆ – ನಮ್ಮಲ್ಲಿ ಬಹಳಷ್ಟು ಜನರು ಧರ್ಮವನ್ನು ತಿರುಚಲ್ಪಟ್ಟ ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ. ಸಂತರಿಗೆ ಮತ್ತು ಸನ್ಯಾಸಿಗಳಿಗೆ, ದೇವರುಗಳಿಗೆ (ಹೆಣ್ಣು ಹಾಗೂ ಗಂಡು ದೇವರು) ಮತ್ತು ಜಗತ್ತಿನ ಪರಿತ್ಯಾಗಕ್ಕೆ ಸಂಬಂಧಿಸಿದ ಎಲ್ಲವನ್ನೂ ಅವರು ಧರ್ಮವೆಂದು ಹೆಸರಿಸುತ್ತಾರೆ; ಆದರೆ ನೀವು ಬೇರೆ ಯಾವುದೇ ವಿಷಯವನ್ನು ಎತ್ತಿದ್ದೇ ಆದರೆ, “ಇದು ಜಗತ್ತಿಗೆ ಸಂಬಂಧಿಸಿದ್ದು, ಧರ್ಮಕ್ಕಲ್ಲ,” ಎಂದು ಹೇಳಿ ಅವರು ಹಿಂಜರಿಯುತ್ತಾರೆ. ಧರ್ಮದ ಪಾಶ್ಚಾತ್ಯ ಕಲ್ಪನೆಯು ಅವರ ಮನಸ್ಸಿನಲ್ಲಿ ಬೆಳೆಯಲು ಪ್ರಾರಂಭಿಸಿದೆ; ಧರ್ಮ ಎಂಬ ಶಬ್ದವನ್ನು ಕೇಳಿದೊಡನೆ, ಅವರನ್ನು ರಿಲಿಜನ್ (religion) ಬಗ್ಗೆ ಯೋಚಿಸುವಂತೆ ಮಾಡುತ್ತದೆ ಮತ್ತು ಆ ಶಬ್ದವನ್ನು ಅವರು ತಿಳಿಯದೆ ಅದೇ ಅರ್ಥದಲ್ಲಿ ಬಳಸಿಕೊಳ್ಳುತ್ತಾರೆ. ಆದರೆ, ನಾವು ಇಂತಹ ಪರಕೀಯ ಅರ್ಥಗಳನ್ನು ನಮ್ಮ ಸ್ಥಳೀಯ ಶಬ್ದಗಳಿಗೆ ವಹಿಸಿದರೆ, ಕ್ಯಾಥೊಲಿಕ್ ಮತ್ತು ಸನಾತನ ಆರ್ಯನ್ನಂಬಿಕೆಗಳಿಂದ ಹಾಗೂ ಬೋಧನೆಗಳಿಂದ ನಾವು ಹಿಂದೆ ಸರಿಯುವುದು ನಿಶ್ಚಿತ. ಸರ್ವ ಜೀವನವು ಧರ್ಮದ ಕ್ಷೇತ್ರವಾಗಿದೆ, ಅದಕ್ಕಾಗಿ ಜಗತ್ತಿನಲ್ಲಿ ಜೀವನವು ಹೌದು. ಆಧ್ಯಾತ್ಮಿಕ ಜ್ಞಾನದ ಸಂಸ್ಕಾರ ಅಥವಾ ಭಕ್ತಿಯ ಪ್ರೇರಣೆಯು ಮಾತ್ರ ಧರ್ಮವನ್ನು ನಿಯೋಜಿಸುವುದಿಲ್ಲ, ಕರ್ಮವೂ ಕೂಡ ಧರ್ಮವಾಗಿದೆ. ಈ ಶ್ರೇಷ್ಠವಾದ ಬೋಧನೆಯು, ಯುಗಗಳಿಂದ ನಮ್ಮ ಸಂಪೂರ್ಣ ಸಾಹಿತ್ಯವನ್ನು ವ್ಯಾಪಿಸುತ್ತದೆ – ಇದು ಸನಾತನ ಧರ್ಮವಾಗಿದೆ (ಏಷ ಧರ್ಮಃ ಸನಾತನಃ).

*

## ಅತ್ಯುನ್ನತವಾದ ಹಾಗೂ ಶ್ರೇಷ್ಠವಾದ ಧರ್ಮ

ಕರ್ಮಗಳು (ಎಲ್ಲ ರೀತಿಯ ಕರ್ಮಗಳಲ್ಲ) ಧರ್ಮದ ಭಾಗವೆಂದು ಅನೇಕರು ಭಾವಿಸುತ್ತಾರೆ; ಸಾತ್ವಿಕ ಗುಣದಿಂದ ಪ್ರಭಾವ ಹೊಂದಿದವರು ಮತ್ತು ಸನ್ಯಾಸತ್ವಕ್ಕೆ ಕೊಡುಗೆ ನೀಡುವವರು, ಪ್ರಾಪಂಚಿಕ ಚಟುವಟಿಕೆಗಳಿಂದ ದೂರ ಇರವವರು ಮಾತ್ರ ಈ ಅಧಿಕಾರಕ್ಕೆ ಅರ್ಹರಾಗಿರುತ್ತಾರೆ. ಇದೂ ಸಹ ದಾರಿ ತಪ್ಪಿಸುವ ಒಂದು ಕಲ್ಪನೆಯಾಗಿದೆ. ಸಾತ್ವಿಕ ಕ್ರಿಯೆಗಳು ಧರ್ಮ ಕ್ರಿಯೆಗಳಿದ್ದಂತೆ, ರಾಜಸಿಕ ಕ್ರಿಯೆಗಳು ಸಹ ಧರ್ಮ ಕ್ರಿಯೆಗಳು. ಜೀವಿಗಳಿಗೆ ಅನುಕಂಪವನ್ನು ತೋರಿಸುವುದೂ ಧರ್ಮವಿದ್ದಂತೆ, ನ್ಯಾಯಬದ್ಧ ಯುದ್ಧದ ಕ್ಷೇತ್ರದಲ್ಲಿ ದೇಶದ ಶತ್ರುಗಳನ್ನು ಸಂಹರಿಸುವುದೂ ಸಹ ಧರ್ಮವಾಗಿದೆ. ಇನ್ನೊಬ್ಬರ ಒಳಿತಿಗಾಗಿ ನಮ್ಮ ಸಂತೋಷ ಮತ್ತು ಸಂಪತ್ತು ಅಥವಾ ಜೀವನವನ್ನು ತ್ಯಜಿಸುವುದು ಸಹ ಧರ್ಮವಾಗಿದೆ, ಹಾಗೆಯೇ ಧರ್ಮದ ಸಾಧನವಾದಂಥ ದೇಹವನ್ನು ಯೋಗ್ಯವಾದ ಸ್ಥಿತಿಯಲ್ಲಿ ಕಾಪಾಡಿಕೊಳ್ಳುವುದೂ ಧರ್ಮವಾಗಿದೆ. ರಾಜಕೀಯ ಕೂಡ ಧರ್ಮವಾಗಿದೆ. ಕವನ ಬರೆಯುವುದು, ಚಿತ್ರ ಬಿಡಿಸುವುದು ಕೂಡ ಧರ್ಮವಾಗಿದೆ. ಇನ್ನೊಬ್ಬರ ಹೃದಯಗಳನ್ನು ಮಧುರ ಗೀತೆಗಳಿಂದ ಆನಂದಗೊಳಿಸುವುದು ಸಹ ಧರ್ಮವಾಗಿದೆ. ನಮ್ಮ ಸ್ವ–ಹಿತಾಸಕ್ತಿಯಿಂದ ಕಳಂಕಿತಗೊಳ್ಳದ ಯಾವುದೇ ಕಾರ್ಯ ಕೂಡ (ಆ ಕಾರ್ಯವು ದೊಡ್ಡದೇ ಇರಲಿ ಅಥವಾ ಚಿಕ್ಕದೇ ಇರಲಿ) ಸಹ ಧರ್ಮವಾಗಿದೆ. ಒಂದು ವಿಷಯವನ್ನು ಶ್ರೇಷ್ಠ ಅಥವಾ ಕನಿಷ್ಠ ಎಂದು ತೀರ್ಮಾನಿಸುವವರು ನಾವು, ದೇವರ ಮುಂದೆ ಯಾವುದೂ ಶ್ರೇಷ್ಠ ಅಥವಾ ಕನಿಷ್ಠ ಎಂಬುದಿಲ್ಲ; ದೇವರು, ಒಬ್ಬ ವ್ಯಕ್ತಿಯು ತನ್ನ ಸ್ವಭಾವಕ್ಕೆ ಸರಿಹೊಂದುವ ಅಥವಾ ಅನಿರೀಕ್ಷಿತ ಸನ್ನಿವೇಷಗಳಿಂದ ಬಂದೊದಗಿದ ಕೆಲಸಗಳನ್ನು ಮಾಡುವಂಥ ಮನೋಭಾವವನ್ನು ಮಾತ್ರ ನೋಡುತ್ತಾನೆ. ಉನ್ನತ ಮಟ್ಟದ ಹಾಗೂ ಶ್ರೇಷ್ಠವಾದ ಧರ್ಮ ಯಾವುದೆಂದರೆ: ನಾವು ಮಾಡುವ ಕಾರ್ಯ ಯಾವುದೇ ಇರಲಿ, ಆ ಕಾರ್ಯವನ್ನು ದೇವರ ಚರಣಗಳಗೆ ಅರ್ಪಿಸುವುದು, ಅದನ್ನು ಒಂದು ಯಜ್ಞದಂತೆ ಅಥವಾ ಒಂದು ಪವಿತ್ರ ತ್ಯಾಗವೆಂಬಂತೆ ಮಾಡುವುದು ಮತ್ತು ತನ್ನ ಸ್ವಂತ ಸಹಜ ಸ್ವಭಾವದಿಂದ ಮಾಡಿದಂತೆ ಸಮಾನ ಹೃದಯದಿಂದ ಅದನ್ನು ಸ್ವೀಕರಿಸುವುದು ಶ್ರೇಷ್ಠ ಧರ್ಮವಾಗಿದೆ. ಶ್ರೇಷ್ಠ ಧರ್ಮ ಯಾವುದೆಂದು ಈಶಾವಾಸ್ಯೋಪನಿಷತ್ತಿನ ಒಂದನೇ ಮತ್ತು ಎರಡನೇ ಶ್ಲೋಕಗಳಲ್ಲಿ ಹೇಳಲಾಗಿದೆ. ಅವುಗಳು ಈ ಕೆಳಗಿನಂತಿವೆ:

**ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ಜ**
**ತೇನ ತ್ಯಕ್ತೇನ ಭುಜೀತಾ ಮಾ ಗೃಧಃ ಕಸ್ಯ ಸ್ವಿದ್ಧನಮ್ ॥1॥**

(ಈಶಾವಾಸ್ಯೋಪನಿಷತ್)

**ತಾತ್ಪರ್ಯ:** ಅಖಿಲವಾದ ಬ್ರಹ್ಮಾಂಡದಲ್ಲಿ ಏನೆಲ್ಲ ಜಡ ಚೇತನ ಸ್ವರೂಪವಾದ ಜಗತ್ತಿದೆಯೋ, ಈ ಸಮಸ್ತವೂ ಈಶ್ವರನಿಂದ ವ್ಯಾಪ್ತವಾಗಿದೆ. ಆದುದರಿಂದ ಈಶ್ವರನನ್ನು ದೃಷ್ಟಿಯಲ್ಲಿಟ್ಟುಕೊಂಡು ತ್ಯಾಗಪೂರ್ವಕವಾಗಿ ಇದನ್ನು ಭೋಗಿಸುತ್ತಿರು. ಆದರೆ ಇದರಲ್ಲಿ ಆಸಕ್ತನಾಗಬೇಡ. ಏಕೆಂದರೆ, ಧನ–ಭೋಗ ಪದಾರ್ಥಗಳು ಯಾರದ್ದಾಗಿವೆ? ಅಂದರೆ ಯಾರದ್ದೂ ಅಲ್ಲ.

**ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ ॥2॥**

**ತಾತ್ಪರ್ಯ:** ಈ ಜಗತ್ತಿನಲ್ಲಿ ಶಾಸ್ತ್ರ ನಿಯತವಾದ ಕರ್ಮಗಳನ್ನು ಈಶ್ವರ ಪೂಜಾರ್ಥವಾಗಿ ಮಾಡುತ್ತಲೇ ನೂರು ವರ್ಷಗಳವರೆಗೆ ಜೀವಿಸಲು ಇಚ್ಛಿಸಬೇಕು.

ನಿಜವಾದ ಇಂದ್ರಿಯ ನಿಗ್ರಹವನ್ನು ಪ್ರತಿನಿಧಿಸುವುದು ಇದಾಗಿದೆ. ಬುದ್ಧಿ ಅಥವಾ ಬುದ್ಧಿವಂತ ಸಂಕಲ್ಪವು ನಿವೃತ್ತಿಯ ಸ್ಥಾನವಾಗಿದೆ, ಪ್ರಾಣ ಮತ್ತು ಇಂದ್ರಿಯಗಳು ಪ್ರವೃತ್ತಿಯ ವ್ಯಾಪ್ತಿಯಾಗಿವೆ. ಬುದ್ಧಿಯು, ಪ್ರತ್ಯೇಕಗೊಂಡ ಪ್ರೇಕ್ಷಕನ ಸಮಚಿತ್ತವನ್ನು ಪೋಷಿಸಬೇಕು ಮತ್ತು ದೇವರ ಪ್ರವಾದಿ ಅಥವಾ ವಕ್ತಾರನಾಗಿ ವರ್ತಿಸಬೇಕು, ಬಯಕೆಯಿಂದ ಮುಕ್ತವಾಗಿ, ಆತನಿಂದ ಅನುಮೋದನೆಯಾದ ಪ್ರೇರಣೆಯನ್ನು ಜೀವನಕ್ಕೆ ಹಾಗೂ ಇಂದ್ರಿಯಗಳಿಗೆ ತಿಳಿಸಬೇಕು; ಆಗ, ಜೀವನ ಹಾಗೂ ಇಂದ್ರಿಯಗಳು ಅದಕ್ಕನುಸಾರವಾಗಿ ವರ್ತಿಸುತ್ತವೆ. ಕ್ರಿಯೆಗಳ ತ್ಯಾಗವು ಅಂತಹ ದೊಡ್ಡ ಸಾಧನೆಯಲ್ಲ, ಆದರೆ ಬಯಕೆಗಳ ತ್ಯಾಗವು ನಿಜವಾದ ತ್ಯಾಗವಾಗಿದೆ. ಭೌತಿಕ ಬೇರ್ಪಡುವಿಕೆಯು ಬೇರ್ಪಡುವಿಕೆಯಲ್ಲ, ಪ್ರಜ್ಞೆಯಲ್ಲಿ ಅಡಕವಾಗದೇ ಇರುವುದು ನಿಜವಾದ ಬೇರ್ಪಡುವಿಕೆಯಾಗಿದೆ.

**ಬೆಂಗಾಲಿ ಬರಹಗಳು: 204**

**ಎಲ್ಲ ಧರ್ಮಗಳಾಚೆ**

**ಮನ್ಮನಾ ಭವ ಮದ್ಭಕ್ತೋ ಮದ್ಯಾಜಿ ಮಾನ್ನಮಸ್ಕುರು।**
**ಮಾಮೇವೈಶ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿಮೇ ॥**

(ಭಗವದ್ಗೀತೆ – 18.65)

**ತಾತ್ಪರ್ಯ:** ಯಾವಾಗಲೂ ನನ್ನ ಬಗ್ಗೆ ಯೋಚಿಸು, ನನ್ನ ಭಕ್ತನಾಗು, ನನ್ನನ್ನು ಪೂಜಿಸು ಮತ್ತು ನನಗೆ ನಿನ್ನ ಗೌರವವನ್ನು ಅರ್ಪಿಸು. ಹೀಗೆ ನೀನು ನನ್ನ ಬಳಿಗೆ ತಪ್ಪದೆ ಬರುವೆ. ನೀನು ನನ್ನ ಅತ್ಯಂತ ಪ್ರಿಯ ಸ್ನೇಹಿತನಾಗಿರುವುದರಿಂದ ನಾನು ಇದನ್ನು ನಿನಗೆ ಭರವಸೆ ನೀಡುತ್ತೇನೆ.

**ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ।**
**ಅಹಂ ತ್ವಾಂ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥**
(ಭಗವದ್ಗೀತೆ – 18.66)

**ತಾತ್ಪರ್ಯ:** ಎಲ್ಲಾ ರೀತಿಯ ಧರ್ಮಗಳನ್ನು ತ್ಯಜಿಸಿ ನನಗೆ ಶರಣಾಗು. ನಾನು ನಿನ್ನನ್ನು ಎಲ್ಲಾ ಪಾಪ ಪ್ರಕ್ರಿಯೆಗಳಿಂದ ಮುಕ್ತಗೊಳಿಸುತ್ತೇನೆ. ದುಃಖಿಸಬೇಡ.

ಸಂಕ್ಷಿಪ್ತವಾಗಿ, ಮೇಲಿನ ಎರಡು ಶ್ಲೋಕಗಳ ಅರ್ಥ: ಸ್ವಯಂ–ಸಮರ್ಪಣೆ. ಶ್ರೀಕೃಷ್ಣನಿಗೆ ನಮ್ಮ ಸಮರ್ಪಣೆಯು ವಿಸ್ತಾರವಾದಷ್ಟು, ಕರುಣಾಮಯಿಯಾದ ದೇವರ ಅನುಗ್ರಹದಿಂದ ದೈವೀ ಶಕ್ತಿಯು, ಪಾಪದಿಂದ ಮುಕ್ತಗೊಳಿಸುತ್ತ ಮತ್ತು ನಮ್ಮ ಮೇಲೆ ದೈವೀ ಸ್ವಭಾವವನ್ನು ಅನುಗ್ರಹಿಸುತ್ತ ನಮ್ಮ ದೇಹದಲ್ಲಿ ಕೆಳಗಿಳಿದು ಬರುತ್ತದೆ. ಈ ಸ್ವಯಂ–ಸಮರ್ಪಣೆಯ ಬಗ್ಗೆ ಶ್ಲೋಕದ ಮೊದಲಾರ್ಧದಲ್ಲಿ ವಿವರಿಸಲಾಗಿದೆ. ನಾವು ತನ್ಮನ, ತದ್ಭಕ್ತ ಮತ್ತು ತದ್ಯಾಜಿಯಾಗಿರಬೇಕು. ತನ್ಮನ ಎಂದರೆ ಪ್ರತಿ ಜೀವಿಯಲ್ಲೂ ದೇವರನ್ನು ಕಾಣುವುದು, ಎಲ್ಲ ಸಮಯದಲ್ಲೂ ಆತನನ್ನು ನೆನೆಯುವುದು, ಪರಿಪೂರ್ಣ ಆನಂದದಲ್ಲಿರುವುದು, ಎಲ್ಲ ಕಾರ್ಯಗಳಲ್ಲಿ ಹಾಗೂ ಸಂಗತಿಗಳಲ್ಲಿ ಆತನ ಪ್ರಭಾವದ, ಜ್ಞಾನದ ಹಾಗೂ ಪ್ರೇಮದ ಲೀಲೆಯ ಬಗ್ಗೆ ಜಾಗೃತವಾಗಿರುವುದು. ತದ್ಭಕ್ತ ಎನ್ನುವುದು, ಶುದ್ಧ ನಂಬಿಕೆ ಹಾಗೂ ಪ್ರೇಮದ ಮೇಲೆ ಸ್ಥಾಪಿಸಲ್ಪಟ್ಟ ಆತನೊಂದಿಗಿನ ಸೇರುವಿಕೆಯನ್ನು ಸೂಚಿಸುತ್ತದೆ. ತದ್ಯಾಜಿ ಎಂದರೆ, ದೊಡ್ಡ ಮತ್ತು ಚಿಕ್ಕ ಕೆಲಸಗಳನ್ನು ಕೃಷ್ಣನಿಗೆ ನಿವೇದನೆಯಾಗಿ ಅರ್ಪಿಸುವುದಾಗಿದೆ ಮತ್ತು ಸ್ವಾರ್ಥ ಆಸಕ್ತಿಗಳನ್ನು ಮತ್ತು ಕರ್ಮದ ಫಲಗಳನ್ನು ತ್ಯಜಿಸಿ, ಪುಣ್ಯ ಕರ್ಮಗಳಲ್ಲಿ ತೊಡಗಿರುವುದಾಗಿದೆ.

ಮನುಷ್ಯ ಜೀವಿಗೆ, ತನ್ನನ್ನು ತಾನು ಸಂಪೂರ್ಣವಾಗಿ ದೇವರಿಗೆ ಒಪ್ಪಿಸಿಕೊಳ್ಳುವುದು ಕಷ್ಟದ ಕೆಲಸ. ಆದರೆ ಅವನು ಕೊಂಚ ಪ್ರಯತ್ನ ಮಾಡಿದರೂ ಸಾಕು, ದೇವರು ಅವನಿಗೆ ಅಭಯವನ್ನೀಯುತ್ತಾನೆ, ಅವನ ಗುರುವಾಗುತ್ತಾನೆ,

ರಕ್ಷಕ ಹಾಗೂ ಸ್ನೇಹಿತನಾಗುತ್ತಾನೆ ಮತ್ತು ಅವನನ್ನು ಯೋಗ ಪಥದ ಮೇಲೆ ಮುನ್ನಡೆಸುತ್ತಾನೆ. ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೆ ಮಹತೊ ಭಯಾತ್ (ಭಗವದ್ಗೀತೆ – 2.40: ಸ್ವಲ್ಪ ಪ್ರಯತ್ನವೂ ಕೂಡ ನಮ್ಮನ್ನು ದೊಡ್ಡ ಅನಾಹುತದಿಂದ ರಕ್ಷಿಸುತ್ತದೆ/ಭಯದಿಂದ ಮುಕ್ತವಾಗಿಸುತ್ತದೆ.) ಈ ಧರ್ಮವನ್ನು ಆಚರಿಸುವುದು ಸುಲಭ ಮತ್ತು ಆನಂದದಾಯಕವೆಂದು ದೇವರು ಹೇಳಿದ್ದಾನೆ. ಮತ್ತು ಇದು ವಾಸ್ತವ ಸಂಗತಿ, ಆದರೆ ಸಂಪೂರ್ಣ ಶರಣಾಗತಿಯ ಫಲಿತಾಂಶವು ಅನೀರ್ವಚನೀಯ ಆನಂದವಾಗಿದೆ, ಶುದ್ಧತೆಯಾಗಿದೆ. ನೀನು ನನ್ನಲ್ಲಿಗೆ ಬರುವಿ, ಅಂದರೆ ಮನುಷ್ಯನು ನನ್ನನ್ನು ಕಂಡುಕೊಳ್ಳುತ್ತಾನೆ, ನನ್ನೊಂದಿಗೆ ಜೀವಿಸುತ್ತಾನೆ, ನನ್ನ ಗುಣವನ್ನು ಹೊಂದುತ್ತಾನೆ. ಸಾದೃಶ್ಯ (ದೇವ ಗುಣ), ಸಾಲೋಕ್ಯ (ಮುಕ್ತಿ/ದೇವರೊಂದಿಗಿರುವುದು) ಮತ್ತು ಸಾಯುಜ್ಯ (ದೇವರೊಂದಿಗೆ ಒಂದಾಗುವುದು), ಈ ಶಬ್ದಗಳಲ್ಲಿ ವಿವಿಧ ಬಗೆಯ ಮುಕ್ತಿಗಳ ಬಗ್ಗೆ ಉಲ್ಲೇಖಿಸಲಾಗಿದೆ.

*

**ಧರ್ಮವು ಎಲ್ಲರಿಗಾಗಿ ಇದೆ**

ಈ ಧರ್ಮದ ಕೊಂಚ ಆಚರಣೆಯೂ ಸಹ ದೊಡ್ಡದಾದ ಸಾಮರ್ಥ್ಯವನ್ನು, ಪರಿಶುದ್ಧ ಆನಂದವನ್ನು, ಪೂರ್ಣ ಸಂತೋಷ ಹಾಗೂ ಶುದ್ಧತೆಯನ್ನು ನೀಡುತ್ತದೆ. ಈ ಧರ್ಮವನ್ನು, ವಿಶೇಷ ಗುಣಗಳನ್ನು ಹೊಂದಿರುವ ವ್ಯಕ್ತಿಗಳಿಗಾಗಿ ಮಾತ್ರ ಸೃಷ್ಟಿಸಲಾಗಿಲ್ಲ. ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ, ಮನುಷ್ಯ (ಗಂಡು, ಹೆಣ್ಣು) ಮತ್ತು ಎಲ್ಲ ಕೀಳು ಜನ್ಮದ ಜೀವಿಗಳು, ಈ ಧರ್ಮಕ್ಕೆ ಬದ್ಧವಾಗಿದ್ದುಕೊಂಡು ಆತನಲ್ಲಿಗೆ (ದೇವರಲ್ಲಿ) ಬರಬಹುದು ಎಂದು ಭಗವಂತನು ಹೇಳಿದ್ದಾನೆ. ಮಹಾ ಪಾಪಿಯೂ ಕೂಡ ಭಗವಂತನಲ್ಲಿ ಆಶ್ರಯ ಪಡೆದುಕೊಂಡರೆ, ಆತ ಬೇಗನೆ ಶುದ್ಧನಾಗುವನು. ಆದ್ದರಿಂದ, ಎಲ್ಲರೂ ಈ ಧರ್ಮವನ್ನು ಅನುಸರಿಸಬೇಕು. ಜಗನ್ನಾಥ ಮಂದಿರದಲ್ಲಿ, ಜಾತಿಯ ಕಾರಣದಿಂದಾಗಿ ಯಾವುದೇ ಭೇದ ಮಾಡುವುದಿಲ್ಲ. ಆದಾಗ್ಯೂ, ಈ ಧರ್ಮದ ಮೂಲಕ ಸಾಧಿಸಿದ ಪರಾಕಾಷ್ಟತೆಯು, ಬೇರೆ ಧರ್ಮಗಳಲ್ಲಿ ಸೂಚಿಸಿದ ಪರಮ ಸ್ಥಿತಿಗಿಂತ ಯಾವುದೇ ರೀತಿಯಲ್ಲಿ ಕಡಿಮೆ ಇಲ್ಲ.

**ಬೆಂಗಾಲಿ ಬರಹಗಳು: 79–80**

## ಧರ್ಮದ ಮರುಸ್ಥಾಪನೆ

ಗೀತೆಯಲ್ಲಿ, ಅವತಾರದ ಬಾಹ್ಯ ಕ್ರಿಯೆಯನ್ನು ಧರ್ಮದ ಮರುಸ್ಥಾಪನೆ ಎಂದು ವರ್ಣಿಸಲಾಗಿದೆ; ಯಾವಾಗ ಯುಗದಿಂದ ಯುಗಕ್ಕೆ ಧರ್ಮವು ಕ್ಷಯಿಸುತ್ತದೆಯೋ, ಕ್ಷೀಣಿಸುತ್ತದೆಯೋ, ತನ್ನ ಬಲವನ್ನು ಕಳೆದುಕೊಳ್ಳುತ್ತದೆಯೋ ಮತ್ತು ಅದರ ವಿರುದ್ಧವಾದದ್ದು (ಬಲಶಾಲಿಯಾದ ಮತ್ತು ಸಂಕಟಕರವಾದ) ಕಾಣಿಸಿಕೊಳ್ಳುತ್ತದೆಯೋ, ಆಗ ಅವತಾರವು ತಲೆಯೆತ್ತಿ ಧರ್ಮವನ್ನು ಪುನಃ ಅದರ ಸತ್ವಕ್ಕೇರಿಸುತ್ತದೆ (ಭಗವದ್ಗೀತೆ – 4.7 ಮತ್ತು 4.8); ಕಲ್ಪನೆಯಲ್ಲಿನ ಈ ಸಂಗತಿಗಳನ್ನು, ಯಾವಾಗಲೂ ಕ್ರಿಯೆಯಲ್ಲಿರುವ ಸಂಗತಿಗಳಿಂದ ಮತ್ತು ಅವರ ಪ್ರಚೋದನೆಯನ್ನು ಪಾಲಿಸುವ ಮನುಷ್ಯರಿಂದ ಪ್ರತಿನಿಧಿಸಲ್ಪಡುವುದರಿಂದ, ಆತನ ಉದ್ದಿಷ್ಟಕಾರ್ಯವು, ಅದರ ಮಾನವೀಯ ಮತ್ತು ಬಾಹ್ಯ ಶರತ್ತುಗಳಲ್ಲಿ, ಪ್ರತಿಗಾಮಿ ಅಂಧಕಾರದ ಆಳ್ವಿಕೆಯಿಂದ ತುಳಿತಕ್ಕೆ ಒಳಗಾದ ಧರ್ಮದ ಅನ್ವೇಷಕರನ್ನು ಬಿಡುಗಡೆಗೊಳಿಸುವುದು ಮತ್ತು ಧರ್ಮದ ನಿರಾಕರಣೆಯನ್ನು ಸಮರ್ಥಿಸಬೇಕೆಂದು ಹೇಳುವಂಥ ಅಪರಾಧಿಯನ್ನು ನಾಶಗೊಳಿಸುವುದಾಗಿದೆ. ಆದರೆ ಬಳಸಿದ ಭಾಷೆಗೆ, ಅದರ ತಾತ್ಪರ್ಯದ ಎಲ್ಲ ಆಧ್ಯಾತ್ಮಿಕ ಆಳದ ಅವತಾರವನ್ನು ಕಿತ್ತುಕೊಳ್ಳುವಂಥ ಸಾಮಾನ್ಯ ಹಾಗೂ ಕೊರತೆಯಿರುವ ಅರ್ಥವನ್ನು ಸುಲಭವಾಗಿ ಕೊಡಬಹುದು. ಧರ್ಮ ಎನ್ನುವುದು, ನೈತಿಕ ಹಾಗೂ ವಾಸ್ತವಿಕ, ಸ್ವಾಭಾವಿಕ ಹಾಗೂ ತಾತ್ವಿಕ ಮತ್ತು ಧಾರ್ಮಿಕ ಹಾಗೂ ಆಧ್ಯಾತ್ಮಿಕ ಮಹತ್ವವಿರುವಂಥ ಒಂದು ಶಬ್ದವಾಗಿದೆ. ಅದನ್ನು, ಉಳಿದವುಗಳಿಂದ ಪ್ರತ್ಯೇಕಿಸಲ್ಪಟ್ಟ ಈ ಯಾವುದೇ ಅರ್ಥಗಳಲ್ಲಿ (ಶುದ್ಧ ನೈತಿಕ, ಶುದ್ಧ ತಾತ್ವಿಕ ಅಥವಾ ಶುದ್ಧ ಧಾರ್ಮಿಕ ಅರ್ಥದಲ್ಲಿ) ಅದನ್ನು ಬಳಸಬಹುದು. ನೈತಿಕವಾಗಿ ಅದರ ಅರ್ಥವು, ಧಾರ್ಮಿಕತೆಯ ನಿಯಮ, ನಡತೆಯ ನೈತಿಕ ನಿಯಮ, ಅಥವಾ ಇನ್ನೂ ಹೆಚ್ಚು ಬಾಹ್ಯ ಹಾಗೂ ವಾಸ್ತವಿಕ ಅರ್ಥದಲ್ಲಿ ಸಾಮಾಜಿಕ ಹಾಗೂ ರಾಜಕೀಯ ನ್ಯಾಯ, ಅಥವಾ ಇನ್ನೂ ಸುಲಭ ಶಬ್ದಗಳಲ್ಲಿ ಸಾಮಾಜಿಕ ವಿಧಿಯ ಆಚರಣೆ ಎಂದು. ಒಂದು ವೇಳೆ ಅದನ್ನು ಈ ಅರ್ಥದಲ್ಲಿ ಬಳಸಿದರೆ, ಯಾವಾಗ ಅಧರ್ಮ, ಅನ್ಯಾಯ ಮತ್ತು ದಬ್ಬಾಳಿಕೆ ಮೇಲುಗೈ ಸಾಧಿಸುತ್ತವೆಯೋ, ಆಗ ಶಿಷ್ಟರನ್ನು ರಕ್ಷಿಸಲು ಮತ್ತು ದುಷ್ಟರನ್ನು ಶಿಕ್ಷಿಸಲು, ಅನ್ಯಾಯ ಹಾಗೂ ದಬ್ಬಾಳಿಕೆಯನ್ನು ಕೊನೆಗೊಳಿಸಲು ಮತ್ತು ಮನುಕುಲದ ನೈತಿಕ ಸಮತೋಲನವನ್ನು ಮರುಸ್ಥಾಪಿಸಲು ಅವತಾರದ ಅವರೋಹಣವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/169**

**ಧರ್ಮದ ಸಂರಕ್ಷಕ**

ರಾಜಕೀಯ ಸಾರ್ವಭೌಮದ, ರಾಜನ ಹಾಗೂ ಆತನ ಮಂಡಳಿಯ ಮತ್ತು ರಾಜ್ಯದ ಇನ್ನುಳಿದ ಹಾಲಿ ಸದಸ್ಯರ ಮುಖ್ಯ ಕರ್ತವ್ಯವು, ಸಮಾಜದ ಬದುಕಿನ ಆರೋಗ್ಯಕರ ಶಾಸನದ ಪೋಷಣೆಗೆ ನೆರವಾಗುವುದಾಗಿತ್ತು: ರಾಜನು, ಧರ್ಮದ ಪೋಷಕ ಹಾಗೂ ನಿರ್ವಾಹಕನಾಗಿದ್ದ. ಸಮಾಜದ ಕರ್ತವ್ಯವು, ಪ್ರಾಣದ, ಆರ್ಥಿಕ ಮತ್ತು ಮನುಷ್ಯರ ಇತರೇ ಅವಶ್ಯಕತೆಗಳನ್ನು ಸರಿಯಾಗಿ ನೆರವೇರಿಸುವುದನ್ನು, ಮತ್ತು ಸುಖ ಹಾಗೂ ಸಂತೋಷಕ್ಕೆ ಆತನ ಭೋಗದ ಅಧಿಕಾರವನ್ನು ಒಳಗೊಂಡಿತ್ತು (ಆದರೆ ಅವರ ಶಾಸನ ಮತ್ತು ವಿಚಾರ ಹಾಗೂ ತೃಪ್ತಿಯ ಪ್ರಮಾಣಕ್ಕೆ ಅನುಗುಣವಾಗಿ ಮತ್ತು ನೈತಿಕ, ಸಾಮಾಜಿಕ ಹಾಗೂ ಮತೀಯ ಧರ್ಮಕ್ಕೆ ಒಳಪಟ್ಟು). ಸಾಮಾಜಿಕ–ರಾಜಕೀಯ ಸಂಸ್ಥೆಯ ಎಲ್ಲ ಸದಸ್ಯರು ಮತ್ತು ಗುಂಪುಗಳು, ಅವರ ಸಹಜ ಸ್ವಭಾವದಿಂದ, ಅವರ ಸ್ಥಾನಮಾನದಿಂದ, ಇಡೀ ಸಂಸ್ಥೆಯೊಡನೆ ಅವರ ಸಂಬಂಧದಿಂದ ಅವರಿಗಾಗಿ ಗೊತ್ತುಪಡಿಸಿದ ತಮ್ಮ ಧರ್ಮವನ್ನು ಹೊಂದಿದ್ದರು. ಅದರ ಮುಕ್ತ ಹಾಗೂ ಶುದ್ಧ ಆಚರಣೆಯನ್ನು ಖಚಿತಪಡಿಸಲೇಬೇಕು ಮತ್ತು ಪೋಷಿಸಬೇಕು, ಅದನ್ನು ಅವರ ಸ್ವಂತ ಮಿತಿಗಳ ಒಳಗಡೆ (ಆದರೆ ಯಾವುದೇ ಉಲ್ಲಂಘನೆಯಿಂದ, ಅತಿಕ್ರಮಣದಿಂದ ಪ್ರತಿಬಂಧಿಸಲ್ಪಟ್ಟ ಅಥವಾ ಅವರ ಸರಿಯಾದ ಕಾರ್ಯ ಚಟುವಟಿಕೆಯಿಂದ ಹಾಗೂ ಮಿತಿಗಳಿಂದ ದಾರಿ ತಪ್ಪಿದ) ಅವರ ಸ್ವಾಭಾವಿಕ ಮತ್ತು ಸ್ವಯಂ ನಿರ್ಧಾರಿತ ಕಾರ್ಯ ನಿರ್ವಹಿಸುವಿಕೆಗೆ ಬಿಟ್ಟು ಬಿಡಬೇಕು. ಅದು, ಸರ್ವೋಚ್ಚ ರಾಜಕೀಯ ಅಧಿಕಾರದ ಕಾರ್ಯಸ್ಥಾನವಾಗಿತ್ತು, ಸಾರ್ವಜನಿಕ ಸಭೆಗಳಿಂದ ಸಹಾಯ ಪಡೆದ ಅವನ ಮಂಡಳಿಯಲ್ಲಿ ಸಾರ್ವಭೌಮವಾಗಿತ್ತು. ಜಾತಿ, ಧಾರ್ಮಿಕ ಸಮುದಾಯ, ಕೂಟ, ಗ್ರಾಮ, ಪಟ್ಟಣದ ಮುಕ್ತ ಕಾರ್ಯಾಚರಣೆಯಲ್ಲಿ ಹಸ್ತಕ್ಷೇಪ ಮಾಡುವುದು ಅಥವಾ ಅದನ್ನು ಅತಿಕ್ರಮಿಸುವುದು, ಅಥವಾ ಪ್ರದೇಶದ ಅಥವಾ ಪ್ರಾಂತ್ಯದ ಜೈವಿಕ (ಸುವ್ಯವಸ್ಥಿತ) ಪದ್ಧತಿಯನ್ನು ಅಥವಾ ಅವರ ಹಕ್ಕುಗಳನ್ನು ರದ್ದುಗೊಳಿಸುವುದು ರಾಜ್ಯ ಪ್ರಾಧಿಕಾರದ ವ್ಯವಹಾರವಾಗಿರುವದಿಲ್ಲ, ಇವುಗಳು ಅಂತರ್ಗತವಾಗಿದ್ದವು, ಏಕೆಂದರೆ, ಇವುಗಳು ಸಾಮಾಜಿಕ ಧರ್ಮದ ಸರಿಯಾದ ಆಚರಣೆಗೆ ಅಗತ್ಯವಾಗಿದ್ದವು. ಸಂಘಟಿಸಲು, ಸಾಮಾನ್ಯ ಮತ್ತು ಸರ್ವೋಚ್ಚ ನಿಯಂತ್ರಣವನ್ನು ಚಲಾಯಿಸಲು, ಬಾಹ್ಯ ದಾಳಿ ಅಥವಾ ಆಂತರಿಕ ಅಡ್ಡಿಪಡಿಸುವಿಕೆಯ ವಿರುದ್ಧ ಸಮುದಾಯದ ಜೀವನವನ್ನು ರಕ್ಷಿಸಲು, ಅಪರಾಧ ಮತ್ತು ಅವ್ಯವಸ್ಥೆಯನ್ನು ನಿಗ್ರಹಿಸಲು, ಆರ್ಥಿಕ

ಮತ್ತು ಕೈಗಾರಿಕಾ ಕಲ್ಯಾಣವನ್ನು ಉತ್ತೇಜಿಸಲು ಮತ್ತು ನಿಯಂತ್ರಿಸಲು, ಸೌಲಭ್ಯಗಳನ್ನು ಒದಗಿಸಲು ಮತ್ತು ಈ ಉದ್ದೇಶಗಳಿಗಾಗಿ ಅನುಮೋದಿಸಿದ ಪ್ರಭಾವವನ್ನು ಬಳಸಲು ಅದನ್ನು ಕರೆಯಲಾಗಿತ್ತು,

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/404–405**

**ರಾಜಕೀಯದಲ್ಲಿ ಧರ್ಮ**

ಹೀಗೆ, ವಸ್ತುತಃ, ಭಾರತೀಯ ರಾಜ್ಯಾಡಳಿತ ಕ್ರಮವು, ಒಂದು ಬಹಳೇ ಸಂಕೀರ್ಣವಾದ ಸಾಮುದಾಯಿಕ ಸ್ವಾತಂತ್ರ್ಯದ ಮತ್ತು ಸ್ವಯಂ ನಿರ್ಣಯದ ವ್ಯವಸ್ಥೆಯಾಗಿತ್ತು. ಸಮುದಾಯದ ಪ್ರತಿಯೊಂದು ಸಮೂಹ ಘಟಕವು ತನ್ನದೇ ಆದ ಸ್ವಾಭಾವಿಕ ಅಸ್ತಿತ್ವವನ್ನು ಹೊಂದಿತ್ತು ಮತ್ತು ತನ್ನ ಸೂಕ್ತವಾದ ಜೀವನ ಮತ್ತು ವ್ಯವಹಾರವನ್ನು ನಿಯಂತ್ರಿಸುತ್ತಿರುತ್ತಿತ್ತು. ಅದರ (ಪ್ರತಿಯೊಂದು ಘಟಕದ) ವ್ಯಾಪ್ತಿ ಹಾಗೂ ಮಿತಿಗಳ ಒಂದು ಸ್ವಾಭಾವಿಕ ಎಲ್ಲೆಯು ಬೇರೆಯದರಿಂದ ಪ್ರತ್ಯೇಕಿಸಿಲ್ಪಟ್ಟಿತ್ತು, ಆದರೆ ಚನ್ನಾಗಿ ತಿಳಿದುಕೊಂಡ ಸಂಬಂಧಗಳೊಂದಿಗೆ ಸಮಸ್ತದೊಡನೆ ಜೋಡಿಸಲ್ಪಟ್ಟಿತ್ತು. ಪ್ರತಿಯೊಂದು ಸಮೂಹ ಘಟಕವು ಉಳಿದ ಘಟಕಗಳೊಂದಿಗೆ ತನ್ನ ಸ್ವಂತ ಶಾಸನಗಳನ್ನು ಹಾಗೂ ನಿಯಮಗಳನ್ನು ಕಾರ್ಯಗತಗೊಳಿಸುತ್ತ, ತನ್ನ ಸ್ವಂತ ಯುಕ್ತವಾದ ಮಿತಿಗಳ ಒಳಗೆ ಆಡಳಿತ ನಡೆಸುತ್ತ, ಪರಸ್ಪರ ಅಥವಾ ಸಮಾನ್ಯ ಅಭಿರುಚಿಯ ವಿಷಯಗಳ ಚರ್ಚೆಯಲ್ಲಿ ಮತ್ತು ನಿಯಂತ್ರಣದಲ್ಲಿ ಉಳಿದವರೊಂದಿಗೆ ಪಾಲ್ಗೊಳ್ಳುತ್ತ, ಮತ್ತು ರಾಷ್ಟ್ರದ ಅಥವಾ ಸಾಮ್ರಾಜ್ಯದ ಸಾಮಾನ್ಯ ಸಭೆಗಳಲ್ಲಿ ತನ್ನ ಮಹತ್ವದ ಸ್ಥಾನಕ್ಕನುಗುಣವಾಗಿ ಪ್ರತಿನಿಧಿಸಿಕೊಳ್ಳುತ್ತ, ಉಳಿದವರೊಂದಿಗೆ ಸಾಮುದಾಯಿಕ ಅಸ್ತಿತ್ವದ ಅಧಿಕಾರಗಳಲ್ಲಿ ಮತ್ತು ಕರ್ತವ್ಯಗಳಲ್ಲಿ ಸಹ–ಭಾಗಿಯಾಗಿತ್ತು. ರಾಷ್ಟ್ರ, ಸಾರ್ವಭೌಮ ಅಥವಾ ಸರ್ವೋಚ್ಚ ರಾಜಕೀಯ ಅಧಿಕಾರವು ಸಮನ್ವಯದ ಮತ್ತು ಸಾಮಾನ್ಯ ನಿಯಂತ್ರಣ ಹಾಗೂ ದಕ್ಷತೆಯ ಒಂದು ಸಾಧನವಾಗಿತ್ತು, ಮತ್ತು ಅದು ಸರ್ವೋಚ್ಚ ಅಧಿಕಾರವನ್ನು (ಆದರೆ ಪೂರ್ಣವಲ್ಲದ) ಚಲಾಯಿಸಿತು; ತನ್ನ ಎಲ್ಲಾ ಹಕ್ಕುಗಳು ಮತ್ತು ಅಧಿಕಾರಗಳಲ್ಲಿ ಅದು ಕಾನೂನಿನಿಂದ ಸೀಮಿತವಾಗಿತ್ತು ಮತ್ತು ಜನರ ಇಚ್ಛೆಯಿಂದ ಸೀಮಿತವಾಗಿತ್ತು ಮತ್ತು ಅದರ ಎಲ್ಲಾ ಆಂತರಿಕ ಕಾರ್ಯಗಳಲ್ಲಿ ಮಾತ್ರ ಸಾಮಾಜಿಕ–ರಾಜಕೀಯ ಸಂಸ್ಥೆಯ ಇತರ ಸದಸ್ಯರ ಜೊತೆಗೆ ಸಹ–ಭಾಗಿಯಾಗಿತ್ತು.

ಇದು ಭಾರತದ ರಾಜಕೀಯದ ಸಿದ್ಧಾಂತ, ತತ್ತ್ವ, ಮತ್ತು ವಾಸ್ತವಿಕ ಸಂವಿಧಾನವಾಗಿತ್ತು. ಇದು ಸಾಮುದಾಯಿಕ ಸ್ವಾತಂತ್ರ್ಯದ ಮತ್ತು ಒಂದು ಸರ್ವೋಚ್ಚ ಸಂಘಟಿಸುವ ಅಧಿಕಾರದೊಡನೆ ಸ್ವಯಂ ನಿರ್ಣಯದ ಒಂದು ಸಂಕೀರ್ಣವಾಗಿತ್ತು. ಇದು, ದಕ್ಷ, ಸಮರ್ಥ ಸ್ಥಾನ ಹಾಗೂ ಪ್ರತಿಷ್ಠೆಯೊಂದಿಗೆ ಶಸ್ತ್ರಸಜ್ಜಿತವಾದ ಆದರೆ ಅದರ ಯುಕ್ತ ಹಕ್ಕುಗಳಿಗೆ ಹಾಗೂ ಕರ್ತವ್ಯಗಳಿಗೆ ಸೀಮಿತವಾದ ಒಂದು ಸಾರ್ವಭೌಮ ರೂಪ ಹಾಗೂ ಸಂಸ್ಥೆಯಾಗಿತ್ತು. ಒಂದು ಸಮಯದಲ್ಲಿ ಉಳಿದವುಗಳನ್ನು ನಿಯಂತ್ರಿಸುತ್ತ ಮತ್ತು ಅವುಗಳಿಂದ ನಿಯಂತ್ರಿಸಲ್ಪಡುತ್ತ, ಎಲ್ಲ ಶಾಖೆಗಳಲ್ಲಿ ಅವುಗಳನ್ನು ಅದರ ಕ್ರಿಯಾಶೀಲ ಸಹಭಾಗಿಗಳೆಂದು ಸೇರಿಸಿಕೊಳ್ಳುತ್ತ, ಸಮುದಾಯ ಅಸ್ತಿತ್ವದ ನಿಯಂತ್ರಣ ಹಾಗೂ ಆಡಳಿತವನ್ನು ಹಂಚಿಕೊಳ್ಳುತ್ತ, ಮತ್ತು ಎಲ್ಲದರಂತೆ, ಸಾರ್ವಭೌಮ, ಜನರು ಹಾಗೂ ಅದರ ಎಲ್ಲ ಅಂಗ ಸಮುದಾಯಗಳು, ಪೋಷಣೆಗೆ ಬದ್ಧವಾಗಿ ಮತ್ತು ಧರ್ಮದ ಬಂಧನದಿಂದ ಪ್ರತಿಬಂಧಿಸಲ್ಪಟ್ಟ ಇದು ಭಾರತದ ರಾಜಕೀಯದ ಸಿದ್ಧಾಂತ, ತತ್ವ, ಮತ್ತು ವಾಸ್ತವಿಕ ಸಂವಿಧಾನವಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ, ಸಾಮುದಾಯಿಕ ಜೀವನದ ಆರ್ಥಿಕ ಹಾಗೂ ರಾಜಕೀಯ ಅಂಶಗಳು ಧರ್ಮದ ಭಾಗ ಮಾತ್ರವಾಗಿದ್ದವು ಮತ್ತು ಉಳಿದವುಗಳೊಂದಿಗೆ ಬಿಡಿಸಿಕೊಳ್ಳಲಾಗದೆ (ಧಾರ್ಮಿಕ, ನೈತಿಕ, ಸಾಮಾಜಿಕ ಅಸ್ತಿತ್ವದ ಉನ್ನತ ಸಾಂಸ್ಕೃತಿಕ ಗುರಿ) ವಿಲೀನಗೊಂಡ ಆದರೆ ಎಂದಿಗೂ ಪ್ರತ್ಯೇಕವಲ್ಲದ ಒಂದು ಭಾಗವಾಗಿದ್ದವು. ನೈತಿಕ ವಿಧಿಯು ರಾಜಕೀಯ ಮತ್ತು ಆರ್ಥಿಕ ಅಂಶಗಳನ್ನು ವರ್ಣರಂಜಿತ–ಗೊಳಿಸಿದ್ದವು ಮತ್ತು ಅದನ್ನು ರಾಜನ ಹಾಗೂ ಆತನ ಮಂತ್ರಿಗಳ, ಪರಿಷತ್ತಿನ ಹಾಗೂ ಮಂಡಳಿಗಳ, ವ್ಯಕ್ತಿಯ, ಸಮಾಜದ ಅಂಗಗಳ ಪ್ರತಿಯೊಂದೂ ಕೆಲಸದ ಮೇಲೆ ಹೇರಲಾಗಿತ್ತು; ನೈತಿಕ ಹಾಗೂ ಸಾಂಸ್ಕೃತಿಕ ಪರಿಗಣನೆಗಳು, ಮತ ಹಾಗೂ ಮಂತ್ರಿಯ, ಅಧಿಕಾರಿಯ ಮತ್ತು ಆಡಳಿತ ಮಂಡಳಿಯ ಸದಸ್ಯರ ಅರ್ಹತೆಗಳ ಬಳಕೆಯಲ್ಲಿ ಪರಿಗಣಿಸಲಾಗಿದ್ದವು; ಆರ್ಯ ಜನರ ವ್ಯವಹಾರಗಳಲ್ಲಿ ಅಧಿಕಾರವನ್ನು ಹೊಂದಿದಂತ ಎಲ್ಲರಿಂದಲೂ ಒಂದು ಉನ್ನತ ನಡತೆಯನ್ನು ಹಾಗೂ ತರಬೇತಿಯನ್ನು ಅಪೇಕ್ಷಿಸಲಾಗಿತ್ತು. ಧಾರ್ಮಿಕ ಸ್ಫೂರ್ತಿ ಮತ್ತು ಧರ್ಮದ ಜ್ಞಾಪನೆಗಳು ಮುಖ್ಯವಾಗಿದ್ದವು ಮತ್ತು ರಾಜನ ಹಾಗೂ ಜನರ ಸಂಪೂರ್ಣ ಜೀವನದ ಹಿನ್ನೆಲೆಯಾಗಿದ್ದವು. ಸಮಾಜದ ಜೀವನವನ್ನು ಅದರ ವ್ಯವಸ್ಥೆಯ ಕೆಲವು ಭಾಗಗಳ ಅಗತ್ಯ ವಿಶೇಷತೆಯ ಹೊರತಾಗಿ ತನ್ನಲ್ಲಿಯೇ ಒಂದು ಗುರಿಯೆಂದು ಪರಿಗಣಿಸಲಾಗಿರಲಿಲ್ಲ, ಆದರೆ ಅದರ ಎಲ್ಲಾ ಭಾಗಗಳಲ್ಲಿ ಮತ್ತು ಒಟ್ಟಾರೆಯಾಗಿ

ಮಾನವ ಮನಸ್ಸು ಮತ್ತು ಆತ್ಮದ ಶಿಕ್ಷಣಕ್ಕಾಗಿ ಮತ್ತು ಸ್ವಾಭಾವಿಕ ಅಸ್ತಿತ್ವದ ಮೂಲಕ ಆಧ್ಯಾತ್ಮಿಕ ಅಸ್ತಿತ್ವದೆಡೆಗೆ ಅದರ ಬೆಳವಣಿಗೆಗೆ ಒಂದು ದೊಡ್ಡ ಚೌಕಟ್ಟು ಹಾಗೂ ತರಬೇತಿ ಮೈದಾನವಾಗಿ ಪರಿಗಣಿಸಲಾಗಿತ್ತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/405–406**

## ಅರ್ಥಶಾಸ್ತ್ರದಲ್ಲಿ ಧರ್ಮ

ರಾಜಕೀಯ, ಸಮಾಜ, ಅರ್ಥಶಾಸ್ತ್ರ, ಇವೆಲ್ಲವುಗಳು ಎರಡು ಸಂಗತಿಗಳ ಸ್ವಾಭಾವಿಕ ಕ್ಷೇತ್ರಗಳಾಗಿವೆ. ಮೊದಲನೆಯದು ಮಾನವ ಗುರಿಯ ಸ್ಥೂಲ ಭಾಗಗಳು ಮತ್ತು ಎರಡನೆಯದು ಭಾರತೀಯ ವ್ಯವಸ್ಥೆಯಲ್ಲಿ ಗುರುತಿಸಿದ ವರ್ತನೆ, ಆಸಕ್ತಿ ಹಾಗೂ ಭೋಗದ ಬಯಕೆ: ಉನ್ನತ ಶಾಸನವಾದ ಧರ್ಮವನ್ನು, ಜೀವನದ ಬಾಹ್ಯ ಬದಿಯಲ್ಲಿ ಭಾಗಶಃಕ್ಕಿಂತ ಅಧಿಕವಾದದ್ದನ್ನು ಎಲ್ಲಿಯೂ ತರಲಾಗಿಲ್ಲ, ಮತ್ತು ರಾಜಕೀಯದಲ್ಲಿ ಅತ್ಯಲ್ಪದ ಮಟ್ಟಿಗೆ; ನೀತಿ ಸೂತ್ರಗಳ ಆಚಾರದಿಂದ ರಾಜಕೀಯ ಕಾರ್ಯವನ್ನು ನಿರ್ವಹಿಸುವಲ್ಲಿನ ಪ್ರಯತ್ನವು ಸಮಾನ್ಯವಾಗಿ ಒಂದು ಆಡಂಬರವಲ್ಲ. ಮೋಕ್ಷ(ಮುಕ್ತ ಆಧ್ಯಾತ್ಮಿಕ ಅಸ್ತಿತ್ವ)ದೊಡನೆ, ಸಾಮೂಹಿಕ ಬಾಹ್ಯ ಜೀವನದ ನಿಜವಾದ ಒಂದಾಗುವಿಕೆಯನ್ನು ಅಥವಾ ಹೊಂದಾಣಿಕೆಯನ್ನು ಕಲ್ಪಿಸಿರುವುದು ಅಥವಾ ಪ್ರಯತ್ನಿಸಿರುವುದು ಬಹಳೇ ಅಪರೂಪ, ಪ್ರೌಢ ಮಾನವ ಕುಲದ ಹಿಂದಿನ ಇತಿಹಾಸದಲ್ಲಿ ಈ ರೀತಿ ಸಂಭವಿಸಿದ್ದು ಅತಿ ಕಡಿಮೆ. ಅದಕ್ಕನುಸಾರ, ಭಾರತದ ಸಾಮಾಜಿಕ, ಆರ್ಥಿಕ (ಉಳಿದ ವಲಯಗಳಿಗಿಂತ ಮುಂಚೆ ಇಲ್ಲಿ ಪ್ರಯತ್ನವು ವಿಫಲವಾಯಿತಾದರೂ) ಮತ್ತು ಅವಳ ಜೀವನದ ರಾಜಕೀಯ ಆಳ್ವಿಕೆ, ವ್ಯವಸ್ಥೆ, ಅಸ್ತಿತ್ವದ ಆವರ್ತನೆಯೂ ಸಹ ಹಿಂದಿರುವ ಆಧ್ಯಾತ್ಮಿಕ ಮಹತ್ವದ ಸ್ಥೂಲಪ್ರಸ್ತಾಪದೊಂದಿಗೆ ಧರ್ಮದಿಂದ ನಡೆಸಿದ ಆಡಳಿತವು, – ವ್ಯಕ್ತಿಗತ ಪ್ರಯತ್ನಕ್ಕೆ ಒಂದು ಉಚ್ಚ ಗುರಿಯನ್ನಾಗಿ ಬಿಟ್ಟ ಆಧ್ಯಾತ್ಮಿಕ ಜೀವನದ ಪೂರ್ಣ ಸಾಧನೆಯು – ಅವಳ ಪುರಾತನ ವ್ಯವಸ್ಥೆಯು ಮುಂದುವರೆದಿತ್ತು ಎನ್ನುವುದನ್ನು ನಾವು ಕಾಣುತ್ತೇವೆ. ದೃಢ ನಿರ್ಧಾರ ಮತ್ತು ತಾಳ್ಮೆಯೊಂದಿಗೆ ಅವಳು ಈ ಹೆಚ್ಚು ಪ್ರಯತ್ನವನ್ನು ಮಾಡಿದಳು ಮತ್ತು ಅದು ಅವಳ ಸಾಮಾಜಿಕ ವ್ಯವಸ್ಥೆಗೆ ಒಂದು ವಿಶಿಷ್ಟವಾದ ಛಾಪನ್ನು ನೀಡಿತು. ಒಂದು ಸಂಪೂರ್ಣ ಅನುಭವ, ಜೀವನ ಮತ್ತು ಚೈತನ್ಯವನ್ನು ಹೆಚ್ಚು ಸಮನ್ವಯಗೊಳಿಸುವ ಹೆಚ್ಚು ಖಚಿತವಾದ ಜ್ಞಾನ, ಅವಳ

ಪ್ರಾಚೀನ ಜೀವಿತೋದ್ದೇಶ, ಆಳವಾದ ಆಧ್ಯಾತ್ಮಿಕ ಸತ್ಯದ ಸಾಕ್ಷಾತ್ಕಾರದ ಮೇಲೆ ಮನುಷ್ಯನ ಸಾಮೂಹಿಕ ಇರುವಿಕೆಯ ಸ್ಥಾನ–ಮಾನ ಹಾಗೂ ಕ್ರಿಯೆಯನ್ನು, ನಮ್ಮ ಜೀವಿತದ ಇನ್ನೂ ಅರಿತುಕೊಳ್ಳದ ಆಧ್ಯಾತ್ಮಿಕ ಸಾಧ್ಯತೆಗಳನ್ನು ಕಂಡುಕೊಳ್ಳುವುದು ಮತ್ತು ಅವಳ ಜನರ ಜೀವನವನ್ನು ಮಾನವತೆಯಲ್ಲಿ ಮಹಾ ಚೇತನದ, ವಿರಾಟ ಪುರುಷನ ಒಂದು ಜಾಗೃತ ಸಾಮುದಾಯಿಕ ಆತ್ಮ ಮತ್ತು ದೇಹದ, ವಿಶ್ವಾತ್ಮಕ ಚೇತನದ ಲೀಲೆಯನ್ನಾಗಿ ಮಾಡುವಷ್ಟರ ಮಟ್ಟಿಗೆ ಬೆಳಗಿಸುವುದು, ಒಂದು ಪೂರ್ಣ ಗುರಿಯೊಂದಿಗೆ ಪ್ರಾರಂಭಿಸುತ್ತ ಮತ್ತು ವಿಸ್ತರಿಸುತ್ತ, ಇದು, ಬಹುಶಃ ಭಾರತದ ಭವಿಷ್ಯಕ್ಕಾಗಿ ಇರಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/397–398 – ಶ್ರೀ ಅರವಿಂದರು**

## ಜೀವನ ಮತ್ತು ಧರ್ಮ

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

### ತ್ರಿವಿಧ ರೂಪದ ಜೀವನಗಳು

ಈ ಮರ್ತ್ಯದಲ್ಲಿ ಆಧ್ಯಾತ್ಮಿಕ ಜೀವನ, ಧಾರ್ಮಿಕ ಜೀವನ ಮತ್ತು ನೈತಿಕತೆಯನ್ನು ಒಂದು ಭಾಗವಾಗಿ ಹೊಂದಿರುವ ಸಾಮಾನ್ಯ ಮಾನವರ ಜೀವನಗಳೆಂಬ ಮೂರು ವಿಧವಾದ ಜೀವನ ವಿಧಾನಗಳು ಅಸ್ತಿತ್ವದಲ್ಲಿವೆ. ಮತ್ತು ಪ್ರತಿಯೋರ್ವರು ಇವುಗಳಲ್ಲಿ ತಮಗೆ ಬೇಕಿರುವ ಒಂದನ್ನು ಆರಿಸಿಕೊಂಡು ಆಚರಿಸಬೇಕು. ಹಾಗೂ ಈ ಮೂರನ್ನೂ ಒಂದೇ ದೃಷ್ಟಿಕೋನದಲ್ಲಿ ಅರ್ಥೈಸಿಕೊಂಡು ಗೊಂದಲಕ್ಕೆ ಒಳಗಾಗಬಾರದು. ಇವುಗಳಲ್ಲಿ ಅತಿ ಕೆಳಮಟ್ಟದ ಜೀವನದ ರೂಪವಾದ ಸಾಮಾನ್ಯ ಜೀವನವು ಋತಚೇತನದಿಂದ ಮತ್ತು ದಿವ್ಯತೆಯಿಂದ ಬೇರೆಯಾಗಿ, ಬರಿಯ ಅಜ್ಞಾನದ ನಿಯಮಗಳನ್ನು ಅನುಸರಿಸುವ ದೇಹ–ಪ್ರಾಣ–ಮನಗಳಿಗೆ ಮಾತ್ರ ಸೀಮಿತವಾಗಿರುವ ಸಾಮಾನ್ಯ ಬದುಕಿನ ರೂಪವಾಗಿದೆ; ಇನ್ನು ಎರಡನೆಯದಾದ ಧಾರ್ಮಿಕ ಜೀವನವು ಈ ಹಿಂದೆ ಹೇಳಿದ ಅದೇ ಮೂರು ಸ್ತರಗಳ ಅಜ್ಞಾನದ ವಲಯದಲ್ಲೇ ಬದುಕುತ್ತಿರುವ ಮಾನವ ಪ್ರಜ್ಞೆಯ ರೂಪವಾಗಿದೆ. ಹಾಗೂ ಈ ಧಾರ್ಮಿಕ ಜೀವನವು ಬುವಿಯನ್ನು ಭೂಮದೆಡೆಗೆ ಆರೋಹಿಸಲು ಪ್ರಯತ್ನಿಸುತ್ತಿರುತ್ತದೆ ಮತ್ತು ಜ್ಞಾನರಹಿತವಾದ ಈ ಭೂ–ಪ್ರಜ್ಞೆಯ ಬಂಧನದಿಂದ ಮರ್ತ್ಯವನ್ನು ಮುಕ್ತಗೊಳಿಸುವ ಮಾರ್ಗವನ್ನು

ಕಂಡುಕೊಳ್ಳಲು ಪ್ರಯತ್ನಿಸುತ್ತಿವೆ ಎಂದು ಸಾರುತ್ತಿರುವ ಹಲವಾರು ಧಾರ್ಮಿಕ ಪಂಥಗಳ ನಿಯಮ–ಸಿದ್ಧಾಂತಗಳಿಗೆ ಬದ್ಧವಾಗಿ, ಅದನ್ನು ಕಾರ್ಯರೂಪಕ್ಕೆ ತರಲು ಹೆಣಗಾಡುತ್ತ, ಈ ಭೂಮಿಯ ಅಜ್ಞಾನಯುತವಾದ ಪ್ರಜ್ಞೆಯ ಸೀಮೆಯಲ್ಲಿಯೇ ಸುತ್ತುಹಾಕುತ್ತಿರುತ್ತದೆ. ಒಂದು ರೀತಿಯಲ್ಲಿ ಈ ಧಾರ್ಮಿಕ ಜೀವನವು ಆಧ್ಯಾತ್ಮಿಕ ಜೀವನಕ್ಕೆ ಮಾರ್ಗ ಪರಿಣಾಮಕವಾಗಿರಬಹುದು. ಆದರೆ, ಆ ಔನ್ನತ್ಯದ ಆಧ್ಯಾತ್ಮಿಕತೆಯನ್ನು ಪಡೆಯಲು ವಿವಿಧ ರೀತಿಯ ವಿಧಿಗಳು, ಆಚರಣೆಗಳು, ಸಮಾರಂಭಗಳು ಮತ್ತು ಪರಿಕಲ್ಪನೆಗಳ ಸುಳಿಯೊಳಗೆ ಸುತ್ತುತ್ತ ಅದರಿಂದ ಬಹು ದೂರದಲ್ಲೇ ಉಳಿದು ಬಿಡುತ್ತದೆ; ಇದಕ್ಕೆ ವ್ಯತಿರಿಕ್ತವೆಂಬಂತೆ ಆಧ್ಯಾತ್ಮಿಕ ಜೀವನವು ಅಜ್ಞಾನದಿಂದ ಕೂಡಿದ ಸಾಮಾನ್ಯ ಜೀವನದ ತ್ರಿ–ವಲಯಗಳಿಂದಲೂ, ದೇವರ ಪರಿಕಲ್ಪನೆಯಿಂದ ಕೂಡಿದ ಧಾರ್ಮಿಕ ಜೀವನದ ಪದ್ಧತಿಗಳಿಂದಲೂ ಮುಕ್ತವಾಗಿ ಪ್ರಜ್ಞಾ ಪ್ರವರ್ತನೆಯ ಮೂಲಕ ತನ್ನ ಕಾರ್ಯವನ್ನು ಸಮರ್ಥವಾಗಿ ಸಾಧಿಸಿಕೊಳ್ಳುತ್ತದೆ. ಓರ್ವ ಸಾಧಕನು ತನ್ನ ನಿಜವಾದ ಅಸ್ತಿತ್ವವನ್ನು ಕಂಡುಕೊಳ್ಳಲು ಮತ್ತು ದಿವ್ಯತೆಯೊಂದಿಗೆ ನೇರ ಮತ್ತು ನಿಕಟ ಸಂಪರ್ಕವನ್ನು ಸಾಧಿಸಲು ಆಧ್ಯಾತ್ಮಿಕ ಅನ್ವೇಷಣೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಬೇಕಿದೆ.

ನೈತಿಕತೆಯು ಸಾಮಾನ್ಯ ಜೀವನದ ಒಂದು ಅತಿಮುಖ್ಯವಾದ ಭಾಗವಾಗಿದ್ದು, ಇದು ಕೆಲವು ಮಾನಸದ ನಿಯಮಗಳ ಮೂಲಕ ಜಡ ಭೌತಿಕದ ಚಟುವಟಿಕೆಯನ್ನು ನಿಯಂತ್ರಿಸುವ ಅಥವಾ ಈ ಮೃಣ್ಮಯದ ಪ್ರತಿಯೊಂದು ಪಾತ್ರಗಳನ್ನು ಆ ಮಾನಸದ ಅಧಿನಿಯಮಗಳ ಆದರ್ಶದಡಿಯಲ್ಲೇ ಪ್ರತಿರೂಪಿಸುವ ಪ್ರಯತ್ನದಲ್ಲಿ ತೊಡಗಿರುತ್ತದೆ.

ಆದರೆ ಆಧ್ಯಾತ್ಮಿಕ ಜೀವನವು ಮನೋಮಯದ ಪರಿಧಿಯನ್ನೂ ಮೀರಿ ಮುಂದೆ ಸಾಗಿರುತ್ತದೆ; ಮಾನಸಕ್ಕೂ ಔನ್ನತ್ಯದಲ್ಲಿರುವ ಅಂತರಾತ್ಮಾಯನದ ಅತಿ ಆಳದಲ್ಲಿ ಜಾಗೃತವಾಗಿರುವ ಪ್ರಜ್ಞಾ ಗೋಳವನ್ನು ಪ್ರವೇಶಿಸುತ್ತದೆ, ಮತ್ತು ಆ ಆತ್ಮ ಮಂಡಲದಲ್ಲಿರುವ ಋತಚೇತನದ ನಿಯತಿಗಳಿಗೆ ತಕ್ಕಂತೆ ಕಾರ್ಯನಿರ್ವಹಿಸುತ್ತದೆ. ಇನ್ನು ನೈತಿಕತೆಯನ್ನು ತೋರಿಸುವ ಸಾಮಾನ್ಯ ಜೀವನ ಮತ್ತು ದೇವರನ್ನು ಅರಿತುಕೊಳ್ಳಲು ಪ್ರಯತ್ನಿಸುವ ಧಾರ್ಮಿಕ ಜೀವನದ ವಿಷಯಕ್ಕೆ ಬಂದರೆ, ಆ ಎರಡೂ ರೀತಿಯ ಜೀವನಗಳು ಮರ್ತ್ಯ ಬದುಕಿಗೆ ಪೂರ್ಣತೆಯನ್ನು ನೀಡಲು ಶಕ್ಯವಾಗಿವೆಯೇ ಎಂಬ ಇನ್ನೊಂದು ಪ್ರಶ್ನೆಯು ಉದ್ಭವಿಸುತ್ತದೆ. ಇವೆರಡಕ್ಕಿಂತ

ಸರಳ–ಸುಂದರವಿರುವ ಆಧ್ಯಾತ್ಮಿಕ ಜೀವನವು ಸಾಧಕನನ್ನು ಆ ಪ್ರಜ್ಞಾಪತಳಿಯೆಡೆಗೆ ಹಿಡಿದೆತ್ತಲು ಸಮರ್ಥವಾಗಿದೆ. ಆದರೆ, ನೈತಿಕತೆಗೆ–ಧಾರ್ಮಿಕತೆಗೆ ಇದನ್ನು ಕರುಣಿಸುವ ಸಾಮರ್ಥ್ಯವಿಲ್ಲ.

ರಾಜಕೀಯವು ಆಧ್ಯಾತ್ಮಿಕ ಜೀವನದೊಡನೆ ಯಾವುದೇ ರೀತಿಯ ಸಂಬಂಧವನ್ನು ಹೊಂದಿಲ್ಲ. ಆಧ್ಯಾತ್ಮಿಕ ಅನ್ವೇಷಕನಾದ ಸಾಧಕನೋರ್ವನು ತನ್ನ ರಾಷ್ಟ್ರಕ್ಕಾಗಿ ಯಾವುದಾದರೂ ಸೇವೆಯನ್ನು ಸಲ್ಲಿಸಿದರೆ, ಅದು ದಿವ್ಯತೆಯ ಇಚ್ಛೆಯಿಂದಲೇ ನಡೆದ ಕಾರ್ಯವಾಗಿರುತ್ತದೆ. ಹಾಗೂ ಅದು ದಿವ್ಯತೆಯು ನಿಗದಿಪಡಿಸಿದ ವೈಶ್ವಿಕ ಕಾರ್ಯದ ಒಂದು ಭಾಗವೇ ಆಗಿರುತ್ತದೆಯೇ ಹೊರತು, ಇದರಲ್ಲಿ ಸಾಮಾನ್ಯ ಮಾನವನ ಯಾವುದೇ ಉದ್ದೇಶಗಳಿರುವದಿಲ್ಲ. ಈ ಮರ್ತ್ಯದ ಪ್ರತಿಯೊಂದು ಚಲನೆಗಳು ಪ್ರಾಣ–ಮನದಿಂದಲ್ಲ ಬದಲಿಗೆ ಅಂತರಾತ್ಮದ ಋತಚೇತನದಿಂದಲೂ, ಆ ಚಿತ್ ಪುರುಷನ ಆಂತರ್ಯದ ಆದೇಶದಿಂದಲೂ ವರ್ತಿಸುತ್ತಿರುತ್ತವೆ.

ಪತ್ರಗಳಲ್ಲಿ ಹೇಳಲಾಗಿರುವ ಪೂಜೆಯು ಧಾರ್ಮಿಕ ಜೀವನಕ್ಕೆ ಸೇರಿದ ಅಂಶವಾಗಿದ್ದು, ಅದನ್ನು ಧಾರ್ಮಿಕ ಮನೋಭಾವನೆಯ ಮೂಲಕ ಅತಿಯಾಳದ ಪ್ರಜ್ಞೆಯಿಂದ ಆಚರಿಸಿದ್ದೇ ಆದಲ್ಲಿ ನಮ್ಮ ಮನ–ಹೃದಯಗಳನ್ನು ಆಧ್ಯಾತ್ಮಿಕ ಸಾಧನೆಗೆ ಸ್ವಲ್ಪ ಮಟ್ಟಿನಲ್ಲಿ ಸಿದ್ಧಪಡಿಸಬಹುದು. ಆದರೆ ಅದಕ್ಕೂ ಹೆಚ್ಚಿನ ಸಂಪರ್ಕ ಸಾಧನೆಗೆ ಪೂಜೆಯ ಅವಶ್ಯಕತೆಯಿರುವದಿಲ್ಲ. ಈ ಪೂಜೆಯನ್ನು ಬರಿ ಧಾರ್ಮಿಕ ವಿಧಿಯಂತೆ ಆಚರಿಸದೇ, ಅದನ್ನೊಂದು ಧ್ಯಾನ ಸಾಧನೆಯ ಭಾಗವಾಗಿ ಅಥವಾ ಉತ್ತುಂಗದಲ್ಲಿರುವ ಆಧ್ಯಾತ್ಮಿಕ ಪ್ರಜ್ಞೆಗೆ ಏರಬೇಕೆಂಬ ನಿಜವಾದ ಅಭೀಪ್ಸೆಯೊಂದಿಗೆ ಮತ್ತು ಆ ದಿವ್ಯತೆಯೊಡನೆಯ ಸಂಪರ್ಕ ಸಾಧನೆಯ ರೂಪದಲ್ಲಿ ಅನುಸರಿಸಿದರೆ, ಅದು ನಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ಪರಿಣಾಮಕಾರಿಯಾದ ಪರಿವರ್ತನೆಯನ್ನು ನೀಡಬಲ್ಲದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/420**

**ಮತದ ನಿಯಮದ ರೀತಿಯಲ್ಲಿ ಬದುಕುವುದು**

ಭಾರತದಲ್ಲಿ ಧರ್ಮವನ್ನು ಮತದ ಹಂತದಲ್ಲಿ ಅಂದರೆ ಸಂಕುಚಿತ ಅರ್ಥದಲ್ಲೇ ಉಪಯೋಗಿಸಲ್ಪಡುತ್ತಿದೆ. ಯೋಗದ ಉತ್ತುಂಗದ ಹಂತದಿಂದಾಗಲಿ

ಅಥವ ನಿಮ್ಮ ಸಹವರ್ತಿಯೋರ್ವನನ್ನು ಕತ್ತುಹಿಸುಕಿ ಕೊಲ್ಲುವವರೆಗೆ ಮತ್ತು ಅವನನ್ನು ಅವನ ಭೌತಿಕ ವಸ್ತುಗಳಿಂದ ಮುಕ್ತಗೊಳಿಸುವವರೆಗಿನ ಯಾವುದಕ್ಕೂ ಸಹ ಇದನ್ನು ಅರ್ಥೈಸಬಹುದು. ಹಾಗಾಗಿ ಭಾರತದಲ್ಲಿ ಧರ್ಮದೊಳಗೆ ಸೇರಿದ ವಿಷಯ ವ್ಯಾಪ್ತಿಯು ವಿಶಾಲವಾಗಿದೆ. ಆದರೂ ಅದನ್ನು ಅತಿ ಸಂಕ್ಷಿಪ್ತವಾಗಿ ವಿವರಿಸುವದಾದರೆ, ನಾವು ಬದುಕುತ್ತಿರುವ ಧರ್ಮವು ನಮ್ಮ ಇಡೀ ಜೀವನವನ್ನು ತನ್ನ ನಿಯಮಗಳಡಿಯಲ್ಲೇ ನಿಯಂತ್ರಿಸುತ್ತಿರುತ್ತದೆ. ಇನ್ನು ಧಾರ್ಮಿಕ ರೀತಿಯಲ್ಲಿ ಬದುಕುವುದು ಎಂದರೇನು? ಎಂಬ ಪ್ರಶ್ನೆಗೆ ಉತ್ತರವನ್ನು ಸಾಮಾನ್ಯ ಅರ್ಥದಲ್ಲಿ ನೋಡ ಹೊರಟರೆ, ಒಂದು ಅಧಿಕಾರಬದ್ಧವಾಗಿ ನಿಯಮದಡಿಯಲ್ಲಿ ಬದುಕುವುದು ಎಂದರ್ಥವಾಗುತ್ತದೆ. ಇಲ್ಲಿ ಈ ಅಧಿಕಾರಬದ್ಧವಾದ ನಿಯಮವನ್ನು ಶಾಸ್ತ್ರ ಎಂದು ಕರೆಯಬಹುದು. ಆದರೆ ಈ ಶಾಸ್ತ್ರ ಮತ್ತು ಭಾರತೀಯ ಧಾರ್ಮಿಕ ಜೀವನವನ್ನು ಕೂಲಂಕಷವಾಗಿ ಅಧ್ಯಯನ ಮಾಡಿದರೆ, ಇವೆರಡರ ಮಧ್ಯೆ ಯಾವುದೇ ರೀತಿಯ ಸಂಬಂಧಗಳು ಕಂಡುಬರುವದಿಲ್ಲ. ಹಾಗೆ ಕೆಲವು ಸೂಕ್ಷ್ಮಮಟ್ಟದ ಸಂಬಂಧ–ಗಳಿವೆಯೆಂದು ತೋರ್ಪಡಿಸಿದರೂ, ಅದು ಅತಿ ಕಡಿಮೆ ಮಟ್ಟದ ಪ್ರಭಾವವನ್ನು ಹೊಂದಿರುತ್ತವೆ. ಪ್ರತಿಯೋರ್ವ ಭಾರತೀಯರೂ ತಮ್ಮ ಜೀವನವನ್ನು ಶಾಸ್ತ್ರಗಳಿಂದಲ್ಲ, ಬದಲಿಗೆ ಬ್ರಾಹ್ಮಣ ತತ್ತ್ವ ಮತ್ತು ಪದ್ಧತಿಗಳಿಂದ ಪ್ರೇರಿತನಾಗಿ ನಡೆಸುತ್ತಿರುತ್ತಾರೆ. ಆದರೆ, ಅದು ನೇರವಾಗಿ ಅಲ್ಲ ಬದಲಿಗೆ ಕೆಲವು ಧಾರ್ಮಿಕ ಆಚರಣೆ ಮತ್ತು ಸಾಮಾಜಿಕ ಪದ್ಧತಿಗಳ ರೂಪದಲ್ಲಿ ಅವಿರ್ಭಾವಗೊಂಡಿರುತ್ತದೆ. ಆದರೆ, ಅವರು ತಾವು ನಡೆಸುತ್ತಿರುವ ಆಚರಣೆ ಮತ್ತು ಪದ್ಧತಿಗಳ ಆಧ್ಯಾತ್ಮಿಕ ರೂಪ ಅಥವಾ ಅದರ ಉಪಯುಕ್ತತೆಯನ್ನು ಅರ್ಥ ಮಾಡಿಕೊಳ್ಳದೆಯೇ, ಶಾಸ್ತ್ರಗಳನ್ನು ಅದರ ಮೂಲಾರ್ಥವನ್ನು ಅರಿಯದೇ, ಅದರ ತತ್ತ್ವಗಳನ್ನು ಪರಿಪಾಲಿಸುತ್ತ, ಅದರ ಪರಿಧಿಯಲ್ಲಿಯೇ ಬದುಕುತ್ತಿರುತ್ತಾರೆ. ಇದರ ನಿರರ್ಥಕತೆಯು ಇಲ್ಲಿಗೇ ನಿಲ್ಲುವದಿಲ್ಲ, ಎಲ್ಲಾ ಬ್ರಾಹ್ಮಣರನ್ನು ಪೂಜ್ಯರೆಂದು ಗೌರವಿಸುವುದು; ಸಮಾಜದಲ್ಲಿ ಕೀಳರೆಂದು ಪರಿಗಣಿಸಲ್ಪಟ್ಟ ಸಮುದಾಯದವರು ಸಿದ್ಧಪಡಿಸಿದ ಆಹಾರವನ್ನು ಸೇವಿಸದೇ ಇರುವುದು; ತಾರುಣ್ಯಾವಸ್ಥೆಗೆ ಬರುವ ಮುನ್ನವೇ ಹೆಣ್ಣು ಮಕ್ಕಳ ಮದುವೆ ಮಾಡಿ ಗಂಡನ ಮನೆಗೆ ಕಳಿಸುವುದು, ಇದಾದ ನಂತರ ತ್ವರಿತದಲ್ಲಿ ಮನೆಯ ಗಂಡು ಮಗನ ಮದುವೆ ಮಾಡಿ ಸೊಸೆಯನ್ನು ತರುವುದು; ಮಹಿಳೆಯರನ್ನು ಸಾಮಾಜಿಕವಾಗಿ ಬಳಸಿಕೊಂಡರೂ ಸಹ ಅವರನ್ನು ಅಜ್ಞಾನದ ಕತ್ತಲೆಯಲ್ಲಿಯೇ ಜೀವನ ಸವೆಸುವಂತೆ ಒತ್ತಾಯಿಸುವುದು; ಬರಿ

ದೇಹದ ಸ್ನಾನ ಮತ್ತು ಮಡಿಯ ಆಚರಣೆಯನ್ನೇ ಶುಚಿತ್ವ ಎಂದು ತಿಳಿದು ಆಚರಿಸುವುದು; ಮೇಜಿನ ಮೇಲೆ ಊಟ ಮಾಡುವ ಬದಲು ನೆಲದ ಮೇಲೆ ಕೂತು ಉಣ್ಣುವುದು; ದಿನವೊಂದಕ್ಕೆ ಎರಡೆರಡು ಬಾರಿ ಸಂಧ್ಯಾವಂದನೆಗಳಂತಹ ಪದ್ಧತಿಗಳ ಮೂಲಕ ಅದರ ಮೂಲಾರ್ಥವನ್ನು ಅರಿಯದೇ ಅದನ್ನು ಭಕ್ತಿಯಿಂದ ಆಚರಿಸುವುದು; ಬೇರೊಬ್ಬರ ನಡತೆಯಲ್ಲಿ ಕೊಂಕುತನವನ್ನು, ಅರ್ಥಹೀನವಾಗಿರುವ ಸೂಕ್ಷ್ಮತೆಗಳನ್ನು ಗುರುತಿಸುವುದು; ಹಿಂದೂ ದೇವತೆಗಳ ವಿಗ್ರಹಗಳನ್ನು ಪ್ರತಿಷ್ಠಾಪಿಸಿ, ಪೂಜಿಸಿ, ವಿಸರ್ಜಿಸುವ ದಿನಗಳನ್ನು ರಜಾ ದಿನಗಳಾಗಿ ಘೋಷಿಸಿ, ಆ ದಿನಗಳಲ್ಲಿ ಕಾರ್ಯ ಚಟುವಟಿಕೆಗಳನ್ನು ನಿರ್ಬಂಧಿಸುವುದು... ಈ ಪಟ್ಟಿಯು ಇನ್ನೂ ಬೆಳೆಯುತ್ತಲೇ ಹೋಗುತ್ತದೆ. ಇಂತಹ ಕನಿಷ್ಠವಾದ ಆಚರಣೆಗಳನ್ನು ಭಾರತದಲ್ಲಿ ಹಿಂದೂ ಧರ್ಮವೆಂದೂ, ಸತಾನತ ಧರ್ಮವೆಂದೂ ವೈಭವೀಕರಿಸಲಾಗುತ್ತದೆ. ಭಾವನಾತ್ಮಕ ರೂಪದ ಧರ್ಮ ನಿಷ್ಠೆಯನ್ನು ಹೊಂದಿರುವ ವ್ಯಕ್ತಿಯನ್ನು ಭಕ್ತನೆಂದೂ, ವೇದ–ಉಪನಿಷತ್–ದರ್ಶನ–ಪುರಾಣಗಳ ಬಗ್ಗೆ ನಿರರ್ಗಳವಾಗಿ ಮಾತನಾಡುವ ಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿಯನ್ನು ಜ್ಞಾನಿಯೆಂದೂ, ಕಂದು ವರ್ಣದ ನಿಲುವಂಗಿಯನ್ನು ತೊಟ್ಟು ತಾಪಸ ರೀತಿಯಲ್ಲಿ ಬದುಕುತ್ತಿದ್ದರೆ ಅವನನ್ನು ತ್ಯಾಗಿ ಅಥವಾ ಸನ್ಯಾಸಿಯೆಂದೂ ಕರೆದು ಅವರನ್ನು ವೈಭವೀಕರಿಸಲಾಗುತ್ತದೆ. ಅದೇ ಬೇರೊಬ್ಬ ವ್ಯಕ್ತಿಯು ಸಾಮಾನ್ಯವಾದ ಧರ್ಮಗಳಿಂದ ದೂರವಾಗಿ, ಭಿಕ್ಷು ರೂಪದಲ್ಲಿರದೆ, ಸಸ್ಯಾಹಾರವನ್ನು ಬಿಟ್ಟು ಮಾಂಸಾಹಾರಕ್ಕೆ ಅಂಟಿಕೊಂಡಿದ್ದರೆ ಅವನನ್ನು ದುಷ್ಟನೆಂದು ಸಂಬೋಧಿಸಲಾಗುತ್ತದೆ. ಇಲ್ಲಿ ಎಲ್ಲವೂ ಬ್ರಾಹ್ಮಣರ ಪದ್ಧತಿಯಲ್ಲಿಯೇ ನಡೆಯಬೇಕು. ಭಾರತೀಯ ಧರ್ಮದ ಶ್ರೇಷ್ಠತೆಯೆಂದರೆ, ಓರ್ವ ಭಕ್ತ ಅಥವಾ ಓರ್ವ ಸನ್ಯಾಸಿಯು ವಿಚಿತ್ರವಾದ ವೇಷವನ್ನು ಧರಿಸದಿದ್ದರೆ, ಅಥವಾ ಕ್ರಾಂತಿಕಾರಿ ವಿಷಯಗಳಿಂದ ದೂರವಾಗಿದ್ದರೆ ಮಾತ್ರ ಅವರನ್ನು ಗೌರವದಿಂದ ಕಾಣಲಾಗುತ್ತದೆ. ಆದರೆ, ಯುರೋಪಿಯನ್ ದೇಶಗಳಲ್ಲಿ ಅಂತಹ ವ್ಯಕ್ತಿಗಳನ್ನು ಅನ್ಯಾಯಕಾರ, ಧರ್ಮವನ್ನು ವೃತ್ತಿ–ವ್ಯಾಪಾರವನ್ನಾಗಿಸಿಕೊಂಡ ವಂಚಕ, ಅಥವಾ ಧಾರ್ಮಿಕ ಆಚರಣೆಯಲ್ಲಿ ಮಾನಸಿಕ ಸ್ವಸ್ಥತೆಯನ್ನು ಕಳೆದುಕೊಂಡ ಹುಚ್ಚ ಎಂದು ಕರೆಯಲಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 1/492–93**

## ಕಾನೂನು ಮತ್ತು ಕಾರ್ಯ–ಕಾರಣತ್ವ

ಮರ್ತ್ಯಮಯ ಜೀವನದಲ್ಲಿ ಕಾನೂನಿನ ಇನ್ನೊಂದು ರೂಪವೇ ಆಗಿರುವ ಸಮರ್ಥ ಕಾರ್ಯ–ಕಾರಣತ್ವವನ್ನು ಹೊರತುಪಡಿಸಿದ ಬೇರಾವ ವಿಧಿಯೂ ನಮ್ಮನ್ನು ಕೈಹಿಡಿದು ನಡೆಸುವದಿಲ್ಲ. ಸಿದ್ಧಾಂತ ರೂಪದಲ್ಲಿರುವ ಈ ಕಾನೂನು ಪ್ರಕೃತಿಯ ಸಿದ್ಧ ಹಸ್ತದಲ್ಲಿರುವ ಒಂದು ಸಾಧನವಾಗಿದ್ದು, ಇದೊಂದು ವಿಧಾನ ಅಥವಾ ಕ್ರಿಯೆಗೆ ಕಾರಣವಾಗಿರುವ ನಿಯಮವಾಗಿರುತ್ತದೆ. ತತ್ತ್ವ ಶಾಸ್ತ್ರದ ಪರಿಭಾಷೆಯಲ್ಲಿ ಇದನ್ನು ಕಾನೂನು ಎನ್ನುವ ಬದಲು ಧರ್ಮ ಎಂದು ಸಂಬೋಧಿಸಲಾಗುತ್ತದೆ. ಇದು ವಿಶ್ವದ ಪ್ರತಿಯೊಂದು ಭಾಗದ ಕ್ರಿಯೆಗಳನ್ನು ಪರಿವೀಕ್ಷಿಸುವದರ ಜೊತೆಗೆ, ಈ ವಿಶ್ವದ ಪ್ರತಿಯೊಂದು ಕಣದ ಕಾರ್ಯ ಚಟುವಟಿಕೆಗಳ ಮೇಲೂ ತನ್ನ ಪ್ರಭುತ್ವವನ್ನು ಸಾಧಿಸಿರುತ್ತದೆ. ಈ ಅಣು–ಮಹತ್ತುಗಳ ಪ್ರತಿಯೊಂದು ಸ್ಪಂದನಗಳನ್ನು ಕರ್ಮ, ಕಾರ್ಯ, ಕ್ರಿಯೆ ಅಥವಾ ಶಕ್ತಿ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಹಾಗೂ ಈ ಧರ್ಮ ಅಥವಾ ಸೈದ್ಧಾಂತಿಕ ಕಾನೂನಿನ ವ್ಯಾಖ್ಯಾನವು ಆ ಕಾರ್ಯ ಚಟುವಟಿಕೆಗಳನ್ನು ನಡೆಸುವ ವಸ್ತುವಿನ ಸ್ವರೂಪದ ಮೇಲೆ ನಿರ್ಧರಿಸಲ್ಪಟ್ಟಿರುತ್ತದೆ. ಈ ಪರಿಕಲ್ಪನೆಯನ್ನು ಸ್ವಭಾವನಿಯತ ಕರ್ಮ ಎಂದು ಕರೆಯಲಾಗುತ್ತದೆ. ದ್ರವ್ಯದಲ್ಲಿರುವ ಪ್ರತಿಯೊಂದು ಕಣಗಳು ತಮ್ಮದೇ ಆದ ಸ್ವಭಾವವನ್ನು ಹೊಂದಿದ್ದು, ಅವು ತಮ್ಮ ಸ್ವಭಾವಕ್ಕೆ ಅನುಗುಣವಾದ ಕ್ರಿಯೆಗಳಲ್ಲಿ ತೊಡಗಿರುತ್ತವೆ. ಅಂತಹ ಕಣಗಳ ಸಮೂಹವಾಗಿರುವ ವಸ್ತು ಅಥವಾ ಜೀವಿಗಳೂ ಸಹ ತಮ್ಮನ್ನು ನಿರ್ಮಿಸಿದ ಕಣಗಳ ಸ್ವಭಾವಕ್ಕೆ ತಕ್ಕಂತೆ ಬದುಕುತ್ತಿರುತ್ತವೆ. ಕೊನೆಗೆ ಈ ದ್ರವ್ಯ–ಜೀವಿಗಳಿಂದ ತುಂಬಿದ ವ್ಯಾಪ್ತ ವಿಶ್ವವೂ ಸಹ ತನ್ನ ರಚನೆಗೆ ಕಾರಣವಾದ ಕಣದ ಸ್ವಭಾವದಂತೆಯೇ ಪ್ರವರ್ತನಗೊಳ್ಳುತ್ತಾ ಸಾಗುತ್ತಿರುತ್ತದೆ. ಉದಾಹರಣೆಗೆ ಮನು ಕುಲವು ವ್ಯಕ್ತಿ ಸಮುಯದಾಯಗಳಿಂದಾದ ಸಮೂಹವಾಗಿದ್ದು, ಅಲ್ಲಿ ಪ್ರತಿಯೋರ್ವಮಾನವನು ತನ್ನ ಸ್ವಭಾವಕ್ಕೆ ತಕ್ಕಂತೆ ವರ್ತಿಸುತ್ತಾನೆ. ಈ ಮನುಕುಲದ ವರ್ತನೆಯು ಇತರ ಜೀವ ಪ್ರಭೇದಗಳಾದ ಪಶು–ಪಕ್ಷಿ–ವೃಕ್ಷಾದಿಗಳ ವರ್ತನೆಗಿಂತ ಭಿನ್ನವಾಗಿರುತ್ತದೆ. ಅದು ವ್ಯಕ್ತಿಸಮುದಾಯದ ನಿಯಮವಾಗಿದೆ. ಇನ್ನು ಆ ಮನುಕುಲದಲ್ಲಿಯೇ ಬದುಕುತ್ತಿರುವ ಪ್ರತಿಯೋರ್ವ ವ್ಯಕ್ತಿಗೂ ತನ್ನದೇ ಆದ ಸ್ವಂತ ಸ್ವಭಾವಗಳಿರುತ್ತವೆ. ಆ ಸ್ವಭಾವವು ಅವನನ್ನು ಸಮೂಹ ಮಾಧ್ಯದ ಇತರ ವ್ಯಕ್ತಿಗಳಿಗಿಂತ ಭಿನ್ನವಾದ ಮಾನವ ಸ್ವಭಾವಿಯಂತೆ ನಿರೂಪಿಸುತ್ತದೆ. ಹೀಗೆ ಈ ಸ್ವಭಾವಗಳು ಸಂಕೀರ್ಣಗೊಳ್ಳುತ್ತಾ ಸಾಗುತ್ತವೆ. ಆದರೆ ಈ ವಿಶ್ವದಲ್ಲಿರುವ

ಪ್ರತಿಯೊಂದು ಜೀವಿಯೂ ತನ್ನ ವೈಯಕ್ತಿಕ ಸ್ವಭಾವವನ್ನೂ ಮೀರಿ ತನ್ನ ಹಿಂದಿನ ಕರ್ಮಗಳಿಗನುಸಾರವಾಗಿ ಮುಂದಿನ ಕರ್ಮ ಜೀವನವನ್ನು ರೂಪಿಸಿಕೊಳ್ಳುತ್ತದೆ. ಇದುವೇ ವಿಶ್ವದ ಕಾನೂನಾಗಿದ್ದು, ಅದನ್ನೇ ವಿಶ್ವ ಧರ್ಮ ಎಂದು ಸಂಬೋಧಿಸಲಾಗುತ್ತದೆ.

ನಮ್ಮ ಇಂದಿನ ಬದುಕನ್ನು ನಿರ್ಮಿಸುವ ಕಾರಣೀಕತೆಯನ್ನು ನಮ್ಮ ಹಿಂದಿನ ಕರ್ಮ ಫಲ ಎಂದು ವ್ಯಾಖ್ಯಾನಿಸಬಹುದು. ಹಿಂದೂ ಸಿದ್ಧಾಂತದ ಪ್ರಕಾರ ನಮ್ಮ ಪ್ರತಿಯೊಂದು ಭಾವನೆ, ಆಲೋಚನೆ, ನುಡಿ, ನಡವಳಿಕೆಗಳೆಲ್ಲವೂ ಈ ಕರ್ಮ ಫಲದಿಂದ ರೂಪುಗೊಂಡ ಪರಿಣಾಮಗಳೇ ಆಗಿರುತ್ತವೆ. ಇದಕ್ಕೆ ತದ್ವಿರುದ್ಧವೆಂಬಂತೆ ಯುರೋಪಿಯನ್ ಸಿದ್ಧಾಂತವು ಹೇಳುವ 'ಆಂತರ್ಯದ ಭಾವನೆಗಿಂತಲೂ ಬಾಹ್ಯದ ಆಲೋಚನೆಯೇ ನಮ್ಮ ಅಭಿವ್ಯಕ್ತಿಗೆ ಬಹು ಮುಖ್ಯವಾದ ಅಂಶವಾಗಿದೆ' ಎಂಬ ನುಡಿಯನ್ನು ಭಾರತೀಯ ಸಿದ್ಧಾಂತವು ತಳ್ಳಿ ಹಾಕುತ್ತದೆ. ನಮ್ಮ ಇಂದಿನ ಬದುಕಿಗೆ ನಮ್ಮ ಬಾಹ್ಯ ಆಲೋಚನೆಯ ಒಂದಂಶವಷ್ಟೇ ಕಾರಣವಾದರೂ ಅದರಿಂದ ದೊರೆವ ಫಲಿತಾಂಶಕ್ಕೆ ಕರ್ಮ ಫಲವೇ ಮೂಲಕಾರಣವಾಗಿರುತ್ತದೆ. ಈ ಕರ್ಮ ಫಲವು ಹಲವು ರೀತಿಯ ಫಲಿತಾಂಶಗಳನ್ನು ನೀಡುತ್ತದೆ. ಉದಾಹರಣೆಗೆ: ನಮ್ಮ ಈಗಿನ ಬಾಹ್ಯ ಆಲೋಚನೆಯು ನಮ್ಮಿಂದ ಕೆಲವು ಕ್ರಿಯೆಗಳನ್ನು ಮಾಡಲು ಪ್ರೇರೇಪಿಸುತ್ತದೆ, ನುಡಿ–ನಡವಳಿಕೆಗಳನ್ನು ಸೃಷ್ಟಿಸುತ್ತದೆ. ಈ ವೈಚಾರಿಕತೆಯಿಂದ ಉದ್ಭವಿಸಿದ ಕರ್ಮವು ಬರಲಿರುವ ನಮ್ಮ ಮುಂದಿನ ಜೀವನದಲ್ಲಿ ಅದೃಷ್ಟ ಅಥವಾ ದುರಾದೃಷ್ಟಗಳಿಗೆ ಮೂಲಕಾರಣವಾಗುತ್ತದೆ. ನಾವು ಈ ಭವದಲ್ಲಿ ಬೇರೊಬ್ಬರ ಮೇಲೆ ತೋರುವ ದ್ವೇಷ–ಪ್ರೇಮಗಳು ನಮ್ಮ ಮುಂದಿನ ಜನ್ಮದಲ್ಲಿ ದುಃಖ–ಸಂತೋಷಗಳ ರೂಪದಲ್ಲಿ ಸಾಕಾರಗೊಳ್ಳುತ್ತದೆ. ಹಾಗೂ ನಮ್ಮ ಆ ಮುಂದಿನ ಜನ್ಮದಲ್ಲೂ ನಮ್ಮ ಭಾವನೆ–ವಿಚಾರಗಳಲ್ಲಿ ಬದಲಾವಣೆಗಳು ಕಾಣದೇ ಇದ್ದಲ್ಲಿ, ಅದರ ಕರ್ಮ ಫಲದ ಪ್ರವೃತ್ತಿಯು ಮುಂದುವರಿಯುತ್ತಲೇ ಸಾಗುತ್ತದೆ. ಇದರಿಂದ ಜನ್ಮಜನ್ಮಾಂತರಗಳ ಸರಣಿ ಬಂಧನವು ಸಾಗುತ್ತಲೇ ಹೋಗುತ್ತದೆ. ಈ ನಿರಂತರದ ಸರಪಳಿಯಿಂದ ಮುಕ್ತನಾಗಬಯಸಿದರೆ, ನಮ್ಮ ಭಾವನೆ–ವೈಚಾರಿಕತೆಯಲ್ಲಿ ಉತ್ತಮ ಬೆಳವಣಿಗೆಯನ್ನು ರೂಢಿಸಿಕೊಳ್ಳಬೇಕು. ಇದರಿಂದ ಕರ್ಮ ನಿರ್ಜರೆಯಾಗಿ ಜನ್ಮ–ಮರು ಜನ್ಮಗಳ ಬಂಧನದಿಂದ ಬಿಡುಗಡೆಯಾಗಿ, ಮೋಕ್ಷ ಪದವಿಯು ಲಭಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/48**

## ಪ್ರತಿಯೋರ್ವನಲ್ಲಿರುವ ವಿಶಿಷ್ಟ ಧರ್ಮ

ಭಾರತೀಯ ಸಂಸ್ಕೃತಿಯ ದೃಷ್ಟಿಕೋನದ ಪ್ರಕಾರ, ಜ್ಞಾನದ ಅಡಿಯಲ್ಲಿ ನಿರ್ಮಿಸಲಾದ ಪೂರ್ಣ ರೂಪದ ಜೀವನ ಪದ್ಧತಿಯನ್ನೇ ಧರ್ಮ ಎಂದು ಕರೆಯಲಾಗುತ್ತದೆ. ಅದು ಆದರ್ಶಯುತವಾದ ತಿಳುವಳಿಕೆ ಮತ್ತು ನಮ್ಮ ಸಂಸ್ಕೃತಿಯ ದೃಷ್ಟಿಕೋನದಲ್ಲೇ ಬದುಕುವುದು ಹಾಗೂ ಆ ಜ್ಞಾನದ ಜೀವನ ರೀತಿ ಮತ್ತು ವಸ್ತುಸ್ಥಿತಿಯನ್ನು ಅವಲಂಬಿಸಿರುತ್ತದೆ. ಈ ವಿಶ್ವದ ಪ್ರತಿಯೊಂದು ಜೀವಿ, ಮನುಷ್ಯ, ವರ್ಗ, ಕುಲ, ಜ್ಞಾತಿಗಳ ದೇಹ–ಪ್ರಾಣ–ಮನ–ಆತ್ಮಗಳೆಲ್ಲವೂ ತಮ್ಮದೇ ಆದ ಧರ್ಮವನ್ನು ಹೊಂದಿವೆ. ಅವು ಆಯಾ ಧರ್ಮಕ್ಕನುಸಾರವಾಗಿಯೇ ತಮ್ಮ ಕಾರ್ಯ ಚಟುವಟಿಕೆಗಳನ್ನು ನಿಯಂತ್ರಿಸುತ್ತಿರುತ್ತವೆ. ಆದರೆ, ಈ ಎಲ್ಲ ಸ್ತರಗಳಿಂದ ರೂಪಿತನಾದ ಮಾನವನ ನೈತಿಕ ಸಂಸ್ಕೃತಿ ಮತ್ತು ಅವನ ಜೀವನ ವಿಧಾನದ ಮೇಲೆ ಆ ಜೀವನ ಧರ್ಮದ ಉಚ್ಚ–ನೀಚ ಭಾಗಗಳನ್ನು ಪರಿಗಣಿಸಲಾಗುತ್ತದೆ. ಮರ್ತ್ಯ ಜೀವನದ ನೈತಿಕ ಅಂಶದ ಮೇಲೆ ಅಧ್ಯಯನವನ್ನು ಕೈಗೊಂಡ ಅಜ್ಞಾನಯುತವಾದ ವಿಮರ್ಶಕರ ಅಂಕೆಯನ್ನೂ ಮೀರಿ ಈ ನೈತಿಕತೆಯು ಭಾರತೀಯ ಚಿಂತನೆ ಮತ್ತು ಭಾರತೀಯ ಗ್ರಂಥಸ್ಥ ತತ್ತ್ವಗಳಲ್ಲಿ ತನ್ನ ಸ್ಥಾನವನ್ನು ಪಡೆದುಕೊಂಡಿತ್ತು. ಆದರೆ, ಅದರ ಅರಿವು ಸಮ್ಯಕ್ ಜ್ಞಾನ ಮತ್ತು ಚೈತನ್ಯದ ಪರಿಧಿಯವರೆಗೆ ವಿಸ್ತರಿಸಿಲ್ಲ. ಮತ್ತು ಆ ದಿವ್ಯತೆಯ ಅತ್ಯುನ್ನತ ಜ್ಞಾನ ಮತ್ತು ದರ್ಶನದ ಪರಿಕಲ್ಪನೆಯ ಎತ್ತರವನ್ನು ತಲುಪಿಲ್ಲ. ಮರ್ತ್ಯನ ನೈತಿಕ ಸ್ವರೂಪಗಳಿಗೆ ಮತ್ತು ಈ ವಿಶ್ವದ ನೈತಿಕ ನಿಯಮಗಳಿಗೆ ತದ್ವಿರುದ್ಧವಾದ ಕಲ್ಪನೆಗಳನ್ನು ಭಾರತೀಯ ಚಿಂತನಾ ವಿಧಾನವು ಲಘುವಾಗಿ ಸ್ವೀಕರಿಸುತ್ತದೆ. ಏಕೆಂದರೆ, ಆ ನಿಯಮದ ಪ್ರಕಾರ ಮನುಷ್ಯನು ತನ್ನ ಪ್ರಸ್ತುತ ಜೀವನದಲ್ಲಿ ಬಯಸಿದ ಎಲ್ಲವನ್ನೂ ಪೂರೈಸಿಕೊಳ್ಳಲು ಮುಕ್ತ ಅವಕಾಶವನ್ನು ಅದು ಕಲ್ಪಿಸಿ ಕೊಡುತ್ತದೆ. ಅದಕ್ಕೆ ಹೊರತಾಗಿರುವ ಆಂತರ್ಯದ ಅನ್ವೇಷಣೆಗೆ ಬೇಕಿರುವ ಪ್ರಜ್ಞಾ ವಿಕಸನದ ಅಭೀಪ್ಸೆಯನ್ನು ಪೂರೈಸುವಲ್ಲಿ ಅದು ವಿಫಲವಾಗಿದೆ. ಈ ಹಿಂದೆಯೇ ಹೇಳಿದಂತೆ ವಿಶ್ವದ ಪ್ರತಿಯೊಂದು ಅಣುವಿಗೂ ತನ್ನದೇ ಆದ ಸೈದ್ಧಾಂತಿಕವಾದ ಕಾನೂನುಗಳಿವೆ. ಅದು ಆ ದ್ರವ್ಯದ ಆಸಕ್ತಿ–ಬಯಕೆಯನ್ನಷ್ಟೇ ಅವಲಂಬಿಸಿರುವದಿಲ್ಲ ಬದಲಿಗೆ ಆ ಅಭೀಪ್ಸೆಗಳನ್ನು ಪೂರೈಸಿಕೊಳ್ಳಲಿಕ್ಕಿರುವ ನಿಯಂತ್ರಣದ ನಿಯಮಗಳು, ಅಭ್ಯಾಸವನ್ನು ಸಹ ಒಳಗೊಂಡಿರುತ್ತದೆ. ಅದುವೇ ಆ ದ್ರವ್ಯದ ಧರ್ಮವೆಂದು ಪರಿಗಣಿತವಾಗುತ್ತದೆ. ನಮ್ಮ ಶಾಸ್ತ್ರದಲ್ಲಿ ದ್ರಷ್ಟಾರರು ಉಲ್ಲೇಖಿಸಿರುವ ಧರ್ಮದ ವ್ಯಾಪ್ತಿಯು ವಿಶಾಲವಾಗಿದ್ದು, ಅದನ್ನು ಪಾಲಿಸಲು

ಬೇಕಿರುವ ಹಲವು ನಿಯಮಗಳನ್ನು ಕಾನೂನುಗಳನ್ನು ವಿವರಿಸಿದ್ದಾರೆ. ಹೀಗೆ ಉಲ್ಲೇಖಿಸಲಾದ ಧರ್ಮದಲ್ಲಿ ಸಾಮಾಜಿಕತೆಯೇ ಮೊದಲ ಕಾನೂನಾಗಿದೆ. ಏಕೆಂದರೆ, ಮನುಷ್ಯನು ತನ್ನ ದೇಹ–ಪ್ರಾಣ–ಮನ–ಆತ್ಮಗಳಿಂದ ನಿಯಂತ್ರಿಸಲ್ಪಟ್ಟಿರುತ್ತಾನೆ. ಇವುಗಳಲ್ಲಿ ಅತ್ಯಂತ ಕೆಳಮಟ್ಟದ ಭೌತಿಕ ವಲಯವಾದ ಮೃಣ್ಮಯದಲ್ಲಿ ಬದುಕಬೇಕಾದರೆ, ಅವನು ಮೊದಲು ತನ್ನಂತೆಯೇ ಇರುವ ಇತರ ವ್ಯಕ್ತಿ ಸಮುದಾಯದೊಡನೆ ಹೊಂದಾಣಿಕೆಯ ಬದುಕನ್ನು ನಡೆಸಬೇಕಿರುತ್ತದೆ. ಆನಂತರವೇ ಅವನ ಪ್ರಾಣ–ಮನ ಕೊನೆಗೆ ಅಂತರಾತ್ಮದ ಮೂಲಕ ದಿವ್ಯತೆಗೆ ತನ್ನನ್ನು ತಾನು ಅರ್ಪಿಸಿಕೊಳ್ಳಬೇಕಿರುತ್ತದೆ. ಆದರೆ ಎಲ್ಲಕ್ಕಿಂತ ಮೊದಲು ಅವನು ತನ್ನ ಸಾಮಾಜಿಕ ವಲಯಕ್ಕೆ ತನ್ನನ್ನು ತಾನು ಆಧೀನಪಡಿಸಿಕೊಳ್ಳಬೇಕಿರುತ್ತದೆ. ಆದರೆ ಈ ಸಾಮಾಜಿಕ ಪರಿಕಲ್ಪನೆಯಲ್ಲಿ ಉಗ್ರಗಾಮಿಗಳಲ್ಲಿರುವಂತೆ ತನ್ನನ್ನು ತಾನು ಆಹುತಿಗೊಳ್ಳಬೇಕೆಂಬ ನೀಚ ಪ್ರಮೇಯಗಳಿಲ್ಲ. ಬದಲಿಗೆ ಅವನು ತನ್ನ ಸಮಾಜದಲ್ಲಿ ಇತರರೊಡನೆ ಸಾಮರಸ್ಯದಿಂದ ಬದುಕನ್ನು ನಡೆಸಬೇಕಿರುತ್ತದೆ. ಇದನ್ನು ಬೌದ್ಧ ಧರ್ಮಿಯರು ಒತ್ತಿ ಹೇಳುತ್ತಾರೆ. ಅವರ ಪ್ರಕಾರ, ಓರ್ವ ವ್ಯಕ್ತಿ ತಾನು ಆಚರಿಸುತ್ತಿರುವ ಧರ್ಮದ ಚೌಕಟ್ಟಿನೊಳಗೆ ಬದುಕುತ್ತ ತನ್ನ ಸುತ್ತಲಿರುವ ಇತರ ಸಮುದಾಯಗಳೊಡನೆ ಸಹಜೀವನವನ್ನೂ ನಡೆಸಬೇಕು. ಅದು ಹಿಂಸಾತ್ಮಕ ಪ್ರವೃತ್ತಿಯಲ್ಲಾಗಿರದೇ, ಆದರ್ಶಯುತವಾದ ನಡವಳಿಕೆಯ ರೂಪದಲ್ಲಿರಬೇಕು. ಹೀಗೆ ಅವನು ಧರ್ಮದ ಮೊದಲ ಹಂತವಾದ ಸಾಮಾಜಿಕ ಪ್ರಜ್ಞೆಯಿಂದ ಮುಂದಿನ ಹಂತವಾದ ಅಂತರಾತ್ಮದ ಸ್ತರಕ್ಕೆ ಮುಂಬರಿಯುತ್ತಾನೆ. ಈ ರೂಪದಲ್ಲಿಯೇ ಅವನು ಚೈತನ್ಯದ ಪರಮಾವಧಿಗೆ ಚರಿಸಬಲ್ಲನು ಏಕೆಂದರೆ, ಅವನು ತನ್ನ ಇಡೀ ಜೀವನದಲ್ಲಿ ವೈಶ್ವಿಕ ಧರ್ಮದ ನಿಯಮಗಳಡಿಯಲ್ಲೇ ಬದುಕ ನಡೆಸಿರುತ್ತಾನೆ. ಹೀಗೆ ಮರ್ತ್ಯದಲ್ಲಿರುವ ಪ್ರತಿಯೊಂದು ಧರ್ಮಗಳೂ ಆಂತರ್ಯದಲ್ಲಿ ಒಂದಕ್ಕೊಂದು ನಿಕಟವಾದ ಸಂಬಂಧವನ್ನು ಹೊಂದಿರುತ್ತವೆ. ಹಾಗಾಗಿ ಪ್ರತಿಯೋರ್ವರೂ ತಮ್ಮ ತಮ್ಮ ಧರ್ಮದಲ್ಲಿ ನೈತಿಕಯುತವಾಗಿ ಬದುಕುತ್ತ ತಮ್ಮ ಚೈತನ್ಯವನ್ನು ಆಧ್ಯಾತ್ಮಿಕ ದಿವ್ಯತೆಯೆಡೆಗೆ ಕೊಂಡೊಯ್ಯಬೇಕು. ಆ ಮೂಲಕವೇ ಅವನ ಆತ್ಮದ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕು. ನಮ್ಮ ಜೀವನದ ನಿಯಮಗಳು ಧರ್ಮ ಮತ್ತು ನೀತಿ ಶಾಸ್ತ್ರಗಳ ಹಿಂದಿನ ರಕ್ಷಾ ಕವಚವಾಗಿ ಮಾತ್ರವಲ್ಲದೆ, ನಾವು ನಡೆದವ ದಾರಿಯಲ್ಲಿ ಬೆಳಕಾಗಿ, ಧಾರ್ಮಿಕ ಶಕ್ತಿಯಾಗಿ, ಚಿರಂತನವಿಹ ಜೀವನ ಪಯಣದಲ್ಲಿ ನಮ್ಮ ಜನ್ಮಾಂತರದ ಸರಣಿ ಬಂಧನಗಳನ್ನು ಬಿಡಿಸುವ ಕೀಲಿಕೈಯಾಗಿ

ದೇವ ನೆಲೆ ಮತ್ತು ಅದರಾಚೆಗಿನ ದಿವ್ಯ ಸ್ತರಗಳೆಡೆ ನಮ್ಮನ್ನು ಹಿಡಿದೆತ್ತುವ ಕೈಗಳಾಗಿ, ನಮ್ಮ ಏಕತೆಯನ್ನು ಆ ದೈವಿಕತೆಯೊಡನೆ ಮಿಲನಗೊಳ್ಳುವ ಅಂತಿಮ ಆಧ್ಯಾತ್ಮಿಕ ಸಂಪರ್ಕ ಸೇತುವಾಗಿ ಕಾರ್ಯನಿರ್ವಹಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/227**

## ಉನ್ನತ ಸ್ಥಾನ ಮತ್ತು ಉತ್ಕೃಷ್ಟ ಧಾರ್ಮಿಕ ಕರೆ

ನಮ್ಮ ಸಂಸ್ಕೃತಿಯ ಶ್ರೇಷ್ಠವಾದ ನಿಯಮವೆಂದರೆ, ಒಂದು ಉತ್ತಮ ಸ್ಥಾನದಲ್ಲಿರುವ ಮನುಷ್ಯನ ಪದವಿ ಮತ್ತು ಶಕ್ತಿಗಳು ಉನ್ನತವಾದಷ್ಟೂ ಅವನ ಕಾರ್ಯ ಚಟುವಟಿಕೆಗಳ ವ್ಯಾಪ್ತಿ ಮತ್ತು ಅವನ ಆದರ್ಶಯುತವಾದ ಪ್ರಭಾವವೂ ವಿಶಾಲವಾಗುತ್ತಾ ಸಾಗುತ್ತದೆ. ಅದಕ್ಕೆ ಅವನ ಮೇಲಾದ ಉತ್ಕೃಷ್ಟವಾದ ಧಾರ್ಮಿಕ ಕರೆಯೇ ಕಾರಣವಾಗಿರುತ್ತದೆ. ಪ್ರಾಕ್ತನವಾದ ನಮ್ಮ ಕಾನೂನು ಮತ್ತು ಪದ್ಧತಿಗಳ ಸಂಪೂರ್ಣ ಸಂಗ್ರಹವನ್ನು ಅನೃತ ಶಕ್ತಿಗಳ ದಾಳಿಯಿಂದ ರಕ್ಷಿಸಲೋಸುಗ ಅದನ್ನು ಋಷಿಗಳು ಮತ್ತು ದೇವತೆಗಳ ಪರಿವೀಕ್ಷಣೆಯಲ್ಲಿ ಸುರಕ್ಷಿತವಾಗಿಡಲಾಯಿತು. ಹಾಗೂ ಆ ಕಾನೂನು–ಪದ್ಧತಿಗಳಡಿಯಲ್ಲಿ ರಚನೆಯಾದ ಧರ್ಮವನ್ನು ಸಾಮಾಜಿಕ ರೂಪದಲ್ಲಿ ಪುನರ್ ರೂಪಿಸಿ ಅದನ್ನು ರಾಷ್ಟ್ರದ ಸೇವೆಯಲ್ಲಿ ನಿಯುಕ್ತನಾದ ರಾಜನ ರಕ್ಷಣೆಯಲ್ಲಿ ಇರಿಸಲಾಯಿತು. ಈ ಮೂಲಕ ರಾಜನು ಜನರನ್ನಾಳುವ ಆಡಳಿತ–ಗಾರನಾಗಿಯೂ, ಧರ್ಮವನ್ನು ರಕ್ಷಿಸುವ ಸೇವಕನಾಗಿಯೂ ನೆಲೆನಿಲ್ಲುವಂತಾಯಿತು. ಅವನ ಆಡಳಿತವು ಕಾನೂನಿನ ಚೌಕಟ್ಟಿನೊಳಗೆ ಅವನ ನಿಷ್ಠೆ ಇರುವವರೆಗೆ ಮುಂದುವರಿಯುತ್ತಿತ್ತು. ಅಲ್ಲಿಯವರೆಗೆ ಮಾತ್ರ ಇಡೀ ಸಮಾಜದ ಮೇಲೆ ಅವನ ಅಧಿಕಾರವು ನಡೆಯುತ್ತಿತ್ತು. ರಾಜ್ಯಾಡಳಿತದ ಈ ರಾಜಕೀಯ ಪದ್ಧತಿಗಳು ಆರಂಭಗೊಂಡ ನಂತರ, ಜನರಲ್ಲಿದ್ದ ಆಂತರ್ಯದ ಅನ್ವೇಷಣಾ ಅಭೀಪ್ಸೆಗಳು ಕಣ್ಮರೆಯಾಗುತ್ತಾ ಆ ಸ್ಥಾನವನ್ನು ಬಾಹ್ಯ ಜೀವನ ಪದ್ಧತಿಗಳು ಆಕ್ರಮಿಸಿಕೊಂಡವು. ವೇದಗಳ ಕಾಲದಲ್ಲಿ ಪ್ರತಿಯೊಂದು ಸಾಮಾಜಿಕ ಮತ್ತು ನಾಗರಿಕ ಕ್ರಿಯೆಗಳ ಹಿಂದೆ ಯಜ್ಞ, ಧಾರ್ಮಿಕ ವಿಧಿಗಳು, ದೈವಾಚರಣೆಗಳು, ಪೂಜೆ, ದೇವತಾಮಂತ್ರಣಗಳಂತಹ ಧಾರ್ಮಿಕ ಆಚರಣೆಗಳ ಬಲವಿರುತ್ತಿತ್ತು. ಅದರ ಫಲಿತಾಂಶವಾಗಿ ಜನ ಜೀವನದಲ್ಲಿ ಅತ್ಯುನ್ನತ ಗುರಿ ಸಾಧನೆಯ ಆರ್ಷಪ್ರೇರಣೆಯು ಹೊಮ್ಮುತ್ತಿತ್ತು. ಹೀಗೆ ಪ್ರತಿಯೊಂದು ಹಂತದಲ್ಲೂ ಧಾರ್ಮಿಕ ಕಲ್ಪನೆಯು ನಾಗರೀಕತೆಯನ್ನು ಕೈಹಿಡಿದು ನಡೆಸುತ್ತಿತ್ತು. ಈ ಪರಂಪರೆಯು ಎಷ್ಟು ವ್ಯಾಪ್ತವಾಗಿತ್ತೆಂದರೆ, ಆಧ್ಯಾತ್ಮಿಕ, ಬೌದ್ಧಿಕ ಮತ್ತಿತರ

ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಸಾಧಕರಿಗೆ ಕಾನೂನು, ಶಿಕ್ಷಣ, ಶಾಸ್ತ್ರ, ಸಂವಿಧಾನಗಳಂತಹ ಸಿದ್ಧಾಂತಗಳನ್ನು ರಚಿಸಲು, ಆಚರಿಸಲು ಮುಕ್ತ ಸ್ವಾತಂತ್ರ್ಯವನ್ನು ಕಲ್ಪಿಸಿಕೊಡಲಾಯಿತು. ಅದರ ಪ್ರತಿಫಲವಾಗಿ ಅದೆಷ್ಟೋ ಗ್ರಂಥ–ಶಾಸ್ತ್ರಗಳು ರಚನೆಗೊಂಡವು. ಆ ಮೂಲಕ ಕಠಿಣ ಕಾನೂನು ಮತ್ತು ಅಧಿಕಾರಬದ್ಧ ಕಾಯ್ದೆಗಳು ರೂಪುಗೊಂಡವು ಆದರೆ, ಕಾಲಕ್ರಮೇಣ ಜನ ಜೀವನವು ಈ ಸಾಂವಿಧಾನಿಕ ಶಾಸ್ತ್ರಗಳನ್ನು ಉತ್ಪೇಕ್ಷಿಸಲಾರಂಭಿಸಿತು. ಏಕೆಂದರೆ, ಆ ಕಾಯಿದೆಗಳು ಆ ಯುಗ ಧರ್ಮವನ್ನು ಅದರ ಚೈತನ್ಯಕ್ಕೆ ತಕ್ಕಂತೆ ಪರಿವರ್ತನೆಗೊಳ್ಳಲು ಮತ್ತು ಸಮಾಜವನ್ನು ಹೊಸ ರೂಪಗಳಿಗೆ ಬದಲಾಯಿಸಿಕೊಳ್ಳಲು ಮುಕ್ತ ಅವಕಾಶವನ್ನು ಕಲ್ಪಿಸಿಕೊಟ್ಟಿರಲಿಲ್ಲ. ಆನಂತರ ಪ್ರತಿಯೋರ್ವರಿಗೂ ಅವರವರ ಅನುಭಾವಕ್ಕೆ ತಕ್ಕಂತೆ ನೈತಿಕ ಜೀವನವನ್ನು ನಡೆಸಲು ಹಾಗೂ ಸಾಮಾಜಿಕ ಕಟ್ಟಳೆಗಳಿಂದ ಹೊರಗೆ ಧಾರ್ಮಿಕ ಜೀವನವನ್ನು ನಡೆಸಲು ಸ್ವಾತಂತ್ರ್ಯವನ್ನು ಕಲ್ಪಿಸಿಕೊಡುವ ಮೂಲಕ ಎಲ್ಲಾ ಸಮುದಾಯದವರಿಗೆ ಮುಕ್ತ ದ್ವಾರವನ್ನು ತೆರೆಯಲಾಯಿತು. ಅಂದಿನಿಂದ ಶಿಸ್ತು ಮತ್ತು ಕಟ್ಟುನಿಟ್ಟಿನ ಸಾಮಾಜಿಕ ಕಾನೂನು; ಉದಾತ್ತವೂ–ಉತ್ಕೃಷ್ಟವೂ ಆದ ಧರ್ಮದ ಶಿಸ್ತು ಮತ್ತು ಸ್ವ–ಸಂಸ್ಕೃತಿಗಳು; ಹಾಗೂ ಧಾರ್ಮಿಕ ಮತ್ತು ಆಧ್ಯಾತ್ಮಿಕ ಜೀವನದ ಸ್ವಾತಂತ್ರ್ಯ ವೈಶಾಲ್ಯತೆಗಳು ಆ ನಾಗರೀಕ ವ್ಯವಸ್ಥೆಯ ಮೂರು ಪ್ರಬಲ ಶಕ್ತಿಗಳಾಗಿ ನೆಲೆ ನಿಂತವು. ಅಂದಿನಿಂದ ಮಾನವ ಚೈತನ್ಯಗಳು ದೀರ್ಘ ಹೆಜ್ಜೆಯನಿಡುತ ಪೂರ್ಣತೆಯೆಡೆಗೆ ಚರಿಸಲಾರಂಭಿಸಿದವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/228–29**

### ನಮ್ಮ ಸ್ವಭಾವದೊಳಗೆ ಆಳವಾಗಿ ಬೇರೂರಿದ ನಿಯಮಗಳು

ಭಾರತೀಯ ಸಂಸ್ಕೃತಿಯಲ್ಲಿ ಧರ್ಮವೆಂದರೆ, ಅದು ಧಾರ್ಮಿಕ ಕ್ರಿಯಾ ವಿಧಿಗಳನ್ನು ಪೂರೈಸುವ ನಿಯಮಗಳಷ್ಟೇ ಅಲ್ಲದೆ ಅದು ನಮ್ಮ ವೈಯಕ್ತಿಕ ಸ್ವಭಾವದೊಳಗೆ ಆಳವಾಗಿ ಬೇರೂರಿದ ನಿಯಮವೂ ಆಗಿದೆ. ಆದರೆ, ಪಾಶ್ಚಿಮಾತ್ಯರು ಧರ್ಮವನ್ನು ಕೇವಲ 'ನೈತಿಕ ಮತ್ತು ಸಾಮಾಜಿಕ ನಿಯಮಗಳನ್ನು ಪ್ರೇರೇಪಿಸುವ ಒಂದು ನಂಬಿಕೆ ಅಥವಾ ಆದರ್ಶಯುತವಾದ ಸಿದ್ಧಾಂತ' ಎಂದು ನಂಬುತ್ತಾರೆ. ಮರ್ತ್ಯದ ಪ್ರತಿಯೋರ್ವ ವ್ಯಕ್ತಿಯ ಬದುಕಿನ ಸರ್ವಾಂಗೀಣ ಭಾಗಗಳಲ್ಲಿ ಕಾರ್ಯನಿರ್ವಹಿಸುವ ನಿಯಮವಾಗಿರುವ ಧರ್ಮವು ಆ ವ್ಯಕ್ತಿಯ ಜೀವನದಲ್ಲಿ ಅವನು ಅನ್ವೇಷಿಸುವ ನ್ಯಾಯಯುತವಾಗಿರುವ ಮತ್ತು ಪೂರ್ಣ ರೂಪದಲ್ಲಿರುವ

ಜೀವನಾದರ್ಶಗಳನ್ನು ಅದರ ಸತ್ಯ ಮತ್ತು ಸಮರ್ಥ ಸ್ವರೂಪದಲ್ಲಿ ಕಂಡುಕೊಳ್ಳುವದಕ್ಕೆ ಸಹಾಯವನ್ನು ಒದಗಿಸುವ ಶಕ್ತಿಯಾಗಿದೆ. ದ್ರವ್ಯವೊಂದರ ರಚನೆಗೆ ಕಾರಣವಾದ ಕಣಗಳು ತನ್ನ ಧರ್ಮದ ಪ್ರಕಾರ ಕಾರ್ಯನಿರ್ವಹಿಸುತ್ತ ತನ್ನ ಮೂಲ ಸ್ವಭಾವವನ್ನು ಆ ದ್ರವ್ಯದ ನಿಯಮವಾಗಿ ನಿರೂಪಿಸುತ್ತದೆ. ಆದರೆ ಮನುಷ್ಯ ಜೀವನದಲ್ಲಿ ಧರ್ಮವೆಂದರೆ, ಅದು ಅವನು ಬದುಕುತ್ತಿರುವ ಇತರ ವ್ಯಕ್ತಿ ಸಮುದಾಯದೊಡನೆ ಸಹಬಾಳ್ವೆಯ ಜೀವನವನ್ನು ನಡೆಸುವದರ ಜೊತೆಗೆ ಇತರರ ಮೇಲೆ ತನ್ನ ಆದರ್ಶಯುತವಾದ ನಿಯಮವನ್ನು ಪ್ರಜ್ಞಾಪೂರ್ವಕವಾಗಿ ವಿಧಿಸುವದಾಗಿದೆ. ಧರ್ಮವು ತನ್ನ ನಿರ್ಮಾಯ ಘನ ರೂಪದಲ್ಲಿ ಸ್ಥಿರವಾಗಿದೆ. ಆದರೆ ನಮ್ಮ ಪ್ರಜ್ಞೆಯಲ್ಲಿ ಮಾತ್ರ ಅದು ವಿಕಸನ ರೂಪದಲ್ಲಿ ಅಭಿವೃದ್ಧಿ ಹೊಂದುತ್ತಾ ಸಾಗುತ್ತದೆ. ಈ ವಿಕಸನದ ಸೋಪಾನವು ಹಲವು ಸ್ತರಗಳನ್ನು ಹೊಂದಿದೆ. ಆ ಆಧ್ಯಾತ್ಮಿಕ ಮತ್ತು ನೈತಿಕ ಆರೋಹಣದ ಹಂತಗಳು ನಮ್ಮ ಬದುಕನ್ನು ಚೇತನದ ಔನ್ನತ್ಯದ ಅನ್ವೇಷಣೆಯಲ್ಲಿ ನಮ್ಮನ್ನು ತೊಡಗಿಸುತ್ತದೆ. ಆದರೆ ಎಲ್ಲರೂ ತಮಗೆ ಇಷ್ಟವಿರುವ ಯಾವುದೋ ಒಂದು ಮಾರ್ಗದಲ್ಲಿ ಮುಂಬರಿಯಲು ಸಾಧ್ಯವಿಲ್ಲ. ಏಕೆಂದರೆ, ಈ ನೈತಿಕ ನಿಯಮವು ಬಹು ಸಂಕೀರ್ಣವಾದ ಸಿದ್ಧಾಂತಗಳನ್ನೂ, ವಿಭಿನ್ನವಾದ ಸ್ವರೂಪಗಳನ್ನೂ ಒಳಗೊಂಡಿರುತ್ತದೆ. ಹೇಗೆ ಸಮಾಜದ ಪ್ರತಿಯೋರ್ವರೂ ಬಾಹ್ಯ ಜೀವನದಲ್ಲಿ ಒಂದೇ ರೀತಿಯ ಕಾರ್ಯ, ಸ್ಥಾನಮಾನ, ಹಕ್ಕು, ಮಾನದಂಡಗಳನ್ನು ಹೊಂದಿರುವದಿಲ್ಲವೋ; ಹಾಗೆಯೇ ಅವರ ಆಂತರ್ಯದ ಜೀವನದಲ್ಲೂ ಒಂದೇ ರೀತಿಯ ಚೈತನ್ಯದ ಕರೆಯನ್ನು ಹೊಂದಿರುವದಿಲ್ಲ. ಏಕೆಂದರೆ, ಮನುಷ್ಯನು ಸಮಾಜದ ವಿವಿಧ ವಿಭಾಗಗಳಲ್ಲಿ ಬದುಕುತ್ತಿರುತ್ತಾನೆ. ಸಮಾಜದ ಆ ಪ್ರತಿಯೊಂದು ವಿಭಾಗಗಳೂ ತಮ್ಮದೇ ಆದ ಸಾಮಾನ್ಯ ಧರ್ಮವನ್ನು ಹೊಂದಿರುತ್ತವೆ. ಆ ವಿಭಾಗಗಳಲ್ಲಿ ಬದುಕುತ್ತಿರುವ ಮನುಷ್ಯನೂ ಸಹ ಆ ಸಾಮಾನ್ಯ ಧರ್ಮವನ್ನು ತನ್ನ ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಂಡು ಮುಂಬರಿಯಬೇಕು. ಇಷ್ಟಾದರೂ ಸಹ ಅದೇ ವಿಭಾಗದಲ್ಲಿ ಜೀವಿಸುವ ಎಲ್ಲಾ ವ್ಯಕ್ತಿಗಳ ಜೀವನ ಸ್ವರೂಪವು ಒಂದೇ ತೆರನಾಗಿರುವದಿಲ್ಲ. ಅವನ ಸ್ವಭಾವ, ಸಾಮರ್ಥ್ಯ, ಮನೋಧರ್ಮದ ಪ್ರಕಾರವೇ ಅವನು ಬೇರೊಬ್ಬರಿಗಿಂತ ಭಿನ್ನವಾದ ವ್ಯಕ್ತಿತ್ವವನ್ನು ಪ್ರದರ್ಶಿಸುತ್ತಿರುತ್ತಾನೆ. ಹಾಗಾಗಿ ಸಾಮಾಜಿಕ ಕಾನೂನುಗಳು ಈ ವೈವಿಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಒಂದೇ ರೀತಿಯ ಕಟ್ಟುನಿಟ್ಟಿನ ನಿಯಮಗಳ ಬದಲಿಗೆ, ಅಲ್ಲಿ ವೈವಿಧ್ಯತೆಗೆ ಅವಕಾಶವನ್ನು ಕಲ್ಪಿಸಿಕೊಡಬೇಕು.

ನಮ್ಮಲ್ಲಿ ಜ್ಞಾನ, ಶಕ್ತಿ, ಆಡಳಿತ ಮುಂತಾದ ಕುಶಲತೆಗಳನ್ನು ಹೊಂದಿರುವ ಪುರೋಹಿತ, ವಿದ್ವಾಂಸ, ಕವಿ, ಕಲಾವಿದ, ಆಡಳಿತಗಾರ, ಹೋರಾಟಗಾರ, ವ್ಯಾಪಾರಿ, ಕೃಷಿಕ, ಕಾರ್ಮಿಕ, ಸೇವಕ ಮುಂತಾದ ಉದ್ಯೋಗಗಳಿವೆ. ಆದರೆ, ಈ ಎಲ್ಲ ಉದ್ಯೋಗಗಳಿಗೆ ಒಂದೇ ರೀತಿಯ ತರಬೇತಿಯಿರುವದಿಲ್ಲ. ಅವರ ಕಾರ್ಯಗಳೂ ಏಕರೂಪದ್ದಾಗಿರುವದಿಲ್ಲ. ಹಾಗಾಗಿ ಎಲ್ಲರೂ ಒಂದೇ ರೀತಿಯ ಜೀವನ ವಿಧಾನವನ್ನು ಅಳವಡಿಸಿಕೊಳ್ಳಲು ಸಾಧ್ಯವಿಲ್ಲ. ಹೀಗಿರುವಾಗ ಎಲ್ಲರನ್ನೂ ಒಂದೇ ಕಾನೂನಿನಡಿಯಲ್ಲಿ ಬದುಕುವಂತೆ ಒತ್ತಾಯಿಸುವುದೂ ತರವಲ್ಲ. ಈ ಕಟ್ಟುನಿಟ್ಟಿನ ಕ್ರಮದಿಂದ ವ್ಯಕ್ತಿಗತ ಜೀವನದ ಸೀಮಿತವಾದ ಸತ್ಯವನ್ನು ಹಾಳುಗೆಡವುತ್ತದೆ. ಪ್ರತಿಯೋರ್ವರಿಗೂ ತನ್ನದೇ ಆದ ಸ್ವಭಾವ–ಆದರ್ಶಗಳಿವೆ. ಆ ನಿಟ್ಟಿನಲ್ಲಿ ಪ್ರತಿಯೋರ್ವರೂ ತಮ್ಮ ದೃಷ್ಟಿಯಲ್ಲಿ ಸ್ವಯಂಪೂರ್ಣರೇ ಆಗಿರುತ್ತಾರೆ. ಅದುವೇ ಮಾನವ ಧರ್ಮವ ತಿರುಳಾಗಿದೆ. ಜನರಿಗೆ ತಮ್ಮ ಇಷ್ಟ–ಬಯಕೆಗಳನ್ನು ಪೂರೈಸಿಕೊಳ್ಳಲು ಏಕರೂಪದ ಮಾರ್ಗವು ಲಭ್ಯವಿಲ್ಲ. ಹಾಗೆಂದು ಕೆಳ ವರ್ಗದಲ್ಲಿರುವ ವ್ಯಕ್ತಿಯ ಗರಿಷ್ಟ ಬಯಕೆಯನ್ನು ಕಾನೂನುಬಾಹಿರವೆಂದು ಪರಿಗಣಿಸುವುದು ಸೂಕ್ತವಲ್ಲ. ಹಾಗಾಗಿ ಮನುಷ್ಯರ ಪ್ರವೃತ್ತಿಯನ್ನು ಒಂದು ಚೌಕಟ್ಟಿನೊಳಗೆ ಇರಿಸಲು ನಿರ್ಬಂಧವನ್ನು ಹೇರುವ ಬದಲಿಗೆ, ಒಂದು ಸೂಕ್ತ ನಿರ್ದೇಶನ ಅಥವಾ ಮಾರ್ಗದರ್ಶನದ ಅವಶ್ಯಕತೆಯಿದೆ. ಈ ಮೂಲಕ ಮನುಷ್ಯರೊಳಗೆ ಅಡಕವಾಗಿರುವ ವ್ಯಕ್ತಿಗತ ಧರ್ಮಗಳು ಕಾನೂನಿನ ಪ್ರಕಾರ ಬೆಳೆದು ಸತ್ಯರೂಪದ ಧರ್ಮದೊಡನೆ ಸಮ್ಮಿಳಿತಗೊಳ್ಳುತ್ತವೆ. ಅದು ಒಬ್ಬರನ್ನು ಮತ್ತೊಬ್ಬರಿಂದ ಭಿನ್ನವಾಗಿರುವಂತೆ ತೋರಿಸಿದರೂ, ಆ ಔನ್ನತ್ಯದ ದೃಷ್ಟಿಯಲ್ಲಿ ಎಲ್ಲರನ್ನೂ ಒಂದೇ ಎಂಬ ಏಕರೂಪ ಭಾವನೆಯನ್ನು ಬೆಳೆಸುತ್ತದೆ. ಇದುವೇ ಈ ಮರ್ತ್ಯದ ಪ್ರತಿಯೋರ್ವರೂ ಅನುಸರಿಸಬೇಕಿರುವ ವಿಶಾಲವೂ–ಸಾರ್ವತ್ರಿಕವೂ ಆದ ಧರ್ಮವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/162–63**

## ಸಮ್ಮಿಲನದಲ್ಲಿ ವೈಶ್ವಿಕ ಧರ್ಮ

ಭಾರತೀಯ ಕಲ್ಪನೆಯಲ್ಲಿ ವೈಶ್ವಿಕ ಸತ್ಯದೊಡನೆ ಸಮ್ಮಿಲಿತಗೊಳ್ಳುವುದು ಎಂದರೆ, ಮಾನವನ ಮನ–ಆತ್ಮಗಳನ್ನು ಅಭಿವೃದ್ಧಿಪಡಿಸಿ ಪರಿಪೂರ್ಣತೆಯೆಡೆಗೆ ಆರೋಹಿಸುವ ನಿಯಮವೇ ಆಗಿದೆ. ಉನ್ನತವೂ–ವೈಶ್ವಿಕವೂ ಆದ ಶಕ್ತಿ–ಗುಣಗಳ

ಸಹಾಯ ಹಸ್ತದಿಂದ ಮಾನವನನ್ನು ಅತಿಮಾನವ ಹಂತದೆಡೆಗೆ ಕೊಂಡೊಯ್ಯಬಹುದು. ಭಾರತೀಯ ಕಲ್ಪನೆಯಲ್ಲಿ ಈ ಅಧಿರೋಹಣವನ್ನು ಉದಾತ್ತವೂ–ಆದರ್ಶಯುತಯೂ ಆದ ನಿಯಮವೆಂದು ಪರಿಗಣಿಸಲಾಗುತ್ತದೆ. ಇದು ಮಾನವನು ತನ್ನಲ್ಲಿ ತಾನೇ ಪ್ರಗತಿ ಹೊಂದುತ್ತ, ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುತ್ತ ಶಕ್ತಿ ಸಂಪನ್ನಗೊಂಡು ಈ ವೈಶ್ವಿಕ ಧರ್ಮವನ್ನು ಸ್ಪಂದಗೊಳ್ಳುತ್ತಾನೆ. ಈ ಆದರ್ಶಯುತವಾದ ಕಲ್ಪನೆಯು ನೈತಿಕ ಪರಿಕಲ್ಪನೆಯ ಅಂಶವಾಗಿಲ್ಲದಿದ್ದರೂ, ಇದು ನಮ್ಮನ್ನು ಸಾಧನೆಯೆಡೆಗೆ ಕೊಂಡೊಯ್ಯಬಹುದು. ಇದು ಮಾನವನನ್ನು ಬೌದ್ಧಿಕ, ಧಾರ್ಮಿಕ, ಸಾಮಾಜಿಕ ಸ್ತರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಲು ಸಹಕಾರಿಯಾಗಿದೆ. ಈ ರೀತಿಯ ವಿಕಸನದಿಂದ ನಮ್ಮ ಹೃದಯದಲ್ಲಿ ದಯೆ, ಕರುಣೆ, ಶಾಂತಿ, ಪರಹಿತ ಚಿಂತನೆ, ತಾಳ್ಮೆಗಳನ್ನು; ಗುಣದಲ್ಲಿ ಧೈರ್ಯ, ವೀರತ್ವ, ಶಕ್ತಿ, ನಿಷ್ಠೆ, ಸತ್ಯ, ಸಂಯಮ, ನ್ಯಾಯ, ನಂಬಿಕೆ, ವಿಧೇಯತೆ, ಆಡಳಿತಾತ್ಮಕವೂ–ನಿರ್ದೇಶನಯುಕ್ತವೂ ಆದ ಶಕ್ತಿ, ನಮ್ರತೆ, ಸ್ವಾತಂತ್ರ್ಯ, ಹೆಮ್ಮೆಗಳನ್ನು ಅನುಭಾವಿಸಿಬಹುದು; ಮನಸ್ಸಿನಲ್ಲಿ ಕಲಿಕೆಯ ಮೇಲಿನ ನಿಷ್ಠೆ, ಚಿಂತನಾತ್ಮಕವಾದ ಜ್ಞಾನ, ಕಾವ್ಯ, ಕಲೆ, ಸಾಮರ್ಥ್ಯ, ಕೌಶಲ್ಯಗಳನ್ನು ಕಾಣಬಹುದು; ಅಂತರಾತ್ಮದಲ್ಲಿ ಬಲವಾದ ಧಾರ್ಮಿಕ ಪ್ರಜ್ಞೆ, ಧರ್ಮನಿಷ್ಠತೆ, ಔನ್ನತ್ಯದೆಡೆಗಿನ ಅನ್ವೇಷಣಾ ಭಾವನೆ, ದಿವ್ಯತೆಯ ಮೇಲಿನ ಪ್ರೇಮ, ಆಧ್ಯಾತ್ಮಿಕ ಹಂಬಲಗಳನ್ನು ದೃಷ್ಟಿಸಬಹುದು; ಸಾಮಾಜಿಕ ಸಂಬಂಧಗಳಾದ ತಂದೆ, ಮಗ, ಪತಿ, ಸಹೋದರ, ಬಂಧುಗಳು, ಮಿತ್ರರು, ಆಡಳಿತಗಾರ, ಸಾಮಾನ್ಯ ಪ್ರಜೆ, ರಾಜ, ಪುರೋಹಿತ, ಋಷಿ, ಸೇವಕ ಮುಂತಾದ ಪ್ರಜ್ಞೆಗಳನ್ನು ಅರಿತುಕೊಳ್ಳಬಹುದು. ಆರ್ಯರ ಜೀವನ ಪದ್ಧತಿಯಲ್ಲಿ ಈ ಎಲ್ಲಾ ಆದರ್ಶಯುತವಾದ ಅಂಶಗಳು ಹಾಸುಹೊಕ್ಕಾಗಿದ್ದವು. ಎರಡು ಸಹಸ್ರಮಾನಗಳ ಅವಧಿಯಲ್ಲಿ ಜರುಗಿದ ಪ್ರಾಚೀನ ಭಾರತದ ಇತಿಹಾಸವನ್ನು ಗ್ರಂಥಸ್ಥಗೊಳಿಸಲಾಗಿದ್ದು, ಆ ವಿವರಣೆಗಳೆಲ್ಲ ಹಿಂದೂ ನೀತಿ ಶಾಸ್ತ್ರದ ಭದ್ರ ಬುನಾದಿಯಾಗಿವೆ. ಇದು ಆಗಿನ ನಾಗರೀಕತೆಯ ದೈಹಿಕ, ಬೌದ್ಧಿಕ, ಮಾನಸಿಕ, ಆತ್ಮಿಕ, ವೈಜ್ಞಾನಿಕ ಜೀವನದ ಕಷ್ಟ–ಸುಖಗಳನ್ನು, ಶಿಸ್ತು ಪರಿಶ್ರಮಗಳನ್ನು ವಿವರಿಸುತ್ತದೆ. ಈ ರೀತಿಯಲ್ಲಿ ವೈದಿಕ ನಾಗರೀಕತೆಯು ಉಳಿದೆಲ್ಲ ನಾಗರೀಕತೆಗಳಲ್ಲಿ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/164**

**ಧಾರ್ಮಿಕ–ನಿಯಮ ಮತ್ತದರ ಆಚರಣೆ**

ಈ ಕಾನೂನು ಮಾನವ ಜೀವನವನ್ನು ಮೃಣ್ಮಯದಿಂದ ಪಾರಾಗಿ ಆಧ್ಯಾತ್ಮಿಕವಾದ ಮತ್ತು ದೈವಿಕವಾದ ಔನ್ನತ್ಯದೆಡೆ ತೆಗೆದುಕೊಂಡು ಹೋಗುವ ಆರಂಭಿಕ ಚಲನೆಯಯಾಗಿದೆ. ಭಾರತೀಯ ಸಂಸ್ಕೃತಿಯು ಇಷ್ಟಾರ್ಥ, ಸ್ವಾರ್ಥ ಚಿಂತನೆ, ಬಯಕೆ ಮುಂತಾದ ಜಡ–ಪ್ರಾಣಮಯದ ಜೀವನೋದ್ದೇಶವನ್ನೂ ಮೀರಿ ಮಾನವನನ್ನು ಧರ್ಮದ ಮೂಲಕ ಉದಾತ್ತವೂ–ಆದರ್ಶಯುತವೂ ಆದ ಎತ್ತರಕ್ಕೆ ಏರಿಸುವ ಪ್ರಯತ್ನದಲ್ಲಿದೆ. ವ್ಯಕ್ತಿ ಸಮುದಾಯದಲ್ಲಿರುವ ಪ್ರತಿಯೋರ್ವರೂ ತಮ್ಮದೇ ಆದ ಬಯಕೆ–ಭಾವನೆಗಳನ್ನು ಹೊಂದಿರುತ್ತಾರೆ. ಹೀಗಿರುವಾಗ ಅವರನ್ನು ಅವರ ವ್ಯಕ್ತಿಗತ ಚಿಂತನೆಗಳಿಂದ ವೈಶ್ವಿಕ ನಿಯಮಗಳೆಡೆ ಅಧಿರೋಹಿಸುವ ಈ ಸಿದ್ಧಾಂತವು ವಿಶಿಷ್ಟವೂ–ವಂದನೀಯವೂ ಆಗಿದೆ. ಈ ನಿಯಮವು ಮರ್ತ್ಯವನ್ನು ಜಡ ಭೌತಿಕದಿಂದ ವಿಮೋಚನೆಗೊಳಿಸಿ, ಆಧ್ಯಾತ್ಮಿಕ, ಮುಕ್ತಿ ಅಥವಾ ಮೋಕ್ಷವೆಂದು ಕರೆಯಬಹುದಾದ ಪೂರ್ಣತೆಯೆಡೆಗೆ ಕಳಿಸುತ್ತದೆ. ಈ ನಿಯಮವೇ ಮರ್ತ್ಯ ಜೀವನದ ಆರಂಭ ಅಥವಾ ಅಂತ್ಯವಲ್ಲ. ಈ ಕ್ಷೇತ್ರವನ್ನೂ ಮೀರಿದ ಪ್ರಜ್ಞಾ ವಲಯವೊಂದಿದೆ. ಮಾನವನು ಆ ಎತ್ತರವನ್ನು ಏರಿದ ತಕ್ಷಣ, ಅವನ ಆತ್ಮವು ಮುಕ್ತತ್ವದ ಪರಿಧಿಗೆ ತಲುಪುತ್ತದೆ. ಭಾರತೀಯ ಸಂಸ್ಕೃತಿಯು ಮನುಷ್ಯನನ್ನು ಮರಣಕ್ಕೆ ಮಾತ್ರ ಸೀಮಿತವಾಗಿರುವ ಮೃಣ್ಮಯದಿಂದ ಸ್ವಾತಂತ್ರ್ಯದೆಡೆಗೆ, ದಿವ್ಯತೆಯೆಡೆಗೆ, ಅಮರತ್ವದೆಡೆಗೆ ಕೊಂಡೊಯ್ಯುವ ಗುರಿಯನ್ನು ತನ್ನ ಅಂತಃಚಕ್ಷುವಿನಿಂದ ನಡೆಸುತ್ತಿದೆ. ಅವನ ದಾರಿ ಬೆಳಕಿನಲ್ಲಿ ನಡೆದು, ಈ ಮರ್ತ್ಯವು ಅಂತಿಮ ಪರಮೋಚ್ಚ ಔನ್ನತ್ಯದ ಸ್ತರವನ್ನು ತಲುಪಬೇಕಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/162–65 – ಶ್ರೀ ಅರವಿಂದರು**

# ಶ್ರೀ ಅರವಿಂದೋಪನಿಷತ್ತು

**– ಅನು: ಪುಟ್ಟು ಕುಲಕರ್ಣಿ**

ದಿವ್ಯ ಮಾತೆಯ ಕೃಪೆಯಿಂದ ಸೃಷ್ಟಿಗೊಳ್ಳುವ ಸರ್ವಸ್ವವೂ ನಿಯತಿ ನಿಗದಿತವಾದ ರೂಪವನ್ನು ತಾಳುತ್ತದೆ. ಇದಕ್ಕೆ ಕಾರಣಳಾಗುವ ಜಗನ್ಮಾತೆಯ ರಕ್ಷಣೆ –ಪೋಷಣೆಯಿಂದಾಗಿ ನಿರಾಕಾರವಾಗಿರುವದೆಲ್ಲವೂ ಸ್ಥೂಲ ಶ್ರೇಣಿಯಲ್ಲಿ ನಿಗದಿಗೊಳ್ಳುತ್ತದೆ. ಯಾವುದು ದರ್ಶನದಲ್ಲಿ ಮಾತ್ರ ಕಾಣ್ಕೆಯ ಸ್ವರೂಪವಾಗಿತ್ತೋ, ಅದಕ್ಕೇ ಈಗ ಸ್ಪಷ್ಟತೆ ಲಭ್ಯವಾಗುತ್ತದೆ. ಇಂತಹ ರೂಪಾಂತರಣದ ಹಂತ ಬಂದರೂ ಆಂತರ್ಯ ಮಾತ್ರ ಕಿಂಚಿತ್ತೂ ಬದಲಾಗುವದಿಲ್ಲ. ಈ ವಿನ್ಯಾಸದ ಮೂಲಕವೇ ಅಸತ್ ಆಗಿದ್ದುದು–ನಿರಾಕಾರವಾಗಿದ್ದುದು–ಪಂಚಸಾದಾಖ್ಯದಿಂದ ಅಷ್ಟ ತನುಗಳ ಸ್ವರೂಪದಲ್ಲಿ ಪ್ರಕಟಗೊಂಡರೂ, ಅಂತರಂಗ ಮಾತ್ರ ಬ್ರಹ್ಮಾಂಡದಾತ್ಮದಂತೆಯೇ ಸ್ಪಂದಗೊಳ್ಳುತ್ತದೆ. ಇದನ್ನೇ ನಾ ಸತ್– ನಾ ಅಸತ್ ಎಂದು ಜಾಗ್ರತ ಚೇತನವು ದರ್ಶಿಸಿ ಅಭಿವ್ಯಕ್ತಗೊಳಿಸಿದೆ.

ನಿರ್ಗುಣವಾಗಿದ್ದ ಬ್ರಹ್ಮವು ಸಗುಣ ರೂಹು ಪಡೆದುಕೊಂಡಾಗ, ಅದು ಮಿಥ್ಯವಾಗಿರುವದಿಲ್ಲ ಎನ್ನುವದನ್ನು, ಈ ಕರಣಗಳ ಸಂಘವು ಚತುರಂಗದಲ್ಲಿ ನೆಲೆಸಿರುವ ಪರಾಶಕ್ತಿಯ ನಿತ್ಯ ನಿರಂತತೆಯು ಈ ರೂಪಾಂತರಣಕ್ಕೂ ಒಂದು ಅಸ್ತಿತ್ವವವನ್ನು ಮತ್ತು ನಿಗದಿತವಾದ ಅವಧಿಯನ್ನು ನಿಯತಿಯಂತೆಯೇ ವಿಧಿಸುತ್ತದೆ. ಇಲ್ಲಿ ಪಂಚ–ಪ್ರಾಣಗಳೂ ಸಹಿತ (ಪ್ರಾಣೋ ಪಾನ ವ್ಯಾನೋದಾನ ಸಮಾನ) ನಿರಾಕಾರವಾಗಿದ್ದರೂ, ಅವುಗಳ ಅಸ್ತಿತ್ವವನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಆಧುನಿಕ ವಿಜ್ಞಾನವೂ ಸಹಿತ ಈ ನಿರಾಕಾರವಾಗಿರುವ 'ಪ್ರಾಣ' (ವಾಯು)ಗಳನ್ನು ನಿಗದಿರವಾದ ಉಷ್ಣಾಂಶ/ಶೀತಲೀಕರಣದ ಮೂಲಕ ದ್ರವ್ಯದ ಸ್ವರೂಪಕ್ಕೆ ರೂಪಾಂತರಣಗೊಳಿಸಿ, ಅವುಗಳನ್ನು ದರ್ಶಿಸಲು ಸಾಧ್ಯವಾಗಿಸಿದೆ. ಇದೇ ರೀತಿಯ ಒಂದು ವ್ಯವಸ್ಥೆಯು ಅವಕಾಶದಲ್ಲಿ ಸೃಷ್ಟಿಗೊಳ್ಳಲು ವಿಶ್ವಮಾತೆ ಸಹಕರಿಸುತ್ತಾಳೆ. ಹೀಗಾಗಿ ಈ ಪಂಚ ಪ್ರಾಣಗಳ ಆಧಾರಭೂತವಾಗಿ. ಅವುಗಳಿಗೊಂದು ನಿಗದಿತ ತಾಳ–ಲಯಗಳನ್ನು ರೂಪಿಸುವ ಸಲುವಾಗಿ ಹಿಮ್ಮೇಳವನ್ನು ಒದಗಿಸುತ್ತಾಳೆ. ಈ ಪಂಚ ಪ್ರಾಣಗಳ ದರ್ಶನಕ್ಕೆ ಲಭ್ಯವಾಗುವದೇ – ನೆಲ, ಮುಗಿಲು, ಜಲ, ಅನಿಲ ಮತ್ತು ಅಗ್ನಿಗಳ ಸತ್(ಸತ್ಯತ್ವವನ್ನು) ಕಾಣುತ್ತೇವೆ. ಈ ಸಂಭೂತ ಶಕ್ತಿಯೇ ಜಗತ್ತಿನ ಅಸ್ತಿತ್ವಕ್ಕೆ ತಳಹದಿಯಾಗುತ್ತದೆ. ಆಕಾಶದಲ್ಲಿರುವ

ಜಲ ತತ್ತ್ವ (ಅರ್ಣವ), ವಾಯು ತತ್ತ್ವ, ಅವಕಾಶದಲ್ಲಿ ಸೃಷ್ಟಿಗೊಂಡ ಆಕಾಶ, ಪ್ಲಾಜ್ಮಾ ರೂಪದಲ್ಲಿರುವ ಅಗ್ನಿ ಮತ್ತು ಇವೆಲ್ಲವುಗಳನ್ನು ಅನುಭಾವದಲ್ಲಿ ಸ್ಪಂದಿಸಲು ಆಧಾರವಾಗಿರುವ ಭೂಮಿಗಳು ಮಿಥ್ಯೆ ಎನ್ನಲು ಬರುವದಿಲ್ಲ. ಇದು ಸತ್–ಅಸತ್‌ನ ಆಂತರ್ಯವಾಗಿದೆ. ಇದು ಬ್ರಹ್ಮಾಂಡದ ಇಚ್ಛೆಯೂ ಆಗಿದೆ; ಅದೇ ಶಕ್ತಿ ಸ್ವರೂಪದಲ್ಲಿ ಸ್ವಯಂಸೃಷ್ಟಿಗೊಳ್ಳುತ್ತಿರುವದರಿಂದ 'ಇಚ್ಛಾಶಕ್ತಿ'ಯೂ ಆಗಿದೆ.

ಹಾಗಾದರೆ, ಈ ರೀತಿಯಲ್ಲಿ ವೈವಿಧ್ಯಮಯವಾಗಿ, ವರ್ಣಗಳಿಂದ ಕಂಗೊಳಿಸುತ್ತಾ, ತನ್ನದೇ ನಿಯಮಿತವಾದ ಸೂತ್ರ ಚಲನೆಯಲ್ಲಿ, ನಿರಂತರವಾಗಿ ಚಲಿಸುತ್ತ 'ಕಾಲ'ಕ್ಕೂ ಒಂದು ಸಮಯದ ಆಯಾಮವನ್ನು ಸ್ವಯಂ ಎನ್ನುವಂತೆ ರೂಪಿಸಿಕೊಂಡು ಅಸ್ತಿತ್ವದಲ್ಲಿರುವೀ ಜಗತ್ತು 'ಮಿಥ್ಯ'ವಾಗಿರಲು ಹೇಗೆ ಸಾಧ್ಯ? ಆಂತರ್ಯದಲ್ಲಿ ಚೇತನವನ್ನು ಒಳಗೊಂಡೇ ಆವರಣವನ್ನು ನಿರ್ಮಿಸಿಕೊಂಡಿರುವ ಸ್ಥಿತಿಯು 'ಬ್ರಹ್ಮ'ನ ಸಗುಣ ತತ್ತ್ವವನ್ನೇ ಅಭಿವ್ಯಕ್ತಿಸುತ್ತಿರುವದರಿಂದ, ಮತ್ತು ನಿಗದಿತವಾದ ಈ ಆವರಣದ ಸ್ವರೂಪದಲ್ಲಿ ಅನುಭವವನ್ನು ಪಡೆದುಕೊಳ್ಳುತ್ತಾ, ತನ್ನಲ್ಲೆ ತಾನು ತನ್ನನ್ನು ಸಾಕ್ಷಾತ್ಕರಿಸಿಕೊಳ್ಳುತ್ತ ಮತ್ತೆ ಬ್ರಹ್ಮವೇ(ಋತವೇ) ಆಗಿ 'ಏಕ'ವಾಗುವದು ಈ ಬ್ರಹ್ಮಾಂಡದ ಚಿರಂತನ ಸ್ಪಂದನವಾಗಿದೆ.

ಜಡದ ಬದುಕು ಎಂದು ತಿರಸ್ಕಾರ ಮಾಡಿ ನಿರಾಕರಿಸುವದರ ಬದಲು, ಏಕೆ ಈ ಜಡ ಸ್ವರೂಪ ಪ್ರಾಪ್ತಿಯಾಯಿತು? ಯಾವ ಉದ್ದೇಶಕ್ಕಾಗಿ? ವೈಶ್ವಿಕ ಸ್ವರೂಪದ ಭೂಮ ಸ್ವರೂಪವನ್ನು, ಅದರ ಸುವ್ಯಾಪ್ತತೆಯನ್ನು ಮಾನವ ಕುಲವು ಅರಿತುಕೊಳ್ಳಲು ಇರುವ ಪ್ರಕ್ರಿಯೆಯ ಹಂತದಲ್ಲಿ ಈ ಜಡತ್ವವನ್ನು ಬ್ರಹ್ಮವು ಸ್ವಯಂ ಆರೋಪಿಸಿಕೊಂಡು 'ಸತ್ಯ'ದ ಸ್ವರೂಪದಲ್ಲಿ ಅವತರಿಸುವದೆ? ಅಥವಾ, ಜಡದಿಂದ ಮತ್ತೆ ಚೇತನದ ಹಂತದಲ್ಲಿ ಏಕಿರ್ಭವಿಸುವಾಗ, ಆ ಪರಮಾನುಭೂತಿಯನ್ನು ಸಹಿಸಿಕೊಳ್ಳುವ ಆತ್ಮಶಕ್ತಿ ಮತ್ತು ಸಾಮರ್ಥ್ಯವನ್ನು 'ಜೀವಾತ್ಮವು' ಪಡೆದುಕೊಳ್ಳಲಿ ಎಂದೇ, ಈ ತಾತ್ಕಾಲಿಕವಾಗಿ ಇರುವ ಅಸ್ತಿತ್ವದ ಮೂಲಕ 'ಸತ್ಯ'ವು ಪ್ರಕಟಣಗೊಳ್ಳುವದೇ? ಈ ಜಿಜ್ಞಾಸೆಯನ್ನು, ಮಾನವನ ದೇಹದ ಸ್ವರೂಪದಲ್ಲಿಯೇ ನಿರ್ಮಿತಿಗೊಂಡಿರುವ ಅನ್ನಮಯ, ಪ್ರಾಣಮಯ ಮತ್ತು ಮನೋಮಯದ ಕೋಶಗಳಲ್ಲಿ ಸಾಧ್ಯವಾಗುವದಿಲ್ಲ. ಈ ಮೂರೂ ಹಂತಗಳಾಚೆ ಇರುವ 'ವಿಜ್ಞಾನಮಯ ಕೋಶ'ದ ಸ್ಪಂದನದಲ್ಲಿ ಮಾತ್ರ ಈ ವೈಶ್ವಿಕ ಗೂಢತೆಯು ತನ್ನ ಆಂತರ್ಯವನ್ನು ಕಾಣಲು ಸಾಧ್ಯವಾಗುತ್ತದೆ.

ವಿಜ್ಞಾನಮಯ ಕೋಶದ ಹಂತದಲ್ಲಿ, ಈ ಜಡತ್ವಕ್ಕೂ ಮತ್ತು ತುರೀಯಾತೀತಿ–ವಾಗಿರುವ ಚಿರಂತನವಾಗಿರುವ ಪರಾಶಕ್ತಿಯ ಕೃಪೆಯೇ ಆಗಿರುವ ಸತ್, ಸದಾ

ತನ್ನ ಕಿರು ಬೆರಳನ್ನು ವಿಜ್ಞಾನಮಯ ಕೋಶದ ಮೂಲಕವೇ 'ಮಾನವನ ಊರ್ಧ್ವ ಯಾನಕ್ಕೆ' ಸಹಾಯಕವಾಗಿ ಒದಗಿಸುತ್ತದೆ. ಕೇವಲ ಲೌಕಿಕದ 'ಸಾಮ್ರಾಜ್ಯಂ' ಹಂತದಲ್ಲಿ ಸಿಲುಕಿ ಜೀವಿಸುವ ಸಲುವಾಗಿ ಮಾನವನು ಅವತರಿಸಿಲ್ಲ. ಸಾಮ್ರಾಜ್ಯಂ ಹಂತದಿಂದ ವೈರಾಜ್ಯಂ ತಾಣಕ್ಕೆ ಆರೋಹಣಗೈವುದೇ ಮಾನವನ ಗಮ್ಯವಾಗಿದೆ. ಅದಕ್ಕಾಗಿ ವಿಜ್ಞಾನವನ್ನು ಕೇವಲ ಸದ್ಯದ ಲೌಕಿಕ ಬದುಕಿನಲ್ಲಿ ಕಾಣುತ್ತಿರುವ ವಿಜ್ಞಾನದ ಹಂತಕ್ಕಿಂತ, ಬೇರೆಯದೇ ಆದ 'ವಿಜ್ಞಾನ ಘನ'ದ ಸ್ವರೂಪದಲ್ಲಿ ಸ್ಪಂದಿಬೇಕಿದೆ.

ವಿಜ್ಞಾನದ ಹಂತದಲ್ಲಿ ಲಭ್ಯಗೊಳ್ಳುತ್ತಿರುವದೆಲ್ಲವೂ 'ಸತ್ಯ'ವಾಗಿದ್ದು (ಮಿಥ್ಯೆಯಲ್ಲದೇ ಇರುವದು) ಅದರ ಜಡ ಸ್ವರೂಪದ ಮೂಲಕವೇ ಸಗುಣತ್ವವನ್ನು ಹಾಗೂ ಅದರ ಕಾಲಮಿತಿಯನ್ನು ಅರಿತುಕೊಳ್ಳಬೇಕಿದೆ. ಋತವಾಗಲೀ, ಸತ್ ಆಗಲಿ ನಿರ್ಗುಣ ಬ್ರಹ್ಮನನ್ನು ಸ್ಪಂದಗೊಳಿಸಿದರೂ, ಆ ಸಗುಣ ತತ್ತ್ವದ ಲೌಕಿಕದ ಜಡದ ಸ್ವರೂಪದಲ್ಲಿರುವ ಅಂಶಗಳ ಮೂಲಕವೇ ಆರೋಹಣಕ್ಕೆ ತೊಡಗಿಕೊಳ್ಳ–ಬೇಕಾಗುತ್ತದೆ. ಪಾರಲೌಕಿಕದ ಜ್ಞಾನವೆಂದು ವರ್ಗೀಕರಿಸಲ್ಪಟ್ಟಿದ್ದರೂ, ಇದು ನಮ್ಮ ದೇಹದ ಸುತ್ತಲೂ ಇರುವ ಪ್ರಭಾವಲಯ ಮೂಲಕವೇ ಲೌಕಿಕಾನುಭವಗಳಿಗೆ ಸೂಕ್ತ ಪಥವನ್ನು ನಿರ್ಮಿಸುತ್ತದೆ. ಈ ಪ್ರಭಾ ವಲಯವನ್ನು 'ಕೀರ್ಲಿಯನ್ ಫೊಟೋಗ್ರಾಫಿ' ಮೂಲಕ ಕಾಣಬಹುದು. ಈ ಹಂತದ 'ವಿಜ್ಞಾನಮಯ ಕೋಶ'ದೊಡನೆ ಮತ್ತು ಭೌತಿಕ ಅಸ್ತಿತ್ವದಲ್ಲಿ ಮಿಥ್ಯೆ ಅಲ್ಲ ಎನ್ನುವದನ್ನು ಪುರಾವಿಸುವ 'ಸತ್ಯ'ವಾಗಿರುವ ಜಗತ್ತಿನೊಡನೆ ನಾವು ಸಂವಹನವನ್ನು ಸಾಧಿಸಲು ಸಾಧ್ಯವಿದೆ. ಋತದ ಆಯಾಮವೇ ಆಗಿರುವ ಸತ್ಯವು ರೂಪು(ರೂಹು)ಗಳಲ್ಲಿ ಪ್ರಕಟಣಗೊಳ್ಳುತ್ತದೆ; ಸಂಹೂತಿಯಲ್ಲಿ ವರ್ಣವೈವಿಧ್ಯಮಯ ಹಂತಗಳು ರೂಪುಗೊಳ್ಳುತ್ತವೆ; ಧ್ವನಿಯ ಮೂಲಕ ನಾದದ ಅನುರಣನವಾಗುತ್ತದೆ; ಮಾನವನ ದೃಷ್ಟಿಗೆ ಗೋಚರವಾಗುತ್ತಿರುವ ಸೌರವ್ಯೂಹದ ಸ್ವರೂಪದಲ್ಲಿ ಸೂರ್ಯನೇ ಆಧಾರಭೂತವಾಗಿ, ಅವನ ಅಣುಅಣುವೂ ತೇಜ ಪುಂಜವಾಗಿ ಶಕಲವಾಗಿ ಮಂಡಲವನ್ನೆಲ್ಲ ಆವರಿಸಿದೆ. ಪಾರದರ್ಶಕವಾಗಿದ್ದುದು ಆಕಾರ ಹೊಂದಿದ್ದರೂ 'ಕಾಣದೇ' ಇರುವದನ್ನು ಮಿಥ್ಯೆ ಎನ್ನಲು ಸಾಧ್ಯವಿಲ್ಲ. 'ಅದು ಇದೆ; ಅದು ಇದೇ!' ಎಂದು ಸತ್–ಸ್ವರೂಪದಲ್ಲಿ ಅನುಭಾವಗೊಳ್ಳುವ ಮಾನವನ ಪ್ರಜ್ಞೆ, ತನ್ನ ಮೂಲಚೇತನದತ್ತ ಸಾಗುತ್ತಿದ್ದಂತೆಯೇ, ಈ ಅಸತ್– ಎನ್ನುವದು ಕೇವಲ ನಮ್ಮ ತಾತ್ಕಾಲಿಕ ಗ್ರಹಿಕೆಯಾಗಿದೆ ಎನ್ನುವದನ್ನು ಮನವರಿಕೆ ಮಾಡಿಕೊಳ್ಳುತ್ತದೆ. ಸತ್ ಸ್ವರೂಪದ ಸೂಕ್ಷ್ಮಾತಿಸೂಕ್ಷ್ಮವಾದ ಈ ಶಕಲಕ್ಕೂ ಒಂದು ರೂಪು ಇದೆ ಎಂದಾದಲ್ಲಿ, ಅದರ ಮೂಲಕವೇ ವಿಕಾಸದ ಅಲೆಯೂ ಔನ್ನತ್ಯದ ನೆಲೆಗೆ ಆರೋಹಗೊಳ್ಳುತ್ತಿದೆ ಎನ್ನುವದು ದೃಷ್ಟಾಂತಗೊಳ್ಳುತ್ತದೆ. ಈ ದೃಷ್ಟಾಂತವೇ

'ಸತ್'ಆಗಿದ್ದು, ಅದು ಮಾನವನ ಭೌತಿಕ ಸ್ವರೂಪದ ಮೃಣ್ಮಯದ ಹಂತದಿಂದ, ಮುಕ್ತನಾಗಿ ಅಥವಾ ಪರಿಪೂರ್ಣನಾಗಿ, ಪರಿಪಕ್ವಗೊಳ್ಳುವ ಹಂತವನ್ನು ತಲುಪುತ್ತಾನೆ. ಇದೇ ಮಾನವನ ಚೇತನವು ಅತಿ ಚೇತನವಾಗಿ, ವೈಶ್ವಿಕ ಸಂರಚನೆಯ ಸರ್ವ ಆಯಾಮಗಳನ್ನೂ ಸ್ಪಂದಗೊಳ್ಳುತ್ತಾನೆ.

ಸತ್–ಅಸತ್ ಸ್ವರೂಪವಾಗಿರುವ ಸರ್ವಸ್ವವೆಲ್ಲವೂ ಬ್ರಹ್ಮವೇ ಆಗಿರುವದರಿಂದ, ಅವನು ಏಕಮೇವಾದ್ವಿತೀಯನಾಗಿದ್ದಾನೆ. ಈ ಸರ್ವ–ಸ್ವರೂಪಗಳೂ ಆ ಏಕದ ಆಯಾಮಗಳಾಗಿವೆ. ಆಯಾ ಸ್ವರೂಪಕ್ಕೆ ನಿಯತಿ ನಿಗದಿಸಿದ ವಲಯ, ವರ್ಣ, ಸ್ವಯಂ–ತೇಜವಾಗಿ ಪ್ರಕಟಣಗೊಳ್ಳುವ ಆಂತರ್ಯ, ಆಂತರ್ಯದಲ್ಲಿ ಸ್ವಯಂತೇಜವನ್ನು ಹೊಂದಿದ್ದರೂ, ಬಾಹ್ಯದಲ್ಲಿ ಅಪಾರದರ್ಶಕದ ಮೃಣ್ಮಯದ ಕವಚವನ್ನು ಹೊಂದಿ, ಆ ಸ್ವಯಂಪೂರ್ಣವಾಗಿ ತೇಜಗೊಳ್ಳುತ್ತಿರುವ ಸ್ವರೂಪವನ್ನು ಸಮೀಪಿಸಲು ಸದಾ ಪರಿಭ್ರಮಿಸುತ್ತ ಯಾನಗೊಳ್ಳುತ್ತಿರುವ ಹಂತ, ಇದಕ್ಕಾಗಿ ನಿಗದಿಯಾದ ಕಾಲ ಎಲ್ಲವೂ ಸತ್ ಜೊತೆಗೆ ಅಸತ್ ಸ್ವರೂಪವೇ ಆಗಿದೆ. ಸತ್ ಮತ್ತು ಅಸತ್ ಸ್ವರೂಪವನ್ನು ಪಡೆದುಕೊಳ್ಳುವ ಮುನ್ನ ಇರುವ ಅಸ್ತಿತ್ವವೂ 'ಸತ್–ಅಸತ್–ಅತೀತಂ' ಆಗಿದೆ. ಹೀಗಾಗಿ ಇಲ್ಲಿ ಮಿಥ್ಯೆಯಾಗಲಿ ಅಥವಾ ಮಾಯೆಯಾಗಲಿ ಇರಲು ಸಾಧ್ಯವಿಲ್ಲ; ಅದು ಇರಲು ಕಿಂಚಿತ್ತೂ ಆಸ್ಪದವೇ ಇಲ್ಲ.

ಇದು ತ್ರಿಕಾಲಾತೀತವಾಗಿದೆ; ತ್ರಿಕಾಲದಲ್ಲಿಯೂ ಅಸ್ತಿತ್ವವಿರುತ್ತದೆ, ಬ್ರಹ್ಮಾಂಡ ಸೃಷ್ಟಿಯ ಮೂಲ ಧ್ಯೇಯ, ಅದರ ಸುವ್ಯಾಪ್ತ ವೈರಾಜ್ಯಮಯದ ವಿಶಾಲತೆ, ಭೂಮಭಾವ, ಸ್ವಯಂಪ್ರಕಾಶದ ನಿತ್ಯ ನಿರಂತರತೆಯ ಆ ಘನ ಸ್ವರೂಪವನ್ನು, ಮಾನವನ ಮನಸ್ಸು ಅರಿಯಲಾರದು. ಆದರೆ ಪಂಚ ಭೂತಗಳ ಪಂಜರದಲ್ಲಿ ಬಂಧಿಯಾದ ಈ ಮನಸ್ಸಿನಲ್ಲಿಯೇ, ಈ ಬಂಧನದಿಂದ ಮುಕ್ತವಾಗಿ, ಅನಂತಾನಂತ ವ್ಯೋಮದಲ್ಲಿ ಯಾನ ನಡೆಸುವ ಸಾಮರ್ಥ್ಯವು ಬೀಜ ರೂಪದಲ್ಲಿದೆ. ಇದು ಬೆಳೆದು ವೃಕ್ಷವಾದಾಗ, ಈ ಮನಸ್ಸಿನ ಸ್ವರೂಪವು ಬುದ್ಧಿಯಾಗಿ, ಪ್ರಜ್ಞೆಯಾಗಿ, ಸಂಪ್ರಜ್ಞೆಯಾಗಿ, ಜ್ಞಾನವಾಗಿ, ವಿಜ್ಞಾನವಾಗಿ, ಸಂಜ್ಞಾನವಾಗಿ ಮತ್ತೆ ಪ್ರಜ್ಞಾನವಾಗಿ ಚೇತನದ ಸ್ವರೂಪದಲ್ಲಿ, ಪರಿಪೂರ್ಣ ಆಯಾಮವನ್ನು ಪ್ರಾಪ್ತಿಗೊಳಿಸಿಕೊಂಡಾಗ, ಆಗ ಕಾಲಾತೀತವಾದ, ತ್ರಿಕಾಲದಲ್ಲಿಯೂ ಅಸ್ತಿತ್ವದಲ್ಲಿರುವ 'ಚೈತನ್ಯವು' ತನ್ನ ಸತ್–ಸ್ವರೂಪವನ್ನು ಪ್ರಕಟಗೊಳಿಸಿಕೊಳ್ಳುವ ಮೂಲಕ ಏಕೈಕವಾಗಿರುವ ಬ್ರಹ್ಮನನ್ನು ದೃಷ್ಟಿಸಲು ಸಹಕಾರಿಯಾಗುತ್ತದೆ.

ಚೇತನ ಎನ್ನುವದು ಬ್ರಹ್ಮಾಂಡದ ಆಧಾರವಾಗಿದೆ. ಅದರ ನಿತ್ಯತ್ವ ಮತ್ತು ಶಾಶ್ವತದ ಆಯಾಮಗಳು ಅದರ ಸಂರಚನೆಗಳಾಗಿವೆ. ಈ ಶಾಶ್ವತ, ನಿತ್ಯತ್ವ ಮತ್ತು

ಚೇತನದ ಸ್ವರೂಪವೇ ಜಗತ್ತಾಗಿ ಗೋಚರಕ್ಕೆ ಬರುತ್ತದೆ. ಇವೆಲ್ಲವೂ ನಿರಾಕಾರವಾಗಿದ್ದಾಗ, ಅದನ್ನೇ 'ನಿರ್ಗುಣ ಬ್ರಹ್ಮ' ಎಂದು ಮತ್ತು ಜಗತ್ತಿನ ಸ್ವರೂಪದಲ್ಲಿ ಸಾಕಾರಗೊಂಡಾಗ 'ಸಗುಣ ಬ್ರಹ್ಮ' ಎಂದು ಆಧ್ಯಾತ್ಮದ ಅಧ್ಯಯನದಲ್ಲಿ, ಮಾನವನು ಈ ರಹಸ್ಯದ ಮೂಲವನ್ನು ಅರಸಲು ಪ್ರಯತ್ನಿಸಿದಾಗ ಲಭ್ಯವಾದ ಅನುಭವವಗಳೇ 'ಜ್ಞಾನ'ದ ಮೆಟ್ಟಿಲುಗಳಾಗುತ್ತ ನೆಲೆಗೊಂಡಿವೆ.

ಈ ಸಗುಣ ಮತ್ತು ನಿರ್ಗುಣ ಸ್ವರೂಪವನ್ನು–ಸದಸತ್–ಆಂತರ್ಯವನ್ನು ಮತ್ತು ಅಭಿವ್ಯಕ್ತಗೊಂಡು ದೃಷ್ಟಿಗೂ ಲಭ್ಯವಾಗುತ್ತಿರುವ 'ಈ ಜಗತ್ತನ್ನು' ಶ್ರೀಅರವಿಂದರು ಮಂತ್ರ ಸ್ವರೂಪದಲ್ಲಿ ಜೊತೆಗೆ ಅದರ ಸಂರಚನೆಯ ಹಂತ ಹಂತಗಳನ್ನೂ ಸಹಿತ ವಿವರವಾಗಿ ತಿಳಿಸುತ್ತ, ಅಭಿವ್ಯಕ್ತಿಸಿರುವ 'ಸಾವಿತ್ರಿ'ಯಲ್ಲಿ, ಈ 'ವಿಕಾಸದ ಆಯಾಮ'ವನ್ನು ವೇದ–ಉಪನಿಷತ್ತುಗಳನ್ನೇ ಆಧರಿಸಿಕೊಂಡು ರೂಪಗೊಂಡಿರುವ ಮಾನವನ ಚೇತನವು, ಆರೋಹಣದಲ್ಲಿ 'ಅತಿಮಾನವ' ಹಂತವನ್ನು ತಲುಪಿ, ವೈಶ್ವಿಕ (ಬ್ರಹ್ಮಾಂಡದ) ಸ್ಪಂದವನ್ನು ಮಾನವನೂ ಲಭ್ಯಗೊಳಿಸಿಕೊಳ್ಳುತ್ತಾನೆ ಎನ್ನುವದನ್ನು, ಸಾವಿತ್ರಿಯಲ್ಲಿ ಹೇಳಿದ್ದಾರೆ.

ಸಾವಿತ್ರಿಯ ಈ ಸಾಲುಗಳಲ್ಲಿ, ಶ್ರೀ ಅರವಿಂದರ ವಿಕಾಸವಾದದ ಆಂತರ್ಯವನ್ನು ಹಾಗು ಶ್ರೀ ಅರವಿಂದೋಪನಿಷತ್ತಿನ ಸೂತ್ರ ಸ್ವರೂಪವನ್ನೂ ತಿಳಿದುಕೊಳ್ಳಬಹುದು.

ಆಧಾರವಹುದು ಮೃಣ್ಮಯವು ಸರ್ವ ಸರ್ವಾತಿ ಜನ್ಮ ಸ್ಥಳವು
ಚೈತನ್ಯವೀಗ ಸುಸ್ಪಷ್ಟಭಾವದಲಿ ಪ್ರಕಟಗೊಳಲು ಗೃಹವು,
ಈ ಅಂಗ–ಸಂಘ ಈ ಜೀವರಂಗದಲ್ಲೀಗ ಎಂದಿಗೂನು
ಇನ್ನುಳಿಯದೀಗ ಮತ್ತೇನು ಶೇಷ ತಾ ಗುಪ್ತವಾಗಿ ಇನ್ನು

**(ಶ್ರೀ ಅರವಿಂದರ 'ಸಾವಿತ್ರಿ'; ದಳ 11 ಶಾಶ್ವತದ ಬೆಳಗು, ಪುಟ 707)**

ಆಗಮಿಸಲಿರುವ ಅಭಿನವದ ಭವ್ಯ–ಜೀವನದ ಛಂದಕಿಂದು
ಇದೂ ಸಹಿತದಲಿ ತಾನಿರುವದಲ್ಲಿ ಅಸ್ತಿತ್ವಗೊಳಿಸಿಕೊಂಡು;
ಸಂಘಟಿತ–ಪಂಚ–ಭೂತಗಳ–ಬಂಧ ಅನುಬಂಧ–ಕಾಯವಿಂದು
ಈ ಭೂಮ–ದಿವ್ಯದತಿಚೇತ–ಸತ್ಯಕೀಗಿದೋ ರೂಪವೊಂದು

ಮೂಲ–ಪ್ರಕೃತಿಯಾ ಮಾಬಲದ ಗಡಣದಾ ಜನ್ಮ ತಾಣವೀಗ
ಮೃಣ್ಮಯದ ತಳದಿ ಅನಭಿಜ್ಞವಿರುವ ಆಧಾರವನ್ನು ಈಗ

ಈಗಿದೋ ಋತದ–ಉಪನಿವೇಶದೊಲು, ಅದನು ರೂಪಣೆಯಗೊಳಿಸಿ
ಪಾರದರ್ಶಕದ ಪರಿಶುಭ್ರ–ತೋಷ–ಪೋಷಾಕು ನಿಗದಿಗೊಳಿಸಿ

ಅಜ್ಞಾತವನ್ನು ಜ್ಞಾತವಾಗಿಸುತ ನಿಲುವಂಗಿ ದೃಷ್ಟಿಗಿರಿಸಿ
ಅದರ ಮೂಲಕವೇ ಹೊಳೆಹೊಳೆವ ತೇಜ–ಕಾಂತಿಯಲಿ ಬೆಳಕು ಸೂಸಿ
ಋತದ ಉಜ್ಜ್ವಲದ ಅದ್ಭುತಾದ್ಭುತದ ಅಂಗಗಳು ರಂಗುಗೊಂಡು
ಜೊತೆಗಿದೋ ಋತವು ಪ್ರಕೃತಿಯಾ ಶಿರದ ಮಕುಟಮಣಿ ಸೂರ್ಯನಿಂದು

ಜೊತೆಜೊತೆಗೆ ಋತವು ಪ್ರಕೃತಿಯಾ ಪದದ ಪ್ರತಿಹಂತ ಹಂತಕಾಗಿ
ಪಥದ ದರ್ಶನಕೆ ಮುಂಚೂಣಿಯಲ್ಲಿ ತಾ ಮಾರ್ಗದರ್ಶಿಯಾಗಿ
ಮತ್ತಿದೋ ಋತವು ಅನಿಮೇಷವಾಗಿ ಮುಗಿಲಗಲವಾಗಿ ತೆರೆದು
ಅವಳ ಆ ಆಳ–ಪಾತಾಳದೆಡೆಗೆ ಈ ದೃಷ್ಟಿಪಾತ ಸಂದು

ಲೋಕಾತಿಲೋಕದುದ್ಧಾರಕಾಗಿ ತಾ ಜನಿಸಿ ಬರುವನೀಗ
ಪ್ರಕೃತಿಗಧಿಪುರುಷ ತಾನಾಗಿ ನಿಲುವನೀ ಅತಿಮಾನವನು ಈಗ
ಅವನ ಸಾನಿಧ್ಯವದು ಈಗ ಜಡದ ಈ ಲೋಕವೆಲ್ಲವನ್ನು
ರೂಪಾನುಸ್ಪಂದದಲಿ ನಿತ್ಯ ದೇದೀಪ್ಯಗೊಳಿಸಿ ಅದನು.

ಬುವಿಗೆ ಕವಿದಿರುವ ನಿಶೆಯ ಒಡಲಿನಲಿ ಬೆಳಗಿಸುತ ದೀಪ–ಜ್ಯೋತಿ
ಋತದ–ಜ್ವಾಲೆಗಳನವನೀಗ ಪುಟಿಸಿ ಪುಟಗೊಳಿಸಿ ದಿವ್ಯ ಕಾಂತಿ
ಋತದ ಮಹತಿಯಾ–ನಿಯತಿಯನು ಮೃಣ್ಮಯದ ಮೇಲೆ ನೆಲೆಸಿ;
ಮಾನವನು ಸಹಿತ ಪಡಮರಳಿಕೊಂಡ ಪರಮಾತ್ಮ–ಕರೆಯನರಸಿ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 11 ಶಾಶ್ವತದ ಬೆಳಗು, ಪುಟ 708/9)**

ಈ ನಿರ್ಗುಣ ಬ್ರಹ್ಮವನ್ನು ಅಸತ್(ಮಿಥ್ಯಾ) ಎಂದು ಪರಿಗಣಿಸಲು ಸಾಧ್ಯವಾಗುವದಿಲ್ಲ. ಸಗುಣ ಬ್ರಹ್ಮದಲ್ಲಿ ಸಾಕಾರಗೊಂಡ ಜಗತ್ತು ನಿಯತಿಯಂತೆಯೇ ನಿಗದಿತವಾದ ಅವಧಿಯವರೆಗೆ ಗೋಚರವಾಗುತ್ತಿರುವದರಿಂದ, ಇದನ್ನೇ ಸತ್ ಎಂದು ಪರಿಗಣಿಸಲು ಬರುವದಿಲ್ಲ. ಇವೆರಡೂ ಆಯಾಮಗಳ ಸಂಗಮವೇ 'ಸದಸದ್' ಆಗಿದ್ದು, ಇದನ್ನೇ ಶ್ರೀ ಅರವಿಂದರು, 'ನ ಮಿಥ್ಯಾ' ಎಂದು ಅಭಿವ್ಯಕ್ತಿಸಿದ್ದಾರೆ. ಈ ಜಗತ್ತು ಬ್ರಹ್ಮವೇ ಆಗಿದೆ; ಈ ಬ್ರಹ್ಮವೇ ಜಗತ್ತಾಗಿದೆ; ಹೀಗಾಗಿ ಬ್ರಹ್ಮ ಸತ್ಯವಾಗಿರುವದರಿಂದ ಮಿಥ್ಯೆ ಎನ್ನುವುದು ಉದ್ಭವವೇ ಆಗುವದಿಲ್ಲ.

**(ಸಶೇಷ)**

## ಶ್ರೀ ಅರವಿಂದರ
## ‘ಉರ್ವಶಿ’

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

**3**

ಕಾರ್ಮೋಡಗಳ ದಂಡಯಾತ್ರೆಯದು ಕ್ಷಿಪ್ರದಿ ನಡೆದು
ನಿರ್ಮಲವಿಹ ನೀಲಾಕಾಶದಿ ನೀರದಗಳ ನೆರೆಸಿ
ಕಿರಣಾವತರಣದ ಕೋಟಿಮೂಲಗಳನೆಲ್ಲ ಕಣ್ಕಟ್ಟಿ ಕುರುಡಾಗಿಸಿ,
ಅಂದಮಯದಿ ಅಂಧಕಾರವನೇ ಕರೆಸಿ,
ಹಿಮವಿರದ ಹಿತ್ತಲಿನೊಳಗೆ ಹಾರಿಹೋಗಿತ್ತು.
ಹರಿಯುತಿಹ ಹೊತ್ತಾರೆಯನೇ ಹರಿದು ಹೊತ್ತೊಯ್ದಿತ್ತು.
ಕಳ್ಳಕಾಕರುಗಳೆಲ್ಲ ಕೋಟಿಲೆಕ್ಕದಲಿ ಕಲೆತು, ಕನಕಭಾಂಡಾರಕೆಂದು
ಕೀರ್ತನಾಮರುಗಳನೇ ಕಾಡುಪಾಲಾಗಿಸುವೊಲು,
ಪಯೋಧಯೋಧರಗಳು ಧಾರಾಧರರಾಗಿ ದಂಡೆತ್ತಿ ಬಂದು ಬೆಳಗಿನ ಬೆಂಡೆತ್ತಿರಲು,
ಕರಿಮೋಡಗಳವು ಕವಿಸಿರುವ ಕತ್ತಲೊಳಗೆ ಕಾಂತಿಮಯವದು ಕಾಂತಾರದೊಳಗೆ
ಕಳೆದು ಕಾಣೆಯಾಗಿತ್ತು.
ಮೂಡಣದಿ ಮೂಡಿದ ಮುಂಜಾವದು ಮೇಘಜಾಲದ ಮರಡಿಯೊಳಗೆ ಮುಳುಗಿ
ಮರೆಯಾಗಿತ್ತು.
ನೋಡನೋಡುತ್ತಿದ್ದಂತೆ ನಿಸರ್ಗವನೇ ನಿರ್ಲಿಪ್ತಮಯವಾಗಿಸಿಹಾ ನಿಗೂಢವನು
ನೋಡುತ ನಿಂದರಲವ ನೃಪನು,
ಪ್ರೇಮವಾಹಿನಿಯೊಲು ಪ್ರವಹಿಸುತಿದ್ದ ಪ್ರಕೃತಿಯನು ಪ್ರಾಣಭಯದಿ
ಪುರೋಗಮಿಸುವೊಲು
ಪ್ರವರ್ತಿಸಿದ ಪ್ರಾಣಾಂತಕನವ, ಪ್ರತಿಷ್ಠಾನಾಧಿಪತಿಯಿಹ ಪುರೂರವಸ್ಸನಿಗೆ
ಪರಿಚಿತನೇ ಆಗಿಹನು!
ನಿಲಿಂಪರ ನೆಲೆಯಲಿ ನಡೆದ ನೂರು ಕಾಳಗಗಳಲಿ ನೇರಾನೇರದಿ ಯುದ್ಧಿಸಿಹ
ಬದ್ಧವೈರಿಯೇ ಅವನಿಹನು!
ಆದಿತ್ಯರರಮನೆಗೆ ಅಡಿಯಿಟ್ಟು, ಅಮೃತಪುತ್ರರುಗಳನೇ ಅವಡುಗಚ್ಚುವೊಲು ಗೈದ
ಕರಾಳ ಕೇಶಿಯಾಗಿಹನು!

ದೆವ್ವಮೊಗದಾ ದೈತ್ಯನಿಗಿವೆ ಉಂಡೆಗಟ್ಟಿದ ಕೆಂಡಗಣ್ಣುಗಳು, ಗಲ್ಲದಲಿ
ಕೋಂಟೆಗಟ್ಟಿದ ಕಲ್ಲೀಮಿಸೆಗಳು.
ಕೋಟಿಕದನಗಳ ಕಳೆದೋದರೂ ಕಳೆಯದ ಕಿರಾತಕನ ಕಟ್ಟುಹಗೆಯದು
ದಟ್ಟಹೊಗೆಯಾಗಿತ್ತು.
ಈ ಹಿಂದೊಮ್ಮೆ ಪರ್ಜನ್ಯನೊಡನೆಯ ಯುದ್ಧದಿ ಸೋಲಿಸುತವನು ಪಡೆದು
ಪರ್ಜನ್ಯಾಸ್ತ್ರವ,
ವೃತ್ರಗೈದಿಹ ಪಾರವಿರದ ಜಲರಾಶಿಯ ಸುರಿಸಿ, ನೆಲಮುಗಿಲನೊಂದಾಗಿಸಿ
ನಿಲಿಂಪರನಂಜಿಸಿದೊಲು,
ಕೇಶಿಯವ ತಾನೇ ಕಾಳೋದಕದ ಕರಾಳವೇಷವ ಧರಿಸಿ, ಛದ್ಮದಿ ಭರಿಸಿ
ಬಲಾಹಕದ ಭರಪೂರವನು,
ಮೇಘದೊಡಲ ಮಹಾಪೂರವನು. ಜೊತೆಗಿರಲು ಜೋಡೆತ್ತಿನೊಲು
ಬಿರುಗಾಳಿ–ತಿರುಗಾಳಿ,
ಗಾಳಿ–ಮಳೆಗಳ ಗಂಧರ್ವರನೇ ಗೋಳದೊಳು ಗೌಪ್ಯವಾಗಿರಿಸಿ ಗಮಿಸಿದನು.
ಬಾನಂಚಿನಲಿ ಬಿಂದುವೊಲಾಗಿ ಭ್ರಮಿಸಿ ಬಂದಿಲ್ಲಿ ಬೃಹದಾಕಾರದಿ ಭವಿಸಿಹನು.
ನೀಲಾಕಾಶದಿಂದ ನಡೆದು ನಾಲ್ದಿಶೆಗಳನೇ ನುಂಗಿ ನೀರ್ಕುಡಿದು ಉಬ್ಬಿ
ಉರವಣಿಸಿಹನು.
ಸುತ್ತೆಲ್ಲವನು ಸುತ್ತಿ, ಮುತ್ತಿ, ಸುಳಿಯೆಬ್ಬಿಸಿ, ಸ್ವರ್ಗ ಸುಂದರಿಯರ ಬಳಿಸಾರಿ,
ಭಯವಿಡಿಸಿ,
ಬೀಸಿ ಬಿರುಗಾಳಿಯ, ಚದುರಿದ ಚಲುವ ಚಂಚಲೆಯರು ಚೀತ್ಕಾರಗೈದು
ಚಿಂತಿತರಿರಲು
ಸುತ್ತುವ ಸುಳಿಗಾಳಿಯೊಳಗೆ ನೀರನ್ನೈದಿಲೆಗಳವು ನೇರವೇರಿ
ಗಾಳಿಗೋಪುರದೊಡನೆ ಗೊತ್ತಿರದ
ತಾಣಕೆ ತೆರಳಿ, ತಲೆಕೆಳಗಾಗಿ ತಿರುಗುವ ತಿರುಗಣಿಯೊಲು, ತಳಕಚ್ಚಿ ತೀರಿ
ಹೋಗುವಂತೆ
ಪ್ರಾಣ–ಪರ್ಜನ್ಯರ ಪ್ರಾಕಾರದೊಳಗೆ ಪಯಣಿಸಿದ ಪಣಿನಾಯಕನವ
ಮೋಡದೊಳಗೆ ಮರೆಯಾಗಿದ್ದುಕೊಂಡೇ ಮಂದಾಕಿನಿಯವಳ ಮೇಲೆತ್ತಿ
ಮುಂದೋಡಿ,
ಹಿಮಾರುಣವಿಹ ಉತ್ತರಗಿರಿಗಳಿಗೂ ಉತ್ತುಂಗತಮವಿಹ ಉಪ್ಪರಿಗೆಯನೇರಿ

ಬಿಟ್ಟಬಾಣದಲೋಡಿ, ಮುಟ್ಟಿ ಮೂಡಣದೆಡೆ ಮಾಯವಾದನು. ದಿಟ್ಟಿ ದಿಗಂತದೆಡೆ ದೂರವಾದನು.
ಮುರಿದ ನಕ್ಷತ್ರದ ತುಂಡೊಂದು ನಭದೊಳಗೆ ಸರ್‍ರನೆ ಸರಿದು ಸುಳಿವು ಕೊಡದಂತೋಡಿ ಕಾಣೆಯಾಗುವೊಲು
ದೂರದಿಗಂತದಿಂದ ದಾಂಗುಡಿಯಿಟ್ಟು ದೇವಕನ್ಯೆಯನು ಕದ್ದೊಯ್ದು ಕ್ಷಿತಿಜದಿನ್ನೊಂದು
ಧ್ರುವದೆಡೆಗೆ ದೂರವಾದ ದೈತ್ಯನನು ಕಂಡೊಡನೆ ಕೆಂಡಾಮಂಡಲನಾದ ಪುರೂರವನು,
ಸ್ವರ್ಗಸೀಮೆಯಲಿ ಸುಳಿವ ದಿವ್ಯದೂತರ ಮನೋಜವದಿ ಮುನ್ನುಗ್ಗಿದನು. ದೈತ್ಯನೆಡೆ ಧಾವಿಸಿದನು.
ನಿರ್ಜನವಿಹ ನೆಲೆಯಲ್ಲಿ ನಿಲಿಂಪರಾಜ್ಞಿಯನೆತ್ತಿಕೊಂಡು ನಿರಾಂತಕದಿ ನಡೆದೆನೆಂಬ ನೆಮ್ಮದಿಯಲಿ
ಮುನ್ನೂಕಿರಲವ ಮನೋವೈರಿ, 'ಬೆಳಕಿನೊಂದು ರಥವೇ ಬೆಂಬತ್ತಿ ಬರುತಿದೆಯೋ!' ಎಂಬಂತೆ
ಭ್ರಮಿಸಿದನು, ಭಯದಿ ಭವಿಸಿದನು. ತಡೆಯಲಾರದೆ ತಡೆದು ತಿರಗಿದನು. ಮನದೇ ಮರುಗಿದನು.
'ಸೂರ್ಯರಥವೇ ಸ್ವರ್ಣೇಮದಿಂದಿಳಿದಿಲ್ಲಿ ಸ್ವರ್ಗಸುಂದರಿಯ ಸಹಾಯಕೆಂದು ಸುಳಿದಿಹಿದೋ?
ಇಲ್ಲ, ಅನಿಮೇಷರೇ ಅಮರಪ್ರಾಂತ್ಯದ ಅಟ್ಟಣಿಗೆಯಿಂದಿಳಿದಿಲ್ಲಿ ಅಟ್ಟಿಸಿಕೊಂಡು ಬರುತಿಹರೋ?'
ಎಂದೆನುತ  ಧೇನಿಸಿದನು, ಮಾನಿಸಿದನು, ಅವಲೋಕಿಸುತದನು ಅನುಮಾನಿಸಿದನು. ಅನಿತರೊಳು ಅರಿತಿಹನು,
ಅನಸವಿದು ಮಾನಸದಿಂದಲ್ಲ, ಮಾನುಷದಿಂದ ಮೇಲೆದ್ದು ಬಂದಿಹುದು. ಅದರೊಳಗೆ ಆರೂಢನಿಹನು,
ಅನಿಮೇಷರಿಗಿಂತಲೂ ಅಪಾಯಕಾರಿಯಿಹ ಅರ್ಧನರನರ್ಧನಿಲಿಂಪನಾದ ಪುರೂರವಸ್ಸನಿಹನು.
ಪ್ರಕಾಶದ ಪೂರ್ಣಪ್ರತಿನಿಧಿಗಳಿಹ ವಿಬುಧರಿಗಿಂತಲೂ ವಿಪತ್ಕಾರಿಯಿಹ ವಿಜಯವಿಕ್ರಮನಿಹನು.

ನಿರ್ಜರರ ನೆಲೆಯಲ್ಲೇ ನುಂಗಲಾರದ ತುತ್ತಾಗಿ ಪರಿಣಮಿಸಿದ್ದ ಪ್ರಾಣಾಂತಕನನೀ ಪ್ರಾಣಸೀಮೆಯಲಿ
ಕಂಡೊಡನೆ ಕೇಶಿಯ ಕಣ್ಣ ಪಟಪಟಿಸಿತ್ತು, ಹಲ್ಲ ಕಟಕಟಿಸಿತ್ತು. ರೆಕ್ಕೆ ಫಡಫಡಿಸಿತ್ತು, ಜೀವ ಚಡಪಡಿಸಿತ್ತು.
ಆದರೂ ಅಂಜದ ಅಳುಕದ ಅಮನ್ಯ ಮಾನನವ, ಬರ್ದಿಲರನೇ ಬಾಯಾರುವೊಲು ಭಯವಿಡಿಸಿ
ಪರಂಧಾಮಕೆನೇ ಪ್ರಾಣಭಯವಿಡಿಸಿಹ, ಪೆರ್ದೊಲೆಯೊಲಿಹ ತನ್ನ ತೋಳೆತ್ತಿ ತಡೆಯೊಡ್ಡಲೆಂದಲ್ಲಿ ತವಕಿಸಿದನು.
ಶಂಕರಶೂಲದೊಲು ಭಯಂಕರವಿಹ ಭಲ್ಲೆಯನೆತ್ತಿ ಭಯವಿಡಿಸುವ ಭರದಿ ಬಂದೆರಗಿದನು. ಆದರೆ,
ಸೋಮರಥದ ರಥಿಯಾಗುತ ನಿಂದಿರಲವ ನೆಲಮುಗಿಲ ನೇಕಾರ, ನೃಪನಾಯಕನಿಹ ನೇತಾರ.
ಚಂದ್ರರಥದ ಚಕ್ರಗಳವು ಚಾರುಲೋಕಗಳನೇ ಚಂಚಲಗೊಳಿಸುವ ಚಿತ್ವೇಗದಲಿ ಚರಿಸಿತ್ತು.
ಗಡಚಿಕ್ಕುವ ಘಟ್ಟಿ ಗೊರಸುಗಳ ಘರ್ಷಣದಿ ಘಟ್ಟಮಾರ್ಗವನೇರಿ ಗಮಿಸಿತ್ತು.
ಈಹಾಮೃಗದ ರುರುಧ್ವಜವಿಹ ಸತ್ಯಸ್ಯಂದನವದು ನಿತ್ಯನಂದನದೊಲಾಗಿ ನಡೆದಿತ್ತು.
ಇಂದ್ರಜಾಲದ ಇಪ್ಪತ್ತು ಮೋಡಿಗಳ ಮೈಗೂಡಿಸಿಕೊಂಡ ಮಾಂತ್ರಿಕನೋರ್ವ ಪ್ರೇತದಂಡವನೆತ್ತಿ,
ಗಗನದೊಳು ಗುಂಪಾಗಿ ಗಮಿಸುತಿಹ ಗುಬ್ಬಚ್ಚಿಗಳ, ತಡೆದವುಗಳನಲ್ಲೇ ತಟಸ್ಥಗೊಳಿಸುವೊಲು,
ಪುರೂರವನನು ಕಂಡೊಡನೆ, ಕಣ್ಣಿಲ್ಲದ ಕುರುಡನೊಲು ಕಾಲೆತ್ತಿಡಲಾಗದೆ ಕನಲಿ ಕಪ್ಪಿಡಿದನವ ಕೇಶಿ!
ಅಂಬುದಗಳನೆತ್ತಿ ಅಂಬರಾಂಬರದಲಿ ಅಂಬೆಗಾಲಿಡಲಾಗದೆ ಅಲವತ್ತುಕೊಂಡನವ ಅನಿಮೇಶದ್ವೇಷಿ!
ನಡೆಯಲಾರದ ನಿತ್ರಾಣನೊಲಾಗಿ ನಿಂತಲ್ಲೆ ನಿಂತು ನೀರಡಿಸಿಹನು. ತಮದಿ ತತ್ತರಿಸಿ, ಭಯದಿ ಬಿತ್ತರಿಸಿದನು.
ಕೇಶಿದೈತ್ಯನ ಕೆಂಡಗಣ್ಣುಗಳವು ಚೆಂಡದುಂಡೆಯೊಲಾಗಿ ಚಕಮಕಿಸಿ ಚಲಿಸಿ ಚಂಚಲಮಯದಿ,

ಅರಿವಿಲ್ಲದೆ ಅಂಗಾತವಾಗುತೊರಗಿದ ಅಪ್ಸರಕನ್ಯೆಯನೊಮ್ಮೆ ಅರಸುವುದು, ಮತ್ತೊಮ್ಮೆ
ಮೃತ್ಯುದೇವನೇ ಮೈವೆತ್ತಿದೊಲಾಗಿ ಮುಂದಿರುವ ಮರ್ತ್ಯನನೊಮ್ಮೆ ಮಿಟುಕಿಸುವುದು.
ಪೌರವನ ಪ್ರಾಣಕಾಂತೆಯವಳು ಪಣಿಯ ಪಂಚಾಂಗುಲಿಕೆಯಲಿ ಪ್ರಜ್ಞಾಹೀನಳಾಗಿ ಪವಡಿಸಿರಲು
ಕ್ರೋಧದ ಕಟ್ಟೆಯೊಡೆದಿತ್ತು, ಸಿಟ್ಟಿನಟ್ಟಣಿಗೆಯನೇರಿತ್ತು, ನೃಪನ ನಾಸಿಕಾಗ್ರವನೇರಿ ನಿಂತಿತ್ತು,
ಮುನಿಸಿನ ಮೂಗು ಮೇಲಾಗಿರಲು, ದುರುಳದೈತ್ಯನವನನು ದಂಡಿಸಲೆಂದವನು ಧೇನಿಸಿರಲು,
ವಿಧಿಯ ವೀಥಿಯದು ಹಿಂಸೆ–ಭಯಗಳೆಂಬ ಇಬ್ಬಗೆಯ ಕವಲಿನೊಲು ಕೇಶಿಯ ಕಟ್ಟಾಡಿಸಿತ್ತು.
ಮೃತ್ಯು–ಮುಖಭಂಗಗಳೆಂಬ ಮಾರ್ಗಗಳೆರಡು ಮೂಡಿ ದೈತ್ಯನ ದಂಗೆಡಿಸಿತ್ತು.
'ನೃಪನೆದುರಾಗಿ ನಿಂತು ನಿಯತಿಯನೆದುರಿಸುವುದೋ ? ಕನ್ನಿಕೆಯನವನ ಕೈಗಿತ್ತು ಕಡೆಗಣಿತನಾಗುವುದೋ?'
'ಅತ್ತ ದರಿಯಿರಲು ಇತ್ತ ಪುಲಿಯಿರಲು, ದರಿಗಿಳಿದರೂ ದಕ್ಕುವೆನಾದರೀ ಪುಲಿ–ಕೇಶಿಯನೆದುರಿಸಿ ಪಕ್ಕಾಗೆನು'
ಎಂದುಲಿದ ಕೇಶಿಯವ ಕೈಯೊಳಿಹ ಕಮಲ ಕನ್ನಿಕೆಯನು ಕೆಳಗೆಸೆದು ಕಾಲ್ದೆಗೆದು ಕಾಣೆಯಾದನು.
ನಿಲಿಂಪರ ನಂದನೋದ್ಯಾನದಿ ನೆರೆತ ನೀರನ್ನೈದಿಲೆಯದು, ಪರಂಧಾಮದಿ ಪಲ್ಲವಿಸಿದ ಪಾರಿಜಾತವದು,
ಹಿಮದ ಹಾಸಿಗೆಯ ಮೇಲೆ ಬಂದೆರಗಿ ಬಿದ್ದಿತ್ತು, ನೀರ್ಗಲ್ಲ ನೆಲದ ಮೇಲೆ ನವೆದಿಳಿದು ನಿದ್ರಿಸಿತ್ತು.
ಅಂತರಿಕ್ಷದಿಂದಲೇ ಅಪ್ಸರೆಯನ್ನೆಸೆದು ಅದೃಶ್ಯನಾದ ಕೇಶಿದೈತ್ಯನವ ಕವಿಸಿದ ಕತ್ತಲೆಯ ಕೋಟಿ–
ಮೂಲಗಳನೆಲ್ಲ ಮತ್ತೆ ಮರೆಯಾಗಿಸಿ ಮೂಡಣದೆಡೆ ಮಾಯವಾದನು. ಮತ್ತೆ ಮೂಡದಾದನು.
ಕದನಕೇಡಿಗನೋರ್ವ ವಿಜಯ ವೀರಾಗ್ರಣಿಯೊಡನೆ ಯುದ್ಧಿಸದೆ ಯುದ್ಧಪಂಗುವಾಗುತ ಪಲಾಯನಗೈದಿರಲು,

ಹೇಡಿಪಡೆಯದು ದಂಡವಿಹ ದಂಡನಾಯಕನ ದಾರಿಯಲೇ ದುಡದುಡನೆ ಓಡಿ
ದಿಡ್ಡಿಬಾಗಿಲನು ದೂಡುವೊಂತೆ,
ಕೇಶಿದೈತ್ಯನವ ಕರಗಿ ಕಾಣೆಯಾದ ಕರ್ರಗಿನ ಕುಳಿಬಾನೆಯದು
ಕಾರ್ಮೋಡಗಳನೆಲ್ಲ ಕುಡಿದು ಕುಬ್ಜವಾಗಿತ್ತು.
ಗಿರ್ರೆಂದು ಗಿರಕಿಸುತ್ತುತಿದ್ದ ಛದ್ಮಸ್ಥ ಗಹ್ವರವದು ದೈತ್ಯನವ ದೂಡಿದ
ಧಾರಾಮಂಡಲವನೆಲ್ಲ ಧರಿಸಿ ದೂರವಾಗಿತ್ತು.
ಕಾರ್ಮೋಡಗಳೆಲ್ಲ ಕಳೆದಿರಲು, ಕಳೆದ್ಹೋದ ಕಾಂತಿಯೆಲ್ಲ ಕಣ್ಣಂಚಿನಲಿ
ಕುಣಿದಾಡಿತ್ತು.
ಮೇಘಮಾಸುರರೆಲ್ಲ ಮುಳುಗಿರಲು ಮರೆಯಾದ ಮೂಡಣವದು ಮತ್ತೆ
ಮಿನುಚಾಡಿತ್ತು.
ಅಂಧಕಾರದಲಿ ಅಲವತ್ತುಕೊಂಡ ಆಗಸವದು, ನೀಲ ನೀಲಿಮದಲಿ ನಿಂತು
ನಲಿದಾಡಿತ್ತು.
ಸುಳಿಯೊಳಗೆ ಸೆರೆಯಾಗಿದ್ದ ಸವಿತೃ ಸಾಮ್ರಾಜ್ಯವದು ಹರಿದಂತದ
ಹೊನ್ನಕಾಂತಿಯೊಳು ಹರಿದಾಡಿತ್ತು.
ಮರ್ತ್ಯವನು ಮುಚ್ಚಿದ್ದ ಮಾಯೆಯ ಮುಸುಕದು ಕಳೆದಿರಲು ಕಡಲಾಣಿ
ಮುತ್ತುಗಳ ಮೈಗರೆದಿತ್ತು.
ಪುರೂರವಸ್ಸನವ ಪುರೋಗಮಿಸುತಿಹ ಪಾಪಿಯನವನ ಪಾಡಿಗವನ ಬಿಟ್ಟು
ಭವಿಸಿದನು.
ಹಿಮಾದ್ರಿಯ ಶಾಂತವಲಯದ ಒಂದೆಡೆಯಲಿ ಚಂದ್ರರಥವನಿಳಿಸುತಾ
ಚೆಲುವೆಯೆಡೆ ಚಲಿಸಿದನು.
ಪ್ರಜ್ಞೆಯಿಲ್ಲದೆ ಪವಡಿಸಿದಾ ಮಾನಿನಿಯ ಮಗ್ಗುಲಿನಲಿ ಮಂಡಿಯೂರಿ
ಮಾತನಾಡಲೆಂದವನು ಮಾನಿಸಿದನು.
ನಿಲಿಂಪರ ನಾಕದಡೆಯಿಂದ ನೇರವಿಳಿದಿಲ್ಲಿ ನಿಂತು ನೆಲಕೆ ನಲುಗಿದ
ನೀರನೈದಿಲೆಯಂತೆ,
ಅನಿಮೇಷರ ಅಮರಧಾಮದಿಂದಿಳಿದಿಲ್ಲಿ ಕಾರ್ಮಣರ ಕುಂಬಿನಿವನದಿ ಕಾಲಿಟ್ಟು
ಕನಲಿದ ಕೇದಿಗೆಯಂತೆ,
ಸುರರ ನಂದನೋದ್ಯಾನದಿಂದ ಪರಿತ್ಯಕ್ತವಾಗಿಲ್ಲಿ, ಪೃಥಿವಿ, ಪರಿಗ್ರಹದೆಡೆ ಪದವಿರಿಸಿ
ಪೆಚ್ಚಾದ ಪಾರಿಜಾತದಂತೆ,

ಹಿಮಗಲ್ಲಿನ ಮೆಲೆ ಬಂದಿರಗಿದ ಭವಕನ್ಯೆಯವಳು, ಕಟ್‌ಬಿಚ್ಚಿಹ ಕೇಶರಾಶಿಯ
ಮಧ್ಯದಲಿ ಮೈಚಾಚಿ ಮಲಗಿಹಳು.
ಕೆದರಿದ ಕರಿಗೂದಲೇ ತಾರೆಯವಳ ತಲ್ಪವಾಗಿರಲವಳ ಅಲ್ಪವಸ್ತ್ರವದು
ಅಸ್ತವ್ಯಸ್ತವಾಗಿತ್ತು.
ಅಂದವಿಹಳ ಅಂಗಸೌಷ್ಠವವದು 'ಅಲಂಕಾರ'ಹಿತವಾಗಿತ್ತು.
'ಕಲಂಕಾ'ರಹಿತವಾಗಿತ್ತು.
ಒಂದೆಡೆಯಿಂದ ವಾರೆಯಾಗಿ ವಂಚಿತವಾಗಿದ್ದ ವಸ್ತ್ರದಡಿಯಿಂದ
ನಿಲಿಂಪರಾಜ್ಞಿಯ ನಗ್ನದೇಹವದು ನಲಿದಾಡಿತ್ತು.
ಸ್ವರ್ಣಿಮ ವರ್ಣದಲಿ ಸುಪುಷ್ಠವಿಹ–ಸುಸ್ಪಷ್ಟವಿಹ ಸ್ತನವೊಂದು ಸರಿದಿತ್ತು,
ತೋಳೊಂದು ತೆರೆದಿತ್ತು.
ಮನೋಮಯದಾ ಮಾನಿನಿಯ ಮೈಮಾಟದ ಮೋಡಿಯದು,
ಮರ್ತ್ಯಮಾನವನ ಮೈಮರೆಸಿತ್ತು. ಮತ್ತೇರಿಸಿತ್ತು.
ಚಂದ್ರಕುಲದ ಚೆನ್ನಿಗನ ಚಿದ್ವಿಲಾಸವನಿಂತು ಚಂಚಲಮಯಗೊಳಿಸಿದ
ಚಾರುಕನ್ಯೆಯವಳು
ಶ್ವೇತಛತ್ರದ ಸಹಸ್ರಾಂಗಣದಿ ಸುಳಿದು ಸುಗೋಚರಳಿಹ ಶಶಿವದನದ
ಸಾಮ್ರಾಜ್ಞಿಯಾಗಿಹಳು,
ಹಿಮಾರುಣವಿಹ ಹರ್ಮ್ಯದ ಹೆದ್ದಾರಿಯಲಿ ಹಿತ್ತಾಳೆಬೆಳಕ ಹರಿಸುವ
ಹಿಮಾಂಶುವಾಗಿಹಳು.
ಪುಟಿದೆದ್ದ ಪ್ರೇಮಭಯದಿ ಪೆಚ್ಚಾದ ಪುರೂರವಸ್ಸನ ಧೀಮಂಡಲದಿ ದಿಗಿಲಿಡಿದಿತ್ತು,
ಧೈರ್ಯವಡಗಿತ್ತು.
ಉನ್ಮಾದದಲಿ ಊರ್ಧ್ವರೇತನ ಉಸಿರು–ಉಧ್ವಸ್ತವಾಗಿ, ಶ್ವಾಸ–ಪ್ರಯಾಸವಾಗಿ,
ಪ್ರಾಣ–ಪ್ರಮಾದದಲ್ಲಿರಲು,
ಅದಾವುದೋ ಅಜ್ಞಾತ ಕರಕಮಲಗಳವು ಕೈನೀಡಿ ಕಾಂತನನು ಕರೆದೊಯ್ದು
ಕನ್ನಿಕೆಯೆಡೆ ಕುಳ್ಳಿರಿಸಿದಂತಿತ್ತು.
ನೂರುಕುಲದ ನಾಯಕನಾ ನುಡಿಗಳನೇ ನಿರ್ಲಿಪ್ತಮಯವಾಗಿಸಿ
ನಡೆಸುತವನನೊಯ್ದು ನೀರೆಯೆಡೆ ನಿಲ್ಲಿಸಿದಂತಿತ್ತು.
ಅಸುರನ ಅಟ್ಟಹಾಸದಿ ಅಚೇತನಳಾದ ಅಬಲೆಯ ಅಧರಗಳ ಮೇಲೆ ಮೃದು
ಮಧುರವಿಹ ಮುತ್ತನಿತ್ತು,

ಮಣಿಸಲೆಂದವನು ಮಾನಿಸಿದರೂ, ಮನದೊಳಗೆ ಮೂಡಿದ ಮೂದಲಿಕೆಯವನ
ಮುತ್ತಿಡುವ ಮಾತನ್ನೇ ಮರೆಸಿತ್ತು.
ಚಂಚಲುಮಂಚಲಾದ ಚಂದ್ರಾಮರಾಯನವ ಚುಂಬಿಸದೇ ಚಂದ್ರಿಕೆಯನೆತ್ತಿ
ಚಂದ್ರರಥದೆಡೆ ಚರಿಸಿದನು.
ತಾರಾಕಾಂತಿಯ ತೇರಿನೊಳವಳನು ತಂದಿರಿಸುತ್ತಲೇ ತರುಣಿಯಾ ತಲೆಯದು
ತೂಗುತೂಗುತವನ ತೋಳನ್ನೇ
ತಲೆದಿಂಬಾಗಿಸಿತ್ತು. ಭುಜದ ಮೇಲೊರಗಿದ ಭಾಮಿನಿಯನು ಬಡಿದೆಬ್ಬಿಸುವ
ಮನವಿರದ ಮಾನುಷನವ
ವರೂಥದೊಳು ಒರಗಿದ ವಂದನೀಯಳ ವಪೆಯಿಡುವ ಏದುರಿಸಿನ
ಏರಿಳಿತವನು ಎಣಿಸುತಿರಲು,
ಅನಸದೊಳು ಅಂಗಾತವಾದ ಅಪ್ಸರೆಯ ಅಕ್ಷಿಪಟಲದಕ್ಷಗಳನು
ಲಕ್ಷ್ಯಗೊಟ್ಟೀಕ್ಷಿಸಿರಲು,
ಅಂದಗಾತಿಯ ಅಂಗವದು ಅಲುಗಿತ್ತು ! ಚೆಲುವ ಚಂಚಲೆಯ ಚರಮವದು
ಚಲಿಸಿತ್ತು !
ಅಚೇತನವಾಗಿ ಅಪ್ರಕೇತವೆಂಬಾ ಅನೃತಾಬ್ಧಿಗಿಳಿದವಳ ಪ್ರಜ್ಞೆಯದು
ಪುನರುಜ್ಜೀವನಗೊಂಡಿತ್ತು.
ಚಿರಂತನವಿಹ ಚೈತನ್ಯವದು ಚಾರುನಿಶೆಯಿಂದೇರಿ ಚರಿಸಿತ್ತು, ಚಾರುದಿಶೆಗೇರಿ
ಚಲಿಸಿತ್ತು.
ಕಾರ್ಗಾಲ ಕರೆದು ಕತ್ತಲಾವರಿಸಿದ ಮುಂಗಾರಿನ ಮದ್ಯಾಹ್ನದ ಮಂಪರಿನಲಿ
ಮುಚ್ಚಿದ ಕಿಟಕಿಯ
ಮಗ್ಗುಲಲಿ ಮಳೆ ನೋಡುತ ಮಲಗಿದ ಮುದ್ದುಮಗುವೊಂದು, ದಣಿದು
ದೀರ್ಘನಿದ್ರೆಯೊಳಿರಲು,
ಹಸುಮಕ್ಕಳ ಹಾಲುಗನಸುಗಳ ಹಸಾದವದು ಮುಚ್ಚಿದ ಕಿಟಕಿಯೊಳಗಿಂದ
ಕೈನೀಡಿ ಕಂದನ ಕರೆದೊಯ್ದಿತ್ತು.
ಚಂದಮಾಮನಂತಿರುವ ಚಂದ್ರಶಿಶುವದು ಚಂದ್ರಕವಾಟವನೇರಿ, ಚಂದ್ರಲೋಕಕೆ
ಚಲಿಸಿ,
ಚಂದ್ರಾಶ್ಮ, ಚಂದ್ರಮಲ್ಲಿಗೆಯ ಚಂದ್ರೋದ್ಯಾನದಿ ಚರಿಸಿ, ಚಿರಂತನವಿಹ
ಚಂದ್ರಕಾಂತಿಯು

ಹರಿವ ಹೊತ್ತಿನೊಳು ಎಚ್ಚೆತ್ತುಕೊಂಡು, ಕನಸಿನೊಳು ಕಂಡ ಕಾಣ್ಕೆಯನೇ
ಕನವರಿಸುತ
ಮರುಕ್ಷಣವೇ ಮಾತೆಯ ಮೊಲೆಯೂಡುತ್ತ ಮರೆತವನೆಲ್ಲ ಮತ್ತೆ ಮೈಮಣಿಸುವೊಂತೆ,
ಅಸುರನ ಅಂಗೈಯೊಳಗೆ ಅವುಡುಗಚ್ಚಿದ ಅಪ್ಸರೆಯವಳು ಅಪ್ರಜ್ಞಾವೃತಳಾಗಿ
ಅಲೋಕಾಕಾಶದೆಡೆಗೇರಿ,
ಕಂಡ ಅಖಂಡ ಮಂಡಲಗಳಲೆಲ್ಲ ಮುಂದಡಿಯಿಟ್ಟು, ದಿಟ್ಟಿಗೋಚರವಿರದ
ಧ್ರುವಲೋಕದೆಡೆ ದಾಂಗುಡಿಯಿಟ್ಟು,
ನಿಗೂಢವಿಹ ನಿಲಿಂಪರ ನೂರು ನೆಲೆಗಳಲೆಲ್ಲ ನಡೆದಾಡಿ, ಅವಿತಿಟ್ಟ
ಅನಿಮೇಶರ ಅಮೃತಾಲಯದಿ ಅಲೆದಾಡಿ,
ಆತ್ಮನಿದ್ರಾಂಗನೆಯ ಆವರಣದೊಳಗೆ ಭೇಟಿಯಾದ ಕೋಟಿ ಕಾಣ್ಕೆಗಳನೆಲ್ಲ
ಕಳೆದುಕೊಳ್ಳುವ
ಮನವಿರದಿದ್ದರೂ ಮರಳಿ ಮರ್ತ್ಯಕ್ಕಿಳಿದಿರಲು, ಮನೋಭಂಗವದು ಮುತ್ತಿ
ಮಾನಸವ ಮಣಿಸಿದರೂ,
ನೀರಸವಿಹ ನಿರಾಸೆಯ ನೂರುನೆನಹುಗಳೆಲ್ಲ ನಿಶ್ಶೇಷವಾಗಿಸೆ ನಾಲ್ದೆಸೆಗಳೆಡೆ
ನೂಕುವೊಂತೆ,
ಪ್ರದೀಪ್ತ ಪ್ರಾಂಗಣವನು ಪರಿತ್ಯಜಿಸಿ ಪೃಥಿವಿಗಿಳಿದ ಪ್ರಾಣಕಾಂತೆಯ
ಪ್ರಜ್ಞಾಪಯಣವದು ಪ್ರಾರಂಭದಲಿ
ನಿಶಾವತರಣದ ನೋಟವನಿತ್ತರೂ, ಬರುಬರುತ್ತದು ಬೆಳೆದು ಭವ್ಯಾಕಾರವಾಗಿತ್ತು,
ಭಾವಯಾನದ ಭಾವನೆಯನೇ ಬರೆದಿತ್ತು, ಪೃಥಿವಿಗಮನವಾಗಿ ಪರಿಗಣಿತವಾಗಿತ್ತು.
ಊರ್ಧ್ವದಲೇ ಉರುಹಾಕುತಿದ್ದ ಉರ್ವಾಶಿನಿಯು ಊರ್ಣನಾಭದೊಲು
ಉದುರಿ ಉರ್ವಿತಲಕಿಳಿದಿರಲು,
ಮೂರು ಮಂಡಲಗಳನಾಳುವ ಮಹೀವತಿಯೇ ಮರ್ತ್ಯಕ್ಕಿಳಿದೀ
ಮಾಯಾಂಕನೊಡನೆ ಮಾತನಾಡಿದಂತಿತ್ತು!

ಸೃಷ್ಟಿಯಾದಿಯಲಿ ಸ್ಥೂಲ–ಸೂಕ್ಷ್ಮಗಳಿನ್ನೂ ಸೂತ್ರದಲಿ ಸಂಲಗ್ನಗೊಳದಿರುವ
ಸಂಧಿ ಸಮಯದಲಿ,
ಪ್ರಕೃತಿ–ಪೂರುಷರಿನ್ನೂ ಪ್ರೇಮ–ಕಾಮವ ಪೂರೈಸಿ
ಪ್ರಾಣಪ್ರತಿಷ್ಠಾಪನೆಗೊಳುವದಕೂ ಪೂರ್ವಕಾಲದಲಿ,

ಪ್ರಜ್ಞಾಗ್ನಿಯಲಿ ಪುಟವಿಕ್ಕಿದ ಪಂಜನ್ನಿಡಿದು, ಪಂಕದೊಳು ಪ್ರತಿಮೆಗೊಳುತಿಹ
ಪರಂಧಾಮಗಳೆಡೆ
ಪ್ರಥಮ ಪದವನಿಡುತ, ಪ್ರಕಾಶದಾದಿಜ್ಯೋತಿಯನು ಪಸರಿಸುತ ಬರುವ
ಉಷಾದೇವಿಯವಳು,
ಶತಬ್ರಹ್ಮ ಸಂವತ್ಸರಗಳವಧಿಯೊರೆಗೆ ನಿರ್‌ಬ್ರಹ್ಮದ ನಿರಾಳದೊಳಗೆ
ನಿಸ್ತೇಜವಾಗುತೊರಗಿದ
ನೂರು ನಕ್ಷತ್ರಪುಂಜಗಳಿಗೆ ನವೀನ ಜನ್ಮದ ಜಾತಕರ್ಮವ ಜೊತೆಯಾಗಿಸಿ
ಜೀವದುಂಬಿರಲು,
ಲಕ್ಷಾವಧಿಯ ಲೋಕಗಳೊಡನೆ, ಕೋಟ್ಯಂತರದ ಕಾಣ್ಕೆಗಳು ಕಣ್ಬಿಟ್ಟು,
ಕೇಂದ್ರದೊಳಗಿಂದ ಕಂಡರಿಸಿರಲು,
ಚತುಃಶೃಂಗ ವೃಷಭನಾದ ಆನಂದಮಯನು, ಪೃಷ್ನಿಮಾತೆಯೊಡನೆ
ಪುನರ್ವಿವಾಹಗೈವ ಪ್ರಾದುರ್ಭಾವದಲ್ಲಿರುವೊಂತೆ
ಕೇಶಿದೈತ್ಯನವ ಕರೆದ ಕೋಟಿಮೇಘಗಳು ಕತ್ತಲೆಯ ಕವಿಸಿ ಕೋನಕೋನವನೆಲ್ಲ
ಕಾಳಾಗುರದ ಕೋಣೆಯಾಗಿಸಿರಲು,
ಜಂಜರಜಲದ ಜಾಲಂಧರವೊಂದು ಜರಿದಿಳಿದುಬಂದು ಜಾಜ್ವಲ್ಯಮಾನವಿಹ
ಜಗಕೆ ಜಾರುಗುಣಿಕೆಯನಿಕ್ಕಿರಲು,
ಕಳೆದೋದ ಕನಕಕಾಂತಿಯೆಲ್ಲ ಮತ್ತೆ ಮೈದೋರಿ ಮೂಡಣದಲಿ ಮೂಡಿದ
ಮುಂಜಾವನು ಮೆರೆಸಿತ್ತು.
ದ್ಯೌಲೋಕದ ದುಹಿತೆಯಾಗಿ ಭಾಮಂಡಲದಿ ಬೆಳಗುವ ಬೆಳಕನ್ನು
ಭೂಮಂಡಲಕೆ
ತಂದು, ತಮದೊಳಗೆ ತೆರಳುವ ತಾರಾತಸ್ಕರರನು ತವರುನೆಲಕಟ್ಟುವ
ಉಷೋದೇವಿಯು,
ಅಂತರಿಕ್ಷದಲಿ ಅಂಡಲೆವ ಅಶ್ವಾವತಿಯಾಗಿ, ಅಡ್ಡಾದಿಡ್ಡಿಯಾಗಲೆವ ಅಷ್ಟದಿಶೆಗಳನು
ಆಯಸ್ಸಿನ ಅಂಕೆಯಲಿಡುವಳು;
ಗೋಮಂಡಲದಲಿ ಗಮಿಸುವ ಗೋಮತಿಯಾಗಿ, ಕಾಮಧೇನುವಂತಿರುವ
ಕಾರ್ಮಣನೆಲೆಗೆ ಕನಕಕಾಂತಿವನೀವಳು;
ವಿಭಾವರಿಯಾಗಿ ವಿಶ್ವದಾಳದಲಿ ವಿಷದ ಒಡಲಾಗುತೊರಗಿಕೊಂಡಿಹ ವಹ್ನೀತಲಕೆ
ತಾರಾಕಾಂತಿಯನಿತ್ತು ತಂಪೆರೆವಳು;

ದಾಸ್ವತಿಯಾಗಿ ದುಷ್ಟಶಕ್ತಿಗಳ ದಾಳದಲಿ ದಹಿಸಿ ದಾಸ್ಯವೃತಿಯನು ದೂಡುತಿಹ
ಧಾರಾವಲಯಕೆ ದಾರಿಬೆಳಕಾಗುವಳು;
ಶ್ರವಸ್ಸು–ರಾಧಸ್ಸುಗಳ ಆಚರಣೆಯಲಿ ಆಚರಣೇಷುವಾಗಿ, ಸೃಜನ–ವೃಜನಗಳ
ವಾಜನದಲಿ ವಾಜಿನೀವತಿಯಾಗಿ,
ಲೋಕಲೋಕಂಗಳನು ಬೆಳಗುತ್ತ ಬಂದು ಬುವಿಯೆಡೆಗೆ ಭವಿಸಿರಲು,
ನೇಪಥ್ಯವದು ನೀಲಾವರ್ತದಲಿ ನಿಂತು ನಲಿದಾಡಿತ್ತು.
ಭೂರಿಶೃಂಗ ಗೋಮಂಡಲದಲ್ಲಿರುವ ಗೋವ್ರಜವನು ಗಿರಿಧರನ ನೆತ್ತಿಮೇಲಿನ
ನಾಲ್ದೆಸೆಗಳಿಗೆ ನೂಕಿರಲು,
ಉಷೆಯ ವೈಭವದ ಒಡಲೊಳಗಿಂದ ಒಂದಾಗುತ ಬಂದ ವಿಕ್ರಮೋರ್ವಶಿಯರ
ದೃಷ್ಟಿ ಕೂರ್ಗಣೆಗಳವು ಕಲೆತು
ಸಂತಸದ ಸ್ವರ್ಣಸೇತುವೊಂದನು ಸೃಜಿಸಿ ಮರ್ತ್ಯಮನೋಮಯದ ಮಧ್ಯದಲಿ
ಮಧುರಮಂದಾರವನು ಮೂಡಿಸಿತ್ತು.
ನೆಲಮುಗಿಲಿನಂಗಳದಿ ನಲುಮೆ–ಒಲುಮೆಯ ನಂಟನು ನೇಯ್ದು ನರ–ನಿಲಿಂಪರ
ನಡುವೆ ನಿತ್ಯದೊಡನಾಟವನು ನಿಲಿಸಿತ್ತು.
ಶಕ್ತಿಯ ಸೂನುವಾದ ಸವಿತೃಸೂರ್ಯನ ಸೂಡಿಯೊಳಗಿಂದ ಕೆಳಗಿಳಿವ
ಕಿರಣಕಾಂತಿಯನು ಕೊಂಡು
ಮಣ್ಣಿನಿಂದೆದ್ದು ಮೊಳೆತು ಮೊಗ್ಗಾಗಿ ಮಲ್ಲಿಗೆಯಂದದಿ ಮೈದೋರಿ ಮಿನುಗುವ
ಕುಮುದಿನಿಯು,
ಕತ್ತಲರಾತ್ರಿಯಲಿ ಕಮರಿ, ಕಗ್ಗಾಡಿನಲಿ ಕಳೆದೋಗಿ ಕಣ್ಣೀರಾಡುವ ಕುರುಡನೊಲು
ಕೆಳಮೋರೆಯಾಗುವುದು,
ಮರುದಿನವೇ ಮತ್ತೇ ಮೂಡಣದಿ ಅರುಣಾರುಣವಿಹ ವರ್ಣಜಲದಿ ಮಿಂದೆದ್ದು
ಮೂಡುವ ಮಾರ್ತಾಂಡನನು
ಕಾಣುತಲೇ ಕೆರೆಯಾಳದ ಕೆಸರು ಕಟ್ಟಡದೊಳಗಿಂದ ಕಂಡರಿಸುವ ಕೌಸ್ತುಭವು
ಕೋಟಿಕಾಂತಿಯ ಕರೆವಂತೆ
ಕೇಶಿದೈತ್ಯನವ ಕಾಲಿಟ್ಟು ನಸುಕು ಹರಿವ ಮಸುಕು ಮುಂಜಾನೆಯನು ಮರೆಸಿ,
ಮಹಾಂಧಕಾರವನೇ ಮೆರೆಸಿ
ನೀಲಿಮದಿ ನೀರದಗಳ ನೆರೆಸಿ, ಸಲಿಲಸಮರಾಶಿಯನೇ ಸುರಿಸಿ,
ಅಪರಂಜಿಯೊಲಿಹ ಅಪ್ಸರೆಯನೇ ಅಪಹರಿಸಿ

ಛದ್ಮಸ್ಥ ಸುಳಿಯೊಳಗೆ ಸುಳಿವು ಕೊಡದಂತೋಡಿ ಮಾನಿನಿಯೊಡನೆ
ಮಾಯವಾಗಲೆಂದೆದುರು ನೋಡಿರಲು
ನಿರ್ಭೀತಿಯಲಿದ್ದ ನೀರೆಯರು, ಜೀವನಸ್ವರ್ಗದಿಂದಿಳಿದ ಜಲಜೆಯರು, ಜೀವದ
ಗೆಳತಿಯನು
ಕೀಕಟನೋರ್ವ ಕದ್ದೋಯ್ದನೆಂದು ಕನಲಿದರು, ಪ್ರಮಗಂಧನಿಗೆ
ಪ್ರತ್ಯುತ್ತರನೀಯಲಾಗದೇ ಪರದಾಡಿದರು.
ಅನಿತರೊಳು ಅನಿಮೇಷರೇ ಆಪತ್ಬಾಂಧವರಾಗಿ ಅಡಿಯಿಟ್ಟು ಅಸುರನ
ಅಂಗೈಯೊಳಿಹ ಆಪ್ತಸಖಿಯನು
ಕಾಪಾಡಿದೊಲು, ಕಾರ್ಮಣನೋರ್ವ ಉರ್ವಶಿಯನ್ನುಳಿಸಿ ಉನ್ಮಾದಿನಿಯರ
ಉರಿತಾಪವನಳಿಸಿರಲು
ಪುಷ್ಪೆಯರಾದ ಕಮಲಕನ್ನಿಕೆಯರೆಲ್ಲರೂ ಕುಮುದವದನದಿ ಮಲ್ಲಿಗೆಯ
ಮಂದಹಾಸವನು ಮೆತ್ತಿ,
ನೈದಿಲೆಯ ನೋಟದಲಿ ಕೇದಿಗೆಯ ಕಾಂತಿಯನೇ ಕೆತ್ತಿ, ಪದಹತಿಯೊಳಗೆ
ಪಾರಿಜಾತವನೇ ಬಿತ್ತಿ,
ಬನಶಂಕರಿಯರ ಬದುವಿನೊಳಗೆ ಬೆಳೆದ ಪುಷ್ಪೋದ್ಯಾನದ ಸುಮಸಹಸ್ರಗಳೆಲ್ಲವೂ
ಸಾಲಾಗಿ ಬಂದು
ಸಾನಿಧ್ಯವ ಸ್ವೀಕರಿಸಿದಂತೆ, ನಿಲಿಂಪರಾಜ್ಞಿಯರೆಲ್ಲರೂ ನಡೆದುಬಂದು
ನೃಪನೆದುರಾಗಿ ನಿಂತರು.
ಭಯದಿ ಬೆದರಿದ ಭಾಮಿನಿಯರ ಎದೆಗಳವು ಏದುಸಿರನಿಡುತ ಏಗುತೇಗುತ
ತೂಗಿತ್ತು.
ಭಾಸ್ಕರನ ಬೆಳಕಿನಲಿ ಬಿರುಗಾಳಿಯ ಭಾವನೆಯನು ಬರೆದು ಬೀಸುಬೀಸುತ
ಬೀಗಿತ್ತು.
ನಡೆತರುವಾ ನೀರನಾರಿಯರ ನಿಕರದೊಳಗಿಂದ ನೇರನುಡಿಯನಾಡಿದಳೋರ್ವ
ನಿರ್ಮಲೆ,
ಮುಗಿಲುಮೇಘದೊಳಗಿಂದ ಮಂಜುಮೇದಿನಿಯ ಮೇಲಿಳಿದು
ಮಾತನಾಡಿದಳವಳು ಮೇನಕೆ.
ಗಂಧರ್ವರ ಗೋಷ್ಠದೊಳಗೆ ಕಲಿತ ಕಾವ್ಯಕಲೆಯೆಲ್ಲ ಕಲೆತು ಕೂಡಿ
ಹಾಡಿದಂತಿತ್ತವಳ ಹೇಳಿಕೆ:

"ಓ ಪುರೂರವ ನೃಪನೇ, ನಿನ್ನೀ ಜಯಕೆ ಸಂದ ಸುಂದರಿಯನು ಎಲ್ಲಿಗೆ
ಕರೆದೊಯ್ಯುತಿರುವೆ?
ಒಡ್ಡೋಲಗದ ವೈಭವದೊಲು ವಿಜೃಂಭಿಸುತಿಹ ನಿನ್ನ ನೃಪಸದನದ ಸಾನಿಧ್ಯದಲಿ
ಸಿದ್ಧಪಡಿಸಿಹ
ಸ್ವರ್ಣಸಿಂಹಾಸನದಿ ಸಹೋದರಿಯಿವಳನ್ನು ಸ್ಥಾಪಿಸುವೆಯಾ? ವಿಜಯ
ವೀರೋತ್ಸಾಹಕೆ
ಒದಗಿದ ವಜ್ರವೆಂದಿದನು ವಲ್ಲೆನೆಂದರೂ ಒತ್ತಾಯವಾಗಿರಿಸಿಕೊಳ್ಳುವೆಯಾ?
ಅಮೃತಶಿಲೆಯಿಂದಾದ
ಶಿಲಾಬಾಲಿಕೆಯರೊಡನೀ ಜೀವವಿರುವವೀ ಜೀವನಾಂಬಿಕೆಯನೂ
ಜೀತದಾಳಾಗಿರಿಸಿಕೊಳುವೆಯಾ?
ಮುಚ್ಚಿದ ಮಹಾದ್ವಾರದ ಭಿತ್ತಿಬಂಧನದ ಭದ್ರತೆಯೊಳಗೆ ಶುದ್ಧತೆಯನು
ಸೆರೆಹಿಡಿಯುವೆಯಾ?
ಒನಪು–ವೈಯಾರವಿಡುವ ವಾರಾಂಗನೆಯರಾ ವಾಡೆಯೋಳಗವಳನು
ಕೂಡಿಹಾಕುವೆಯಾ?
ಒಪ್ಪೊತ್ತಿನಾಸೆಗೆ ಒತ್ತೆಯಾಳಾಗಿರಿಸಿಕೊಳುವೆಯಾ? ವರ್ಣರಹಿತದಲಿ
ಸ್ವರ್ಣಸಹಿತವನು ಸೂತ್ರಗೊಳಿಸುವೆಯಾ?
ಬೇಡ! ಪ್ರತಿಷ್ಠಾನಾಧಿಪತಿಯಾಗಿ ಪ್ರಜೆಗಳನು ಪೊರೆವ ಪುಣ್ಯಕಾರ್ಯದಲಿ
ಪೂರ್ಣತೆಯ ಪಡೆಯಬೇಕೆಂದರೆ,
ನಮ್ಮ ಸಹೋದರಿಯ ನಮಗೆ ಒಪ್ಪಿಸಿಬಿಡು! ನಿನ್ನ ದಾರಿಯೊಳು ನೀ ನಡೆದುಬಿಡು!
ನಮ್ಮೀ ನುಡಿಯ ನಡೆಸಿಕೊಡು!"
ಎಂದೆನುತ ಮಂದಸ್ಮಿತದ ಮಾಧುರ್ಯವನಿತ್ತ ಮೇನಕೆಯ ಮಾತಿಗೆ ತಲೆಬಾಗಿ
ತನ್ನ ತೋಳಿನಲಿಹ
ಅಪ್ಸರೆಯನು ಅವನೀತಲಕಿಳಿಸಿ, ಅವರಂಕೆಗೊಪ್ಪಿಸಿ, ಅರಸನವ
ಅನಿಶ್ಚಿತತೆಯೊಳಗೆ ಅವುಡುಗಚ್ಚಿರಲು,
ದಿವ್ಯನುಡಿಯನಾಡುವ ತಿಲೋತ್ತಮೆಯ ತೀರ್ಥವಾಣಿಯದು ತೆರೆತೆರೆಯಾಗಿ
ತಳ್ಳಂಕವಿಡಿದಿತ್ತು:
ನೃಪನಿಗವನ ಕರ್ತವ್ಯಪ್ರಜ್ಞೆಯ ಪುನರುಚ್ಚರಿಸುವ ಪ್ರಿಯನುಡಿಗಳನದು
ಪಡೆನುಡಿದಿತ್ತು:

"ಓ ನೃಪನೇ, ಮರ್ತ್ಯವಿದು ಮನೋಮಯಕಿಂತ ಮಿಗಿಲಿಹಿದು!
ದೇವಜೀವನವದು ನಿಂತನೀರಂತೆ! ಆರೆತ್ತರಕೇರದು, ಮೂರೆತ್ತರಕಿಳಿಯದು.
ನಿಯತಿ ನೀಲಿಮದಿ ನೆಟ್ಟ ನೂರ್ಮೈಲಿಗಲ್ಲಿನಲಿ ನಾಕವದು ನಿತ್ರಾಣವಿಹುದು
ಪರಿವರ್ತನೆಯೆಂದೂ ಪದವಿಟ್ಟು ಪರಂಧಾಮವನು ಪುನರುಜ್ಜೀವನಗೊಳಿಸದು.
'ತ್ರಿದಶಃ'ರ ಪರಿಧಿಯೊಲು ತೂರಿಕೊಂಡು ತಟಸ್ಥರಿಹರವರು ತಾರಾನಿಚಕ್ಷರರು.
ಮೂರುಮೂವತ್ತರ ಮಳೆಗಾಲ ಮಂಡಲದೊಳಗೆ ಮುದುಡಿಕೊಂಡಿಹರವರು
ಮುಕ್ಕೋಟಿಗಳು.
ಪ್ರಸೃಷ್ಟಿಯಾದಿಯಿಂದ ಪ್ರಲಯದಂತ್ಯದೊರೆಗೂ ಪ್ರಾಕ್ತನಪಿತರಾಗಿಯೇ
ಪವಡಿಸಿಹರವರು.
ಶಕ್ತಿಯ ಸೂನುಗಳಾದ ಸುಮನಸರ ಶಕ್ತಿಯೊಳು ವ್ಯತ್ಯಯವಿರದು, ಭುಕ್ತಿಯೊಳು
ಪ್ರತ್ಯಯವಿರದು.
ಅಮರವಿಹ ಅಮೃತಪುತ್ರರುಗಳವರು ಹಿಂದಿದ್ದಂತೆ ಇಂದಿರುವರು, ಇಂದಿದ್ದಂತೆ
ಮುಂದಿರುವರು.
ಆದರೆ, ಮಾನವರಂತಲ್ಲ! ಕಬ್ಬಿಣದ ನೂರೊಂದು ಭಿತ್ತಿಯ ಮುರಿದು
ಮುನ್ನುಗ್ಗುವರವರು.
ಸ್ವಪ್ನದಲೂ ಸಿಗದಿರುವ ಸ್ವರ್ಣದ್ವೀಪವನರಸಿ ಸಿದ್ಧಾಳುವಾಗಿ ಸಮುದ್ರಕಿಳಿವ
ಸಾಹಸಿಗಳಿಹರು.
ಮಡಿದ ಮಣ್ಣೊಳಗಿಂದ ಮೇಲೇರಿ ಮಹಾಕಾರಣಾದಿ ಮಂಡಲಗಳನಾಳುವ
ಮಹಿಮಾನ್ವಿತರಿಹರು.
ಸಿದ್ಧಿಯ ಸೂತ್ರವನಿಡಿದು ಸಿಕ್ಕಸಿಕ್ಕೆಡೆಯಲೆಲ್ಲ ಸುಳಿದು ಸಾಧನೆಯ ಶಿಖರಕೇರುವ
ಸಾಧಕರಿಹರು.
ಅನುಭವಜನ್ಯದಿ ಅಜ್ಞಾನವು ಅಳಿದು, ಅಂತರ್ಯಜ್ಞದಿ ಅವಧಿಜ್ಞಾನವು
ಅವತರಿಸಿರಲು,
ಅನ್ನಮಯದ ಅಗ್ನಿಪುರುಷಂಗೆ ಅಂಗೈಯಗಲದ ಕಾರ್ಮಣವ ಕೊಡುಗೆಯಾಗಿತ್ತು,
ಮರುತಾದಿ ವಾಯುವಕ್ತಾರರ ಪಂಜರದೊಳಗಿಂದ ಪ್ರಾಣಪಕ್ಷಿಯಿದು
ಪಲಾಯನಗೈಯ್ವುದು.
ಮಾನಸವನೆ ಕಾಲಕಸದಂತೆ ಕಡೆಗಣಿಸುವುದು, ನಿತ್ಯ–ನಿಲಿಂಪರನೇ ನಿಂತು
ನಿರ್ಲಕ್ಷಿಸಿವುದು.

ಅಂತರಾತ್ಮಾಯನದ ಅಂತಸ್ತಿನೊಳಗೆ ಭದ್ರವಿಹ ಭೂತ–ಭವಗಳನೊಮ್ಮೆ
ಭೇಟ್ಟಿಯಾಗಿ ಬಿಟ್ಟೋಡುವುದು.
ವಿಜ್ಞಾನಮಯದ ವಜ್ರಶೃಂಗದಿ ಒಂದಾಗಿ ಒರಗಿರುವ ಪ್ರಕೃತಿ–ಪೂರುಷರ
ಪದಕೆ ಪೊಡಮಟ್ಟುವುದು.
ಸಹಸ್ರಸ್ತಂಭದ ವಾರುಣಮಂದಿರದಿ ಒಬ್ಬೊಂಟಿಗನಾಗಿ ಸುತ್ತಿ ಸೂರ್ಯಪ್ರಾಂಗಣದಿ
ಸುಳಿಯುವುದು.
ಬಂಗಾರದ ಮುಚ್ಚಳವನು ತೆರೆದು ನವ್ಯಗೋಲಗಳಂಕರಿಸುವಾ ಗೋಲೋಕದಲಿ
ಗಿರಕಿಸುತ್ತುವುದು.
ಅಂತಿಮದಿ ಜಂಗಮವಿದು ಸ್ಥಾಣುವಿನಲಿ ಸ್ಥಾಯಿಯಾಗಿ ತ್ರಿಧಾತುಧಾಮಕೆ
ಪ್ರಮಾತೃವಾಗುವುದು.
ಸಪ್ತಧಾಮದಲಿ ಸಾಕ್ಷಾತ್ಕರಿಸಿಕೊಂಡ ಸಿದ್ಧಿಗಳೆಲ್ಲ ಸೂತ್ರದಲಿ ಹೆಣೆದು ಸಾಮರ್ಥ್ಯವ
ಸೃಜಿಸಿರಲು,
ಮಾನವನಿವನು ಮಾಧವನಾಗಿ ಮೆರೆಯಬಲ್ಲನು! ಪುರುಷನಿವನು ಪೂರುಷನಾಗಿ
ಪ್ರವರ್ತಿತನಿರಬಲ್ಲನು!
ಆತ್ಮಾನುಭೂತಿಯೇ ಅಂತರ್ವಿಕಸನಕೆ ಅಡಿಪಾಯವಿರಲು, ವಿಭೂತಿಯಿವನು
ವಿರಾಟನಾಗಿ ವಿಜೃಂಭಿಸಬಲ್ಲನು!
ಮೂಲಾಧಾರದಿ ಮೂರುವರ್ತಲವಾಗಿ ಮಲಗಿರುವ ಕನ್ಯಾಕುಮಾರಿಯಾಂತು
ಕುಂಡಲಿನಿಯವಳು
ಧ್ಯಾನದಿಂಪ್ರೇರಿಸಿರೆ ಸರ್ಪಜಾಗೃತಳಾಗಿ ಸರಿಯುವಳು, ಏಳುನಾಗರದ
ಹೆಡೆಯಾಡಿಸಿ ಹೊರಡುವಳು,
ಸಪ್ತಚೇತನಳಾಗಿ ಸಪ್ತರಂಧ್ರಗಳಲಿ ಸುತ್ತಿ ಸುಳಿಯುವಳು, ಸಪ್ತಪದಿಯನಿಟ್ಟು
ಸುಪ್ತನಿಧಿಗಳನೇ ಸೆಳೆಯುವಳು,
ಸಹಸ್ರಾರದ ಶಿವನನು ಸೇರುತಲೇ ಸಹಸ್ರದಲಕಮಲದೊಳು ಗೌಪ್ಯನಿಧಿಯಾಗಿಹ
ಗಂಗೆ–ಗೌರಿಯೆನಿಸುವಳು.
ಕೆಳಗುಮೇಲಾಗುತಿಂತು ಕುದಿಯುತಿಹ ಕುಂಡಲಿನಿಯ ಕಾವಿನೊಳಗಿಂದ
ಕಂಡರಿಸಿದ ಆಂತರ್ಯದಗ್ನಿಯಿಂದ
ಯಾರು ತಮ್ಮ ತನುವಿನೊಳು ತೂರಿಕೊಂಡಿಹ ಅಪ್ರಕೇತದ ಅನೃತವನು
ಹಿಡಿಸಾಧುಗೊಳಿಸುವರೋ,

ಯಾರು ತಮ್ಮ ನಾಲ್ದಿಶೆಗಳಲಿ ನಲಿವು–ನಂಟಿನ ನೂರೆಂಟು ನಾಕವ ನೆರೆಸುವರೋ,
ಯಾರು
ಶಾಂತಿ–ಸಮನ್ವಯದ ಆನಂದೋಧದಿಯನೇ ಕರೆದು ವಲಯವನು
ವಂದನೀಯವಾಗಿಸುವರೋ,
ಅವರೇ, ಸಂವತ್ಸರವಿಡಿ ಸಾವಿರದ ಸುಗ್ಗಿಯ ಸುರಿವ ಸೂರ್ಯಕಾಂತಿಯ
ಸೊಂಪಾಗಿಹರು.
ವಿವಸ್ವತನ ಜ್ಯೋತಿಯು ಹೊರಳಿದೆಡೆ ಹೊರಳುವ ಸೂರ್ಯಪಾನದ
ತೋಪಾಗಿಹರು.
ಮಾನವತೆಯಲ್ಲಿ ಮಹಾಕಾರಣದೈತ್ಯವನೇ ಧರಿಸುತಿಳಿಸುವ ದಿವ್ಯ ದ್ರಷ್ಟಾರರಿಹರು:
ಅವರೊಲಂತೆ ನೀನಿರುವೆಯಿಲ್ಲಿ, ನರಕದೊಳು ನಾಕವನಿಳಿಸುವ ನರನೇಕೈಕನಿಲ್ಲಿ.
ಮನುಜ–ಮಾನಸರ ಮಧ್ಯೆ ಮಾಧುರ್ಯವ ಮೆರೆಯಿಸುವ ಓ ಏಕಾಂಗಿ
ಮಾನವನೇ,
ಮೂಲೋಕಗಳೇ ಮೆಚ್ಚಿ ಮನದೂಗುವ ಮಹಾಕಾರ್ಯವೊಂದನಿಂದು
ಮಾಡಿರುವೆ.
ಪ್ರಸೃಷ್ಟಿಯಾದಿಯಲಿ ಪ್ರಥಮಾನುಷರಾದ ಸೃಷ್ಟಿ ಸಾಮ್ರಾಟರನೇ ಸಾವಿನಿಂದ
ಸಂರಕ್ಷಿಸಿರುವೆ.
ಮಹಾಕಾರಣದಿ ಮೆರೆವ ಮಹಾಮಾನಸರನೇ ಮರಣಕೂಪದೊಳಗಿಂದ
ಮೇಲೆತ್ತಿರುವೆ.
ಅಧಿಮಾನಸದಿ ಅನಿಮೇಷರಾಗುತಲೆವ ಆದಿತ್ಯರ ಅವಸಾನವನೇ ಅಲ್ಲಗಳೆದಿರುವೆ.
ಲೀನವಾಗಲಿಹ ಲೋಕಪಾಲಕರೊಡನೆ ಲಕ್ಷಾವಧಿಯ ಲೋಕಗಳನೇ ಲಾಲಿಸಿರುವೆ,
ನಿಯಂತೃವಿನಡಿಯಲಿ ನರಳಿ ನಂದುತಿಹ ನಕ್ಷತ್ರಗಳನೇ ನಂದಾದೀಪವಾಗಿ
ನಲಿಸಿರುವೆ.
ಆದರೆ, ಅವಳಿಲ್ಲದ ಅಲೋಕಾಕಾಶವಿಂದು ಅಂಧಕಾರದ ಮುಸುಕಿನೊಳು
ಮುನ್ನುಗ್ಗಬಹುದು,
ಅಗ್ನಿಯೆಡೆ ಅಧಿರೋಹಿಸಬಹುದು, ಆದರವುಗಳ ಬದುಕುವ ಮಾರ್ಗವೇ
ಮುಕ್ತಾಯಗೊಳ್ಳುವುದು.
ಮುಚ್ಚಿದ ಮುಷ್ಟಿಕೆಯೊಳು ಮೃತಪ್ರಾಯವಾಗಿ ಮಡಗಿರುವ ಮೃತಾಂಡವದು
ಮೈಗಳೆದು

ಮಾರ್ತಾಂಡನಾಗಿರಲು, ಸಪ್ತಾದಿತ್ಯರೊಡನೆ ಅಷ್ಟಾದಿಶನಿವ ಅಂಶಾವತಾರವಾಗಿ
ಅಡಿಯಿರಿಸಿರಲು,
ಘನಮನ–ಶ್ರೀಮನಗಳ ಸೂತ್ರಧಾರರುಗಳೆಲ್ಲ ಸ್ವರ್ಣಲೋಕಗಳಿಂದ ಸುಳಿದೀಚೆ
ಸರಿದು
ಶ್ಯಾಮಲಸೂರ್ಯನನು, ಶ್ರಾವಣದುದಯಭಾಸ್ಕರರನು ಸಪ್ತಾಶ್ವನಿಯುಕ್ತ
ಸವಿತೃವಾಗಿಸಿ
ಸಂಭೂತಿ–ಅಸಂಭೂತಿಗಳನು ಸಮೀಕರಿಸುವ ಸಮಷ್ಟಿಸಾರೋದ್ಧಾರನೆಂದು
ಸಮ್ಮಾನಿಸುತ
ಸೌರಲೋಕದ ಸಹನಾಗರೀಕತ್ವವನು ಸಾದರಪಡಿಸಿ, ಆದಿತ್ಯಲೋಕದ
ಅಮರನಿವಾಸಿಯಾಗಿಸಿರಲು,
ಅಂಗಾರ ಪಿಂಡದೊಳಗಿಂದ ಬಂಗಾರ ಚೆಂಡಾಗುತೊಗೆತಂದಾ
ಮನುಕುಲದಾತ್ಮಪುರುಷನೊಲಂತೆ
ಅಂತಃಸ್ಫುರಣದ ಅಧಿದೈವತಗಳಿಹ ಅಧಿಮಾನಸದಿ ಆಸೀನನಿರಲೆಂಬ
ಅಭೀಪ್ಸೆಯಲಿರುವೆ.
ಸಹಸ್ರಸ್ತಂಭದ ವಾರುಣಮಂದಿರದ ಸೂರ್ಯಪ್ರಾಂಗಣದಿ ಸುಳಿದು
ಸುಪ್ಪತ್ತಿಗೆಯನೇರ್ವ ಸುವ್ವಿಗೆಯಲಿಹೆ.
ಘನಮನದ ಗಂಭೀರಾಂಬುಧಿಯೊಳು ಗಮಿಸಿ ಗಂಧಮಾದನವನೇರ್ವ
ಗಾಳಿಗೋಪುರವನಿಟ್ಟಿರುವೆ.
ಕಶೇರುಕಾರ್ಮಣನಾಗಿ ಕಾರಣಮಯಕೇರುವ ಕವಿಗನಸನೊಂದ ಕೆತ್ತಿ
ಕಲ್ಪಿಸಿರುವೆ. ಆದರೆ, ಆ
ಪರಂಜ್ಯೋತಿಪುರದ ಪ್ರಜೆಯಾಗವ ಪುಣ್ಯಕಾರ್ಯದಲಿ ಪಣ್ಯನಾಗುವೆ!
ನಗಣ್ಯನಾಗುವೆ!
ಸವಿತೃಸಾಮ್ರಾಜ್ಯದ ಸಹಬಾಳ್ವೆಯ ಹೊಂದುವ ಹುನ್ನಾರದಲಿ ಹುಳು
ಹುಪ್ಪಟೆಯಾಗುವೆ!
ಆದರ್ಶಮನದ ಅಧಿಪತಿಯಾಗಲೆಂದು ಅಡಿಯಿಟ್ಟು, ಅಂಧಕಾರದ
ಅಂತಸ್ತಿನೊಳು ಅವ್ಯಕ್ತನಾಗುವೆ!
ಪಾರವಿರದ ಪುಣ್ಯಲಾಭದ ಪ್ರತೀಕ್ಷೆಯಲಿ, ಪಾಪಕೂಪದ ಹಳವಂಡಕಿಳಿದು
ಹಾನಿಗ್ಲಾನಿಗೊಳಗುವೆ!

ಅದಕಿಂತು ಕೇಳಿಲ್ಲಿ ಓ ನೃಪನೇ! ಸೌರಮಂಡಲದಿ ಸಪ್ತಾದಿತ್ಯರ ಸಹಪಂಜ್ತಿಯ
ಸೇರಬಯಸಿರೆ,
ಭೋಗದ ಬೆನ್ನೇರುವದನು ಬಿಟ್ಟು, ತ್ಯಾಗದ ತೇರನೇರುತ ತೆರಳು. ಮುಕ್ತಿಪಥವು
ನಿನ್ನದಿದೆ.
ಬಟ್ಟಬಯಲಿನೊಳು ನೆಟ್ಟ ನೂರಡಿಯ ಕಂಬಕೆ ನೂರಾರು ಕನಸುಗಳ ಕಟ್ಟಿಗೆಯ
ಕಟ್ಟಿ,
ದುಃಖ–ದುಮ್ಮಾನವೆಂಬ ಆರಾಳು ಮಣ್ಣನು ಮೇಲೆತ್ತಿ, ಕನಸು–ಕಲ್ಪನೆಯ
ವಜ್ರಗಾರೆಯ ಒತ್ತಿ,
ಗೋಡೆ ತಳಪಾಯಗಳನೆಲ್ಲ ತನುರಾಶಿಯೊಳಗಿಂದ ತಂದೊಟ್ಟಿ, ನಲಿವೆಂಬ
ನೆಲಹಾಸನು ಮೆಟ್ಟಿ,
ಭಾವನೆ–ಬಾಂಧವ್ಯಗಳ ಬಣ್ಣಗಳ ಬೆರೆಸಿಯೊರೆಸಿರೆ ಸಿದ್ಧವಿಹುದದು
ಸಾವಿರಗಂಬದ ಶಿಲಾಸೌಧ!
ನಿರ್ಮಾಣದಲಿ ನೂರು ನೃಪಕುಲಗಳು ನರಳಿದವು, ಸಹಸ್ರ ಸ್ವರ್ಣಯುಗಗಳು
ಹೊರಳಿದವು.
ಆದರೂ ಅಬೇಧ್ಯವಿಹ ಅಂತಸ್ತುಗಳರಮನೆಯದು ಅಬಾಧಿತವಿಹುದು,
ಅನಾಮಿಕವಿಹುದು.
ಮೊಗ್ಗೆಯದು ಮಲ್ಲಿಗೆಯಾಗಲು ಕಾಲರಾಯನ ಕೈಯೊಳು ಕುಳಿತಾಡಿರಬೇಕು.
ಮಾವದು ಮಾಗಿ ಮರದಿಂದುದುರಲು ಸಮಯದ ಸೂತ್ರದಲಿ ಸುಳಿದಾಡಿರಬೇಕು.
ಅದರೊಲಂತೆ, ಅಲ್ಪಗಾಮಿಯಾದರೂ ಅಂತ್ಯವಿಲ್ಲದ ಅನಂತೈಶ್ವರ್ಯದ
ಅಧಿನಾಯಕ ನೀನಿರು.
ಕೂರ್ಮದೋಪಾದಿಯಲಿ ಕೂರ್ಮೆಗೊಳುತಿಹ ಕಾರ್ಮಣದ ವಿಧಿಯ
ವೀಥಿಯನು ವರ್ಜಿಸದಿರು.
ನಿರ್ವೇಗದಲಿದೆಯೆಂದು ನಿಧಿನಿಕ್ಷೇಪವದನು ನಿರ್ಲಕ್ಷಿಸದಿರು.
ನಿಧಾನವಿಹುದೆಂದನು ನಿವೃತ್ತಿಗೊಳಿಸದಿರು.
ಮಂದವಾಗಿ ಮಾಗುತಿಹ ಮರ್ತ್ಯವಿಧಿಯನ್ನು ಮರೆತು ಮುಂದೋಡದಿರು.
ಮಾಣಿಕ್ಯವೆಂದದನು ಮುಡಿಗೇರಿಸಿಕೊಂಡಿರು.

(ಸಶೇಷ)



ಫೋಟೊ: ಇಮೇಜಿಂಗ್ ಸಾವಿತ್ರಿ

ತತ್–ದೀಪ್ತಿತೇಜದಾ ಚಂದ್ರಹಾಸವದು ಕೊರೆದು ನನ್ನ ಮನವು,
ತತ್–ಪೂರ್ಣ ಶುಭದ ಮಂಗಲದಿ ರೂಹುಗೊಂಡಿರುವ ಎನ್ನ ಹೃದಯ,
ನನ್ನ ಜೀವನವು ಪರಮನಾ ಕೃಪೆಯ ತಾರೆ–ಹುಡಿ–ಉಲ್ಕೆ ತಾನು.

**– ಶ್ರೀ ಅರವಿಂದರು**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಅವನ ಚಿತ್ಕೇಂದ್ರ ತಾನುಳಿಯದೀಗ ಮೃಣ್ಮಯದ ಬಂಧದೊಳಗೆ;
ಮೌನವನು ದೃಷ್ಟಗೊಳ್ಳುವಾ ಬಲವು ಅವನಂಗ ತುಂಬಿ ಹೀಗೆ;
ನಿಶ್ಶಬ್ದಪೂರ್ಣ ಪರಿಶುಭ್ರ–ಶ್ವೇತ ಅನುಭೂತಿ ತುಂಬಿ ಬಂದ
ರೂಪಗಳ ಮೀರಿ ಸಾರೂಪ್ಯಗೊಳುವ ಅದು ಕಾಣ್ಕೆಯೊಡನೆ ಛಂದ

ಜೀವನವ ಮೀರಿ ಸಂಜೀವನದಾ ನಿತ್ಯತ್ವದೊಳಗೆ ಸಂದು
ಈ ಸರ್ವವನ್ನು ಧರಿಸಿರುವ ಚಿರದ–ಚೇತನಕೆ ಸನಿಹಗೊಂಡು.

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 7 ಪುಟ 207)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.